ಐಕ್ಯರಂಗ


ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 16-17 ಏಪ್ರಿಲ್ 12-25 1999 ರೂ. 2.00

ಕೊನೆಗೂ ದೇಶಕ್ಕಂಟಿದ ಪೀಡೆ ತೊಲಗಿತು

ಅಂದು ಹದಿಮೂರು ದಿನ - ಈ ಬಾರಿ ಹದಿಮೂರು ತಿಂಗಳು



ಕಳೆದ ಮಾರ್ಚ್ 19 ರಿಂದ ಒಂದು ವರ್ಷದಷ್ಟು ಕಾಲ ವಿನಾಶಕಾರಿ ಆಡಳಿತ ನಡೆಸಿದ ಬಿಜೆಪಿ ನೇತೃತ್ವದ ಸರ್ಕಾರ ಕೊನೆಗೂ ಏಪ್ರಿಲ್ 17 ರಂದು ಪತನಗೊಂಡಿದೆ. ಈ ಮೊದಲು ಹದಿಮೂರೇ ದಿನಗಳಲ್ಲಿ ನೆಲಕಚ್ಚಿದ್ದ ವಾಜಪೇಯಿಯವರ ಸರ್ಕಾರ ಈ ಬಾರಿ ಕೂಡ 13 ತಿಂಗಳುಗಿಂತ ಹೆಚ್ಚು ಬಾಳುವುದಿಲ್ಲ, ತನ್ನ ಆಂತರಿಕ ಕಚ್ಚಾಟಗಳ ಭಾರದಿಂದಲೇ ಕುಸಿದುಬೀಳುತ್ತದೆ ಎಂದು ಎಡಪಕ್ಷಗಳು ಹೇಳಿದ್ದವು. ಅದೀಗ ನಿಜವಾಗಿದೆ. ಕೊನೆಗೂ ಪೀಡೆ ತೊಲಗಿತೆಂದು ದೇಶ ಪ್ರೇಮಿ, ಜಾತ್ಯಾತೀತ ಶಕ್ತಿಗಳು ನಿಟ್ಟುಸಿರು ಬಿಡುವಂತಾಗಿದೆ.

ಈ ಸಮ್ಮಿಶ್ರ ಸರ್ಕಾರಕ್ಕೆ ಸದನದಲ್ಲಿದ್ದದ್ದು ಕೇವಲ 7 ಬಹುಮತ. ಚೌತಾಲರ ರಾಷ್ಟ್ರೀಯ ಲೋಕದಳ ಬೆಂಬಲ ಹಿಂತೆಗೆದುಕೊಳ್ಳುವುದಾಗಿ ರಾಷ್ಟ್ರಪತಿಗಳಿಗೆ ತಿಳಿಸಿದ ಮೇಲೆ ಅದು 3 ಕ್ಕೆ ಇಳಿಯಿತು. ಎ.ಐ.ಎ.ಡಿ.ಎಂ.ಕೆ. ಬೆಂಬಲ ಹಿಂತೆಗೆದುಕೊಂಡಾಗ ಬಹುಮತಕ್ಕೆ 15 ಕಮ್ಮಿಯಾಗಿ ಸರ್ಕಾರ ಅಲ್ಪಮತಕ್ಕೆ ಇಳಿಯಿತು. ಆಗಲೇ ನೀತಿ - ಮೌಲ್ಯಗಳ ಬಗ್ಗೆ ಕವನ-ಭಾಷಣಗಳನ್ನು ಕುಟ್ಟುವ ಅಟಲ ಬಿಹಾರಿ ವಾಜಪೇಯಿಯವರು ರಾಜೀನಾಮೆ ನೀಡಬೇಕಾಗಿತ್ತು; ನೀಡಲಿಲ್ಲ. ರಾಷ್ಟ್ರಪತಿಗಳು ವಿಶ್ವಾಸಮತಗಳಿಸಲು ಹೇಳಿದಾಗ ನಿರ್ವಾಹವಿಲ್ಲದೆ ಏಪ್ರಿಲ್ 15 ರಂದು ಲೋಕಸಭೆ ಅಧಿವೇಶನ ಆರಂಭವಾದಾಗ ವಿಶ್ವಾಸ ಸೂಚನೆ ಮಂಡಿಸಬೇಕಾಯಿತು.

ಬಹುಮತ ಸಾಬೀತು ಪಡಿಸಲು ಇನ್ನೂ 15 ಮಂದಿಯನ್ನು ಹುಡುಕಬೇಕಾಗಿದ್ದರೂ ವಾಜಪೇಯಿಯವರೂ ಸೇರಿದಂತೆ ಬಿಜೆಪಿ ಮುಖಂಡರು ತಮಗೆ ಖಂಡಿತಾ ಬಹುಮತ ಸಿಗುತ್ತದೆ ಎಂದು ಹೇಳಿಕೊಳ್ಳಲಾರಂಭಿಸಿದರು. ಅವರ ಈ ಆಶಾವಾದಕ್ಕೆ ಇದ್ದ ಆಧಾರ ಒಂದೇ - ಅದೆಂದರೆ ಕುದುರೆ ವ್ಯಾಪಾರ. ಇದಕ್ಕೆ ಇವರ ಬಳಿ ಸಾಕಷ್ಟು ಹಣವೂ ಇದೆ. ಕಳೆದ ಒಂದು ವರ್ಷ ಅವಧಿಯಲ್ಲಿ ಅವರು ಮಾಡಿದ್ದು ಇದೇ ತಾನೇ - ವ್ಯಾಪಾರಿಗಳನ್ನು, ಕಳ್ಳ ದಾಸ್ತಾನುಗಾರರನ್ನು, ಉದ್ದಿಮೆದಾರರನ್ನು-ಒಟ್ಟಾರೆಯಾಗಿ ಎಲ್ಲಾ ಹಣದ ಥೈಲಿಗಳನ್ನು ಓಲೈಸಿದ್ದು ! ಈ ಮೊದಲೇ ಉತ್ತರ ಪ್ರದೇಶದಲ್ಲಿ ಎಲ್ಲಾ 70 ಪಕ್ಷಾಂತರಿಗಳಿಗೆ ಮಂತ್ರಿ ಪದವಿ ನೀಡಿ ರಾಜ್ಯದ ಬೊಕ್ಕಸವನ್ನು ಬರಿದು ಮಾಡಿದ ಪರಿಣತರು ತಾನೆ? ನಿರೀಕ್ಷೆಯಂತೆ ಈ ಅನುಭವವನ್ನು ಅವರು ದಿಲ್ಲಿಯಲ್ಲಿಯೂ ಕಾರ್ಯರೂಪಕ್ಕೆ ಇಳಿಸಿದರು. ತಾವು ವಿಶ್ವಾಸ ಮತಪಡೆಯದಿದ್ದರೆ ಚುನಾವಣೆ ಖಂಡಿತ ಎಂದೂ ಬೆದರಿಸಲಾರಂಭಿಸಿದರು. ಬೆಂಬಲ ವಾಪಾಸ್ಸು ತೆಗೆದುಕೊಂಡಿದ್ದ, ಮತ್ತೆ ಮತ್ತೆ ತನ್ನ ವಿರೋಧವನ್ನು ಪುನರುಚ್ಚರಿಸಿದ ಚೌತಾಲ ಕೊನೆಗೂ ತಿಪ್ಪರಲಾಗ ಹಾಕಿದಾಗ ಅವರಿಗೆ ಇದರಲ್ಲಿ ಮೊದಲ ಯಶಸ್ಸು ದೊರೆಯಿತು. ಡಿ.ಎಂ.ಕೆ.ಯು ತನ್ನ 6 ಮತಗಳು ವಾಜಪೇಯಿಯವರ ಕೈಂಕರ್ಯಕ್ಕೆ ಇವೆ ಎಂದು ಸಾರಿತು. ಲೋಕಸಭೆಯಲ್ಲಿ ಚರ್ಚೆಯಲ್ಲಿ ಬಿಎಸ್‌ಪಿಯ ಮುಖಂಡರು ತಮ್ಮ ಪಕ್ಷವು ಗೈರು ಹಾಜರಾಗುತ್ತದೆ ಎಂದಾಗ ಈ ಬಿಜೆಪಿ ಮುಖಂಡರು ದಿಲ್ಲಿಯಲ್ಲಿಯೂ ಉತ್ತರ ಪ್ರದೇಶದ ಪುನರಾವರ್ತನೆ ಆಗಿಯೇ ಬಿಟ್ಟಿದೆ ಎಂದು ಬೀಗಿದರು. ಆದರೆ ಅವರ ಶತ ಪ್ರಯತ್ನವೂ ಫಲಕೊಡಲಿಲ್ಲ. ತನ್ನ ಅಳಿದುಳಿದ ವಿಶ್ವಾಸಾರ್ಹತೆಯನ್ನು ಕಳಕೊಂಡು ವಾಜಪೇಯಿ ಸರ್ಕಾರ ಪತನಗೊಂಡಿತು.

ಬಿಜೆಪಿ ಸರ್ಕಾರದ ಈ 13 ತಿಂಗಳ ಆಡಳಿತ ದೇಶಕ್ಕೆ ಮತ್ತು ಜನತೆಗೆ ಒಂದು ದೊಡ್ಡ ಅನರ್ಥವನ್ನೇ ತಂದ ಅವಧಿ. ಸಮರ್ಥ ಪ್ರಧಾನಿಯಡಿ ಸುಭದ್ರ ಸರ್ಕಾರ ಎಂಬ ಮಾತಂತೂ ಎಂದೋ ಮರೆಯಾಗಿತ್ತು. ಜೊತೆಗೆ ಈ ಸರ್ಕಾರದ ನೀತಿಗಳು ಪ್ರತಿಯೊಂದು ಕ್ಷೇತ್ರದಲ್ಲಿಯೂ ಭಾರತೀಯ ಜನಗಳ ಬದುಕನ್ನು ಇನ್ನಷ್ಟು ಶೋಚನೀಯಗೊಳಿಸಿದವು, ದೇಶದ ಹಿತಾಸಕ್ತಿಗಳಿಗೆ ಭಾರೀ ದಕ್ಕೆ ತಂದವು. ಇವೂ ಸಾಲದು ಎಂಬಂತೆ ಈ ಸರ್ಕಾರದ ನೇರ ಪೋಷಣೆಯಡಿ ಕೋಮುವಾದಿ ಶಕ್ತಿಗಳು ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯಮೇಲೆ ಸತತ ಧಾಳಿ ನಡೆಸಿದವು. ಈ ಕೆಟ್ಟ ಸರ್ಕಾರದಿಂದ ಮುಕ್ತಿ ಬಯಸುತ್ತಿದ್ದ ಜನತೆ ಕೊನೆಗೂ ಈಗ ಹಾಯಾಗಿ ನಿಟ್ಟುಸಿರು ಬಿಡುತ್ತಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಆಗಿರುವ ಈ ಸೋಲನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸ್ವಾಗತಿಸಿದೆ.

ಒಂದೆಡೆ ಬಿಜೆಪಿ ಸರ್ಕಾರ ರಾಷ್ಟ್ರೀಯ ಐಕ್ಯತೆಗೆ ಒಡ್ಡಿರುವ ಅಪಾಯ, ಇನ್ನೊಂದೆಡೆ 3 ವರ್ಷಗಳಲ್ಲಿ 2 ಚುನಾವಣೆಗಳನ್ನು ಕಂಡ ಜನಗಳ ಬೇಸರ- ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪರ್ಯಾಯ ಸರ್ಕಾರ ರಚಿಸಲು ಮುಂದೆ ಬಂದರೆ ವಿಷಯ-ಆಧಾರಿತ ಬೆಂಬಲ ನೀಡುವುದಾಗಿ ಎಡಪಕ್ಷಗಳು ಸ್ಪಷ್ಟಪಡಿಸಿದ್ದವು. ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಸರಕಾರವನ್ನು ಸೇರಲಂತೂ ಸಾಧ್ಯವಿಲ್ಲ, 3 ನೇ ಪರ್ಯಾಯವನ್ನು ಬೆಸೆಯುವ ಹೋರಾಟವನ್ನು ಬಿಡಲೂ ಸಾಧ್ಯವಿಲ್ಲ. ಏಕೆಂದರೆ ದೇಶದ ಭವಿಷ್ಯದ ದೃಷ್ಟಿಯಿಂದ ಇದು ಅತ್ಯಗತ್ಯ. ಬಿಜೆಪಿ ತಲೆತಗ್ಗಿಸಿಕೊಂಡು ಅಧಿಕಾರದಿಂದ ಇಳಿದ ನಂತರದ ಪರಿಸ್ಥಿತಿ ಕೇವಲ ತಾತ್ಕಾಲಿಕ, ಅದು ಮೂರನೇ ಪರ್ಯಾಯದ ಅಗತ್ಯವನ್ನೇನೂ ಇಲ್ಲವಾಗಿಸುವುದಿಲ್ಲ ಎಂದು ಈ ಹಿಂದೆಯೇ ಸುರ್ಜಿತ್‌ರವರು ಸ್ಪಷ್ಟಪಡಿಸಿದ್ದರು.

ಈಗ ರಾಷ್ಟ್ರೀಯ ಐಕ್ಯತೆಯನ್ನು ಬಯಸುವವರೆಲ್ಲರೂ ಅದನ್ನು ರಕ್ಷಿಸಲು ಕಾರ್ಯಾಚರಣೆಗೆ ಇಳಿಯಬೇಕಾದ ಸಮಯ. ಜೊತೆಗೆ ಆರ್ಥಿಕ ಸನ್ನಿವೇಶವನ್ನು ಸುಧಾರಿಸಿ ಭೂಸುಧಾರಣೆ, ಶ್ರಮ ಜೀವಿಗಳಿಗೆ ತಕ್ಷಣ ಪರಿಹಾರ ಒದಗಿಸುವ ಹಲವು ಕ್ರಮಗಳ ಮೂಲಕ ಜನರ ವಿಶ್ವಾಸವನ್ನು ಗೆಲ್ಲಬಹುದು ಎಂದು ಸುರ್ಜಿತ್ ಹೇಳಿದ್ದಾರೆ. ಕರ್ನಾಟಕದ ಜನತೆಯೂ ಕೋಮುವಾದಿಗಳ ಕೃತ್ಯಗಳನ್ನು ವಿಫಲಗೊಳಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ.

ಪಟೇಲರ ಯೋಚನೆ, ಒಳತರಂಗಗಳು..... ಎಚ್ಚರವಿರಲಿ

ರಾಜ್ಯದ ಮುಖ್ಯಮಂತ್ರಿ ಜೆ.ಎಚ್. ಪಟೇಲರು ದೆಹಲಿಗೆ ಪ್ರಯಾಣ ಬೆಳಸಿ ತಮ್ಮ ಪಕ್ಷದ ಸಂಸತ್ ಸದಸ್ಯರು ವಾಜಪೇಯಿ ಸರ್ಕಾರ ಮಂಡಿಸಿರುವ ವಿಶ್ವಾಸ ಮತದ ಸಂದರ್ಭದಲ್ಲಿ ತಟಸ್ಥವಾಗಿ ಉಳಿಯಬೇಕೆಂದು ಅದರಿಂದ ಕೋಮುವಾದಿಗಳಿಗೆ ಬೆಂಬಲ ಸೂಚಿಸಿದಂತೆ ಆಗುವುದಿಲ್ಲವೆಂದು ಮನವೊಲಿಸಲು ಪ್ರಯತ್ನ ಪಟ್ಟಿದ್ದಾರೆ ಹಾಗೂ ನಂತರ ಜಮ್ಮು ಕಾಶ್ಮಿರದ ಮುಖ್ಯಮಂತ್ರಿ ಫರೂಕ್ ಅಬ್ದುಲ್ಲಾರವರ ಆಹ್ವಾನದ ಮೇರೆಗೆ ಕಾಶ್ಮಿರದಲ್ಲಿ ವಿಶ್ರಾಂತಿ ಅನುಭವಿಸಲು ತೆರಳಿದ್ದಾರೆ. ಈ ಮುನ್ನ ಅವರು ಜಾರ್ಜ್ ಫರ್ನಾಂಡಿಸ್ ರವರನ್ನು ದೆಹಲಿಯಲ್ಲಿ ಭೇಟಿಮಾಡಿದ್ದರು ಎಂಬುದು ಮತ್ತು ಪಟೇಲ್ ಮತ್ತು ರಾಮಕೃಷ್ಣ ಹೆಗಡೆ ಈ ಹಿಂದೆ ಎರಡುಬಾರಿ ಭೇಟಿಮಾಡಿ ಮಾತುಕತೆ ನಡೆಸಿದ ಬಗ್ಗೆ ಪತ್ರಿಕೆಗಳಲ್ಲಿ ಚರ್ಚೆಗಳಿಗೆ ಒಳಪಟ್ಟಿತ್ತು ಎಂಬುದು ಗಮನಾರ್ಹ.

ಇಡೀ ದೇಶದಲ್ಲಿ ಇಂದು ಅತ್ಯಂತ ದೂಷಣೆಗೊಳಗಾದ ಹಾಗೂ ವಾಜಪೇಯಿ ಸರ್ಕಾರಕ್ಕೆ ಕುತ್ತು ತರುವಂತೆ ದೇಶದ ರಕ್ಷಣೆ, ಹಾಗೂ ಸೇನಾಪಡೆಗಳ ವಿಷಯದಲ್ಲಿ ನಿರ್ಲಜ್ಜನಾಗಿ ವರ್ತಿಸಿರುವ ಹಾಗೂ ಭ್ರಷ್ಟಾಚಾರಿ ಸೇನಾಧಿಕಾರಿಗಳನ್ನು ಬೆಂಬಲಿಸಿ ತಾವೇ ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿರುವ ಜಾರ್ಜ್ ಫರ್ನಾಂಡಿಸ್ ಹಾಗೂ ಕಾಶ್ಮೀರದ ವಿಷಯದಲ್ಲಿ, ಕೋಮುವಾದದ ವಿಷಯದಲ್ಲಿ ಮತ್ತು ರಾಜ್ಯ ಸರ್ಕಾರ, ಭಾಷೆಗಳ ವಿಷಯದಲ್ಲಿ ಅತ್ಯಂತ ಜನ ದ್ರೋಹಿ ನಿಲುವನ್ನು ತಳೆದ ಬಿಜೆಪಿಗೆ ತಮ್ಮದೇ ಜನಗಳ ವಿರುದ್ಧವಾಗಿ ತಮ್ಮ ಪಕ್ಷವನ್ನು ಅಡಿಯಾಳಾಗಿಸಿರುವ ಫರೂಕ್ ಅಬ್ದುಲ್ಲಾರ ಜೊತೆ ದೇಶದ ರಾಜಕೀಯದ ಅತ್ಯಂತ ಬಿಕ್ಕಟ್ಟಿನ ಈ ಸಮಯದಲ್ಲಿ ಸರಸವಾಡುತ್ತಿರುವ ಪಟೇಲರು ಜನತಾ ದಳದ ಸಂಸದರಿಗೆ ಈ ನಿಲುವನ್ನು ಸೂಚಿಸಿರುವುದು ದೇಶದ ಹಿತ ಕಾಯುವ ನಿರ್ಣಾಯಕ ಗಳಿಗೆಯಲ್ಲಿ ಮಾಡಿದ ಅಪರಾಧವಾಗಿದೆ. ಕರ್ನಾಟಕದ ಜಾತ್ಯಾತೀತ ಜನತೆಯ ಭಾವನೆಗಳಿಗೆ, ಕರ್ನಾಟಕದ ಹಿತಕ್ಕೆ ನೀಡಿದ ಮಾರಕ ಪೆಟ್ಟಾಗಿದೆ.

ಮಹಾ ಸಮಾಜವಾದಿ, ಬುದ್ಧಿವಂತ ಎಂದೆಲ್ಲಾ ಕೀರ್ತಿಪಡೆದು ಅದರ ಒಂದು ಅಂಶವನ್ನೂ ತಮ್ಮ ಜೀವನದಲ್ಲಿ ಜಾರಿಗೆ ತರದ ಪಟೇಲರು ಕರ್ನಾಟಕದ ಮುಖ್ಯಮಂತ್ರಿಯಾಗಿ ಕರ್ನಾಟಕದ ಜನತೆಗೆ ಮಾಡುತ್ತಿರುವ ದ್ರೋಹದ ತುತ್ತ ತುದಿಗೆ ಅವರು ಈ ಮೂಲಕ ಏರಿದ್ದಾರೆ.

ಜನತಾದಳದ ರಾಜಕೀಯ ವ್ಯವಹಾರಸಮಿತಿ ಈ ವಿಷಯದಲ್ಲಿ ದೃಢ ನಿರ್ಣಯ ಕೈಗೊಂಡು ತನ್ನ ಸಂಸದರಿಗೆ ವಿಪ್ ನೀಡಿ ವಾಜಪೇಯಿ ಸರ್ಕಾರದ ವಿರುದ್ಧ ಮತಹಾಕಲು ಸೂಚಿಸಿದೆ ಎಂಬುದು, ಅಖಿಲ ಭಾರತ ಮಟ್ಟದಲ್ಲಿ ಜೆ.ಎಚ್. ಪಟೇಲರ ದಾರಿಯನ್ನು ತುಳಿಯಲು ನಿರಾಕರಿಸಿತು ಎಂಬುದು ಶ್ಲಾಘನೀಯವಾದದ್ದು.

ಅದೇರೀತಿ ಕರ್ನಾಟಕದಲ್ಲಿ ಜನತಾದಳದ ಅಧ್ಯಕ್ಷ ಸಿದ್ಧ ರಾಮಯ್ಯ, ಗೃಹ ಮಂತ್ರಿ ಸಿಂಧ್ಯಾರವರು ಪತ್ರಿಕೆಗಳಲ್ಲಿ ಬರುತ್ತಿರುವ ಹೆಗ್ಗಡೆ-ಜಾರ್ಜ್-ಪಟೇಲ್ ಸಮೀಕರಣದ ನೀತಿಯನ್ನು ಪೂರ್ಣವಾಗಿ ನಿರಾಕರಿಸಿರುವುದು ಕೂಡ ಕರ್ನಾಟಕದಲ್ಲಿ ಜನತಾದಳ ತನ್ನ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವ ದಾರಿಯಲ್ಲಿ ಉತ್ತಮ ಕಾಣಿಕೆ.

ಆದರೆ ರಾಜ್ಯ ಜನತಾದಳ ಘಟಕದಲ್ಲಿ ಕೇವಲ ಸ್ವಾರ್ಥ, ಗುಂಪುಗಾರಿಕೆಗಳಿಂದ ಕುರುಡಾಗಿ ಪಟೇಲರ ಬಾಲ ಬಡಿಯುತ್ತಿರುವ ಶಕ್ತಿಗಳು ಅವರ ಎಡಬಿಡಂಗಿತನದಿಂದ ಕರ್ನಾಟಕದ ಜನತೆಗೂ, ಜನತಾದಳ ಪಕ್ಷಕ್ಕೂ ಆಗುವ ಅಪಾಯದ ಬಗ್ಗೆ ಎಚ್ಚರಗೊಳ್ಳಬೇಕು. ಬಾಬಾಬುಡನ್ ಗಿರಿಯ ವಿಷಯದಲ್ಲಿ ದೃಢನಿಲುವು ತಳೆಯದೆ ಜನ ಬೆಂಬಲ ಪಡೆಯದ ಚಿಡ್ಡಿಗಳ ದಾಂಧಲೆಗೆ ಅವಕಾಶ ನೀಡಿದ್ದು, ಸುರತ್ಕಲ್, ಪುತ್ತೂರು ಗಲಭೆಗಳಲ್ಲಿ ಎಲ್ಲರ ಕಣ್ಣಿಗೂ ಹೊಡೆಯುವಂತೆ ಹಿಂದು ಜಾಗರಣ ವೇದಿಕೆ

ಪುಟ 3 ಕ್ಕೆ

ಹೊಸ ಸವಾಲುಗಳನ್ನೆದುರಿಸಲು 'ಐಕ್ಯರಂಗ'ಕ್ಕೆ ಹೊಸರೂಪ

ಕನ್ನಡದ ಪತ್ರಿಕಾರಂಗದಲ್ಲಿ ಅದರಲ್ಲಿಯೂ ವಾರಪತ್ರಿಕೆಗಳ ವಿಷಯದಲ್ಲಿ ಹಲವು ಆತಂಕಕಾರಿ ಬೆಳವಣಿಗೆಗಳು ಕಾಣುತ್ತಿವೆ. ಒಂದು ಕಡೆ ಅಶ್ಲೀಲ ಭಾಷೆ ಬಳಸಿ ಕೀಳು ಅಭಿರುಚಿ, ಕೊಲೆ, ದರೋಡೆಗಳನ್ನು ವಿಜೃಂಭಿಸುವ ಪತ್ರಿಕೆಗಳು ಮತ್ತೊಂದು ಕಡೆ ಓದುಗರನ್ನು ಶತ ಶತಮಾನ ಹಿಂದಕ್ಕೆ ನೂಕುವ ಲೇಖನ, ಕಥೆ, ಕಾದಂಬರಿಗಳೇ ತುಂಬಿರುವ ಕುಟುಂಬ ಪತ್ರಿಕೆ ಎನಿಸಿಕೊಂಡವುಗಳು.

ಒಂದು ಕಡೆ ನಿರುದ್ಯೋಗಿ ಯುವಜನರಲ್ಲಿ ಮಾನವೀಯತೆ, ನಾಗರೀಕತೆಗಳನ್ನು ನಾಶಮಾಡಿ ಸಮಾಜ ಕಂಟಕ ಪ್ರವೃತ್ತಿಯನ್ನು ಬೆಳೆಸುವ ಪ್ರಯತ್ನ, ಮತ್ತೊಂದು ಕಡೆ ಕೋಮುವಾದಿ, ದೇಶ ಧ್ವಂಸಕ ಚಿಂತನೆಯ ಅಡಿಪಾಯವಾಗಿ ಜ್ಞಾನ ವಿಜ್ಞಾನ ವಿರೋಧಿ ಅವಿಚಾರಗಳನ್ನು ತುಂಬುವ ಪ್ರಯತ್ನ.

ದಿನ ದಿನಕ್ಕೂ ಸಾವಿರಾರು ರೈತರನ್ನು ಆತ್ಮಹತ್ಯೆಯತ್ತ ದೂಡುವ, ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡುವ ಐ.ಎಂ.ಎಫ್-ವಿಶ್ವಬ್ಯಾಂಕ್-ವಿಶ್ವ ವಾಣಿಜ್ಯ ಸಂಸ್ಥೆಗಳ ನೀತಿಗಳ ಬಗ್ಗೆ ಮೋಹ.

ನಮ್ಮ ನೆರೆಯ ದೇಶಗಳಿಗೆ ಥೈಲ್ಯಾಂಡ್, ಇಂಡೋನೇಷಿಯ ಮಲೇಷಿಯಾಗಳಿಗೆ ಹಬ್ಬಿದ ಕಾಡುಕಿಚ್ಚು ನಮ್ಮ ಮನೆಯನ್ನು ಸುಟ್ಟೀತು ಎಂಬ ಅರಿವೇ ಇಲ್ಲದ ಕುರುಡುತನ ಎಲ್ಲ ಪತ್ರಿಕೆಗಳನ್ನು ವಿವಿಧ ಪ್ರಮಾಣದಲ್ಲಿ ಭಾಧಿಸುತ್ತಿದೆ.

ಈ ಗೊಂದಲಕಾರಿ ಪರಿಸ್ಥಿತಿಯನ್ನು ವಿವರಿಸಲು ವಿಶ್ಲೇಷಿಸಲು ಬೇಕಾದ ಸ್ಪಷ್ಟ ಮತ್ತು ಆಳ ತಿಳುವಳಿಕೆಯನ್ನು, ಈ ಸವಾಲನ್ನು ಎದುರಿಸಲು ಬೇಕಾದ ಧೃಡತೆಯನ್ನು ಕಚ್ಚನ್ನು ಪಡೆದ ಪತ್ರಿಕೆ 'ಐಕ್ಯರಂಗ' ಹಲವು ಬಾರಿ ಅದನ್ನು ಸಾಧಿಸಿ ತೋರಿಸಿದ 'ಐಕ್ಯರಂಗ' ಕನ್ನಡ ಜನತೆಯ ಮಾನವೀಯತೆ, ವೈಚಾರಿಕ ಶಕ್ತಿ, ಜಾತ್ಯಾತೀತ ಮನೋಭಾವನೆಯ ಮೇಲೆ ಎರಗಿದ ಧಾಳಿಯ ಸವಾಲನ್ನು ಎದುರಿಸಲು ಸಜ್ಜಾಗಬೇಕಾಗಿದೆ. ಈ ಪ್ರಯತ್ನದಲ್ಲಿ ಮುಂದಿನ ಸಂಚಿಕೆಯಿಂದ 'ಐಕ್ಯರಂಗ' ಹೊಸರೂಪು ತೊಟ್ಟು ನಿಮ್ಮ ಬಳಿ ಸಾರಲಿದೆ. ಕರ್ನಾಟಕದ ದುಡಿಯುವ ಜನರ ಮನಗೆಲ್ಲುವ ಅಭಿಲಾಷೆಯೊಂದಿಗೆ ಹೊಸ ಮುಖಪುಟದೊಂದಿಗೆ 12 ಪುಟಗಳ ವಿಸ್ತಾರ ಪಡೆದು ನಿಮ್ಮ ಕೈಸೇರಲಿದೆ. ಇದರ ಬೆಲೆ 3.00 ರೂ. ಇರುತ್ತದೆ. ಕರ್ನಾಟಕದ ಎಲ್ಲೆಡೆಯ ಜನಜೀವನದ ದು:ಖ ದುಮ್ಮಾನಗಳು, ನೋವು ನಲಿವುಗಳನ್ನು ನಿಮ್ಮದೇ ಭಾಷೆಯಲ್ಲಿ ನಿಮಗೆ ಮುಟ್ಟಿಸುವ ಪ್ರಯತ್ನ ಅದು. ಜನತೆಯ ಹೋರಾಟಗಳು, ಪ್ರತಿಭಟನೆಗಳು, ಅದರ ಹಿಂದಿನ ಕಿಚ್ಚು ಕೆಚ್ಚುಗಳೊಂದಿಗೆ ನಿಮ್ಮನ್ನು ತಟ್ಟಿ ಎಚ್ಚರಿಸುವ ಬಯಕೆಯೊಂದಿಗೆ ನಿಮ್ಮನ್ನು ಸೇರಲಿವೆ. 'ಐಕ್ಯರಂಗ'ದ ಹೊಸ ಸ್ವರೂಪ-ವಿಷಯ ವಿಸ್ತಾರ ನಿಮ್ಮನ್ನು ಸೆಳೆಯಲಿ. 'ಐಕ್ಯರಂಗ' ಬಿತ್ತುವ ಅರಿವು ಕರ್ನಾಟಕದ ಎಲ್ಲೆಡೆಗೆ ಪಸರಿಸಲಿ.

ಜಿ.ಎನ್.ನಾಗರಾಜ್
ಸಂಪಾದಕರು

ಸಾಮ್ರಾಜ್ಯಶಾಹಿಗಳಿಗೆ ಶರಣಾದ ಆಮದು ರಫ್ತು ನೀತಿ

ಹೊಸ ಆಮದು-ರಫ್ತು ನೀತಿಯನ್ನು ಕೇಂದ್ರದ ವಾಣಿಜ್ಯ ಮಂತ್ರಿ ಮಹಾಶಯ ಕರ್ನಾಟಕದ ರಾಮಕೃಷ್ಣ ಹೆಗಡೆ ಘೋಷಿಸಿದ್ದಾರೆ. 894 ವಸ್ತುಗಳನ್ನು ಮುಕ್ತಗೊಳಿಸಿ ಆಮದನ್ನು ಉದಾರೀ ಕರಿಸಲಾಗಿದೆ, ಕೇಂದ್ರ ಸರ್ಕಾರ ಎಷ್ಟೇ ತಿಣುಕಾಡಿದರೂ ದೇಶದ ರಫ್ತು ಬೆಳವಣಿಗೆ ಕಾಣದೆ ನೆಲನೋಡುತ್ತಿರುವುದು ಉದಾರೀಕರಣದ ವೈಫಲ್ಯದ ಹೆಗ್ಗುರುತಾಗಿ ಕಾಣುತ್ತಿದ್ದರೂ ಸರ್ಕಾರ ಇನ್ನೂ ಹೆಚ್ಚೆಚ್ಚು ಉದಾರೀಕರಿಸಿ ಹೆಚ್ಚಿನ ರಫ್ತು ಸಾಧಿಸುವೆನೆಂದು ಹುಚ್ಚು ಆಶಾಭಾವನೆ ತೋರುತ್ತಿದೆ. ದೇಶ ಮಾರಿ ರಫ್ತು ಹೆಚ್ಚಿಸುವುದು ದೊಡ್ಡ ಸಾಧನೆ ಎಂಬಂತಿದೆ ಕೇಂದ್ರ ಸರ್ಕಾರದ ಧೋರಣೆ

ಈ ರಫ್ತು ನೀತಿಯ ಮುಖ್ಯಾಂಶಗಳನ್ನು ನೋಡಿ.

- 894 ವಸ್ತುಗಳನ್ನು ಈಗಿನ ನಕಾರಾತ್ಮಕ ಪಟ್ಟಿಯಿಂದ ಮುಕ್ತ ಪಟ್ಟಿಗೆ ವರ್ಗ ಮತ್ತು 414 ವಸ್ತುಗಳು ವಿಶೇಷ ಆಮದು ಪಟ್ಟಿಗೆ. ಈಗ ಬರೀ 667 ವಸ್ತುಗಳು ನಿರ್ಬಂಧಿತ ಪಟ್ಟಿಯಲ್ಲಿ ಉಳಿದಿವೆ.
- ಜಗತ್ತಿನ ಬೇರೆಡೆಗಳಲ್ಲಿರುವಂತೆ ಮುಕ್ತ ವ್ಯಾಪಾರ ವಲಯಗಳನ್ನು ಸ್ಥಾಪಿಸುವ ಪ್ರಸ್ತಾಪ
- ಸುಂಕ ಮುಕ್ತಿ ಯೋಜನೆಯನ್ನು ಇನ್ನೂ ಸರಳಗೊಳಿಸುವುದು.
- ರಫ್ತು ಪೂರ್ವ ಸಾಲ ಲಭ್ಯತೆಯನ್ನು ಹಿಂದಿನ ವರ್ಷದ ಸಾಧನೆಯ ಶೇ.5ರಿಂದ ಶೇ. 10ಕ್ಕೆ ಏರಿಸುವುದು.
- ಶೂನ್ಯ ಸುಂಕ ಯೋಜನೆಯನ್ನು ಈಗಿನ 20 ಕೋಟಿ ರೂಪಾಯಿಗಳ ಮಿತಿಯಿಂದ 1 ಕೋಟಿ ರೂಪಾಯಿಗಳಿಗೆ ಇಳಿಸುವುದು - ಇದು ರಸಾಯನಿಕ, ಪ್ಲಾಸ್ಟಿಕ್, ಮತ್ತು ಜವಳಿಗಳಿಗೆ ಅನ್ವಯವಾಗುತ್ತದೆ.
- ಸಮುದ್ರ ಮತ್ತು ಎಲೆಕ್ಟ್ರಾನಿಕ್ಸ್ ವಲಯಗಳಿಗೆ ಬಂಡವಾಳ ಸರಕುಗಳ ಆಮದಿನ ಮೇಲೆ ಹೆಚ್ಚಿನ ಸುಂಕವಿಲ್ಲ.
- ಒಂದು ಮಿತಿಯವರೆಗೆ ಬಳಕೆ ವಸ್ತುಗಳ ಮೇಲೆ ಆಮದು ಸುಂಕವಿಲ್ಲ. ಇದು ಪಚ್ಚೆ, ಆಭರಣ, ಕರಕುಶಲ ವಸ್ತುಗಳು ಮತ್ತು ಚರ್ಮದ ವಸ್ತುಗಳಿಗೆ ಅನ್ವಯವಾಗುತ್ತದೆ.
- ರಫ್ತುದಾರರಿಗೆ ವಿಶೇಷ ಹಸಿರು ಕಾರ್ಡುಗಳು, ಈ ಕಾರ್ಡಿನ ಮೂಲಕ ಹಲವು ಸೌಲಭ್ಯಗಳು
- ರಫ್ತುದಾರರ ಸಮಸ್ಯೆಗಳ ಪರಿಹಾರಕ್ಕೆ ವಿಶೇಷ ಒಂಬುಡ್ಸ್‌ಮನ್ ನೇಮಕದ ಪ್ರಸ್ತಾಪ ಇತ್ಯಾದಿ.

ಹೀಗೆ ಹಲವು ಕ್ರಮಗಳನ್ನು ಈ ನೀತಿಯಲ್ಲಿ ಘೋಷಿಸಲಾಗಿದ್ದು ಇವೆಲ್ಲ ನಮ್ಮ ಬಂಡವಾಳಿಗರಿಗೆ ಸ್ವಲ್ಪ ಮಟ್ಟಿಗಿನ ನೆರವು ನೀಡಬಹುದಾದರೂ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಇದರ ಫಲಾನುಭವಿಗಳಾಗಿರುವುದು ಸ್ಪಷ್ಟ.

ಹೊಸ ನೀತಿ ಆಮದಿನ ಹುಚ್ಚು ಹೊಳೆ ಹರಿಸುವುದಿಲ್ಲ ಎಂದು ವಾಣಿಜ್ಯ ಮಂತ್ರಿ ಹೇಳಿದ್ದರೂ ಅದು ಅಂತಹ ಹೆಚ್ಚಳವನ್ನು ಮಾಡುತ್ತದೆ ಎಂಬುದು ಸ್ಪಷ್ಟ.

ಇಷ್ಟೆಲ್ಲ ಮಾಡಿದ ಮೇಲೆ ದೇಶದ ರಫ್ತು ಹೆಚ್ಚಿ ವಿದೇಶಿ ವ್ಯಾಪಾರ ಬಾಕಿ ಪರಿಸ್ಥಿತಿ ಸುಧಾರಿಸುತ್ತದೆಯೇ? ಅದೂ ಇಲ್ಲ, ಯೋಜನಾ ಆಯೋಗದ ಪ್ರಕಾರ ಈ ಸಾಲಿನಲ್ಲಿ ರಫ್ತು ಶೇ.15 ರಷ್ಟು ಬೆಳವಣಿಗೆ ದರ ತೋರಬೇಕು. ಆದರೆ ವಾಣಿಜ್ಯ ಮಂತ್ರಿಗಳೇ ಹೇಳುವಂತೆ ಈ ಗುರಿ ತಲುಪುವುದು ಸಾಧ್ಯವೇ ಇಲ್ಲ. ಶೇ. 10ರ ಬೆಳವಣಿಗೆ ದರ ಸಾಧಿಸುವುದೂ ಕಷ್ಟ ಎಂದು ಅವರೇ ಹೇಳಿದ್ದಾರೆ. ಯೋಜನಾ ಆಯೋಗದ ಪ್ರಕಾರ ರಫ್ತು ಈ ದರದಲ್ಲಿ ಬೇಕಾಗದೆ ಹೊದರೆ ದೇಶದೊಳಗಿನ ಒಟ್ಟುತ್ಪಾದನೆಯ ಗುರಿಯಾದ ಶೇ. 7 ನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.

ಹೀಗೆ ರಫ್ತು ಉದಾರೀಕರಣದ ಕ್ರಮಗಳು ದೇಶವನ್ನು ರಫ್ತು ಅವಲಂಬಿ ಮಾಡಿದವು. ಈಗ ರಫ್ತು ಬೆಳವಣಿಗೆ ನಮ್ಮ ಕೈಯಲ್ಲೆ ಇಲ್ಲದಿರುವಾಗ ದೇಶದ ಆರ್ಥಿಕ ಬೆಳವಣಿಗೆ ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ದೇಶವನ್ನು ಬಿಕ್ಕಟಿನಿಂದ ಹೊಸ ಬಿಕ್ಕಟ್ಟುಗಳಿಗೆ ಕೊಂಡೊಯ್ಯುತ್ತದೆ . ಉದಾರೀಕರಣದ ಆರ್ಥಿಕ ನೀತಿ ಇದೇ ಅಲ್ಲವೇ? ಈಗಾಗಲೇ ದೆಹಲಿಯ ರಫ್ತುದಾರರ ಸಂಘಟನೆ ಈ ನೀತಿ ಆಮದಿನ ಹೆಚ್ಚು ಹೊರೆ ಹರಿಸುತ್ತಿದೆ ಎಂದು ಪುಕಾರು ಮಾಡಿದ್ದಾರೆ.

ಕಳೆದ 11 ತಿಂಗಳ ಸಾಧನೆ.

ಕಳೆದ ಸಾಲಿನ 11 ತಿಂಗಳಲ್ಲಿ ದೇಶದ ರಫ್ತು ಸಾಧನೆ ಎಂತಹದ್ದು ಗೊತ್ತೆ?.

ಈ ಅವಧಿಯಲ್ಲಿ ರಫ್ತಿನ ಬೆಳವಣಿಗೆ ಬರೀ ಶೇ.1.56 ರಷ್ಟು.

ಅದಕ್ಕೆ ಹಿಂದಿನ ಸಾಲಿನ ಇದೇ ಅವಧಿಯಲ್ಲಿ ಇದು ಶೇ. 2.63 ರಷ್ಟಿತ್ತು. ಹೀಗಿರುವ ಪರಿಸ್ಥಿತಿಯಿಂದ ದೇಶದ ರಫ್ತು ಬೆಳವಣಿಗೆ ದರವನ್ನು ಶೇ. 15ಕ್ಕೆ ಏರಿಸುವುದು ಖಂಡಿತವಾಗಿಯೂ ಅಸಾಧ್ಯದ ಮಾತು. ಇದು ಸಾಧ್ಯವಾಗಲು ಸಾಮ್ರಾಜ್ಯಶಾಹಿಗಳು ಬಿಡುವುದಿಲ್ಲ.

ಅವರಿಗೆ ಅವರ ರಫ್ತು ಮುಖ್ಯವೇ ಹೊರತು ನಮ್ಮ ರಫ್ತಲ್ಲ.



ಇನ್ನೂ ಕುಸಿದ ಔದ್ಯಮಿಕ ಬೆಳವಣಿಗೆ ದರ

1998-99 ರ ಸಾಲಿನ ಕೊನೆಯ ಮೂರು ತಿಂಗಳ ಅವಧಿಯಲ್ಲಿ ದೇಶದ ಔಧ್ಯಮಿಕ ಬೆಳವಣಿಗೆ ಇನ್ನೂ ಹೀನಾಯ ಸ್ಥಿತಿಗೆ ಇಳಿದಿದೆ. ಈ ಅವಧಿಯಲ್ಲಿ ಔಧ್ಯಮಿಕ ಬೆಳವಣಿಗೆ ದರ ಶೇ.2.6 ಕ್ಕೂ ಕೆಳಗೆ ಇಳಿದಿದೆಯಂತೆ.

ಯಂತ್ರ ಮತ್ತು ಉಪಕರಣದ,ಮೂಲ ಲೋಹಗಳು, ಮರದ ವಸ್ತುಗಳು, ಜವಳಿ ಉತ್ಪನ್ನಗಳ ಬೆಳವಣಿಗೆ ದರಗಳು ಕುಸಿದಿದೆ. ಇದಲ್ಲದೆ ಆಹಾರ ಉತ್ಪನ್ನಗಳು, ಉಣ್ಣೆ, ರೇಷ್ಮೆ ವಸ್ತುಗಳು ಹಾಗೂ ಚರ್ಮ ಉತ್ಪನ್ನಗಳ ಬೆಳವಣಿಗೆ ದರ ಹೆಚ್ಚಳ ತೋರಿಲ್ಲ. ಹೀಗೆ ಉದಾರೀಕರಣದ ಆರ್ಥಿಕದಿಂದ ಇನ್ನೂ ಹೆಚ್ಚಿನ ಬಿಕ್ಕಟ್ಟುಗಳು ಮಾತ್ರ ಸೃಷ್ಟಿಯಾಗುತ್ತವೆ ಎಂಬುದು ಇದರಿಂದ ಸ್ಪಷ್ಟ.

ಉತ್ತರನ ಪೌರುಷಾ ಒಲೆಯ ಮುಂದೆ

ಆದಾಯಕರ ಇಲಾಖೆ ಬಹುರಾಷ್ಟ್ರೀಯ ಕಂಪನಿಗಳಿಂದ 500 ಕೋಟಿ ರೂಪಾಯಿಗಳನ್ನು ಕಕ್ಕಿಸಿದ್ದೇವೆ ಎಂದು ಹೇಳಿಕೊಂಡಿದೆ. ಇರಬಹುದು ಆದರೆ ಬಹುರಾಷ್ಟ್ರೀಯ ಕಂಪನಿಗಳು ಹೊರಗೆಡಹುದಕ್ಕಿಂತ ಮುಚ್ಚಿಡುವುದೇ ಹೆಚ್ಚು. ಆದ್ದರಿಂದ 500 ಕೋಟಿ ರೂಪಾಯಿಗಳ ಆದಾಯಕರವನ್ನು ವಸೂಲು ಮಾಡಿದ್ದರೆ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಅವರು ಮುಚ್ಚಿಟ್ಟಿರುತ್ತಾರೆ

ಹಾಗೆ ಈ 500 ಕೋಟಿ ರೂಪಾಯಿ ಸಾಮಾನ್ಯವಾಗಿ ಬಂದಂತಹುದ್ದಲ್ಲ.

ಬದಲಿಗೆ ಇಷ್ಟು ಆದಾಯಕರವನ್ನೂ ಮುಚ್ಚಿಡಲೇ ಅವು ಪ್ರಯತ್ನಿಸಿದ್ದವು.

ಆದಾಯಕರ ಇಲಾಖೆಯ ನಿಷ್ಟುರ ಕ್ರಮದಿಂದ ಇದು ವಸೂಲಾಗಿದೆ.

ಹೀಗೆ ಕರ ನೀಡಿದ ಕಂಪನಿಗಳೆಂದರೆ ಸುಜುಕಿ ಮೋಟಾರು ಕಾರ್ಪೊರೇಷನ್, ಬ್ಯಾಂಕ್ ಆಫ್ ಟೋಕಿಯೋ-ಮಿಟ್ಸುಬಿಷಿ, ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್, ಸುಮುಟೆಮೊ ಕಾರ್ಪೊರೇಷನ್ ಮತ್ತು ಹ್ಯಾಟ್ ಹೋಟೆಲ್‌ಗಳು.

ಆದಾಯಕರ ಇಲಾಖೆಯ ಅಧಿಕಾರಿಗಳು ಎಷ್ಟೇ ತಿಣುಕಾಡಿದರೂ ರಾಜಕೀಯ ಸಂಕಲ್ಪ ಇಲ್ಲದೇ ಹೋದಲ್ಲಿ ಆದಾಯಕರ ದಕ್ಕಿಸುವುದು ಸಾಧ್ಯವಿಲ್ಲ. ಅಂತಹ ರಾಜಕೀಯ ಸಂಕಲ್ಪ ಶಕ್ತಿ ಕೇಂದ್ರದ ಬಿಜೆಪಿಯ ಸರ್ಕಾರಕ್ಕೆಲ್ಲಿ ಇರಲು ಸಾಧ್ಯ?

ರಾಜ್ಯಗಳಿಗೆ ಹೊಡೆತ ನೀಡುವ ಲಾಟರಿ ನಿಷೇದ

ಕೇಂದ್ರ ಸರ್ಕಾರ ಎಲ್ಲ ತರಹದ ಲಾಟರಿಗಳನ್ನು ನಿಷೇಧಿಸಿದೆ. ಲಾಟರಿ ಒಂದು ತರಹದ ಜೂಜು ಎಂದು ಪರಿಗಣಿಸಬಹುದಾದರೆ ಇಂತಹ ಜೂಜನ್ನು ನಿಷೇಧಿಸುವುದು ಒಂದು ಉತ್ತಮ ಪ್ರಯತ್ನ ಎಂದು ಹೇಳಬಹುದು. ಆದರೆ ಲಾಟರಿಗಳು ರಾಜ್ಯ ಸರ್ಕಾರಗಳು ನಡೆಸುವಂತಹವು ಮತ್ತು ರಾಜ್ಯ ಸರ್ಕಾರಗಳಿಗೆ ಒಂದು ದೊಡ್ಡ ಸಂಪನ್ಮೂಲ ಎನ್ನುವುದನ್ನು ಗಮನದಲ್ಲಿಟ್ಟುಕೊಂಡರೆ ರಾಜ್ಯಗಳಿಗೆ ಇದರಿಂದಾಗುವ ಆಪತ್ತಿನ ಕಲ್ಪನೆ ದೊರೆಯುತ್ತದೆ. ರಾಜ್ಯಗಳಿಗೆ ಒಂದು ಮುಖ್ಯ ಸಂಪನ್ಮೂಲವೇ ಇಲ್ಲವಾದರೆ ಅದಕ್ಕೆ ಪ್ರತಿಯಾಗಿ ಒಂದು ಸಂಪನ್ಮೂಲವನ್ನು ದೊರಕಿಸಿಕೊಡುವುದು ಕೇಂದ್ರ ಸರ್ಕಾರದ ಕರ್ತವ್ಯ. ಈಶಾನ್ಯ ಭಾರತದ ರಾಜ್ಯಗಳಿಗೆ ಈ ನಿಷೇಧದಿಂದ ಪರಿಹಾರ ನೀಡುವ ಮಾತನ್ನು ಕೇಂದ್ರ ಸರ್ಕಾರ ಆಡಿದರೂ ಎಷ್ಟು ಪ್ರಮಾಣದಲ್ಲಿ ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಕೇರಳದ ರಾಜ್ಯ ಸರ್ಕಾರ ಕೇಂದ್ರದ ಈ ಕ್ರಮದ ವಿರುದ್ಧ ಹೋರಾಡುವುದಾಗಿ ಹೇಳಿದೆ.

ಅನಿವಾಸಿ ಭಾರತೀಯರ ದೇಶಪ್ರೇಮದ ಭ್ರಮೆ

ಅನಿವಾಸಿ ಭಾರತೀಯರು ರಿಯಾಯಿತಿಗಳನ್ನು ನೀಡಿದರೆ ದೇಶಕ್ಕೆ ಹಣ ಕಳುಹಿಸುತ್ತಾರೆಂಬ ದೊಡ್ಡ ಭ್ರಮೆ ಇಂದಿಗೂ ಇದೆ. ಮುಖ್ಯವಾಗಿ ಬಿಜೆಪಿ ತನ್ನ ಬೆಂಬಲಿಗರು ಈ ರೀತಿ ಹಣ ಕಳುಹಿಸುತ್ತಾರೆ ಮತ್ತು ಆ ಹಣದಿಂದ ದೇಶದ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಪ್ರಚಾರ ಮಾಡಿತ್ತು. ಬಿಜೆಪಿಗೆ ಅನಿವಾಸಿ ಭಾರತೀಯರ ಬೆಂಬಲ ಹೆಚ್ಚಾಗಿದ್ದು ಹಲವು ಅನಿವಾಸಿ ಭಾರತೀಯರು ಬಿಜೆಪಿಯ ಪಕ್ಷ ನಿಧಿಗೆ ಹಣಕಳುಹಿಸುತ್ತಾರೆ ಎಂಬ ಗುಮಾನಿಯಿತ್ತು.

ಆದರೆ ಬಿಜೆಪಿ ಸರ್ಕಾರ ಹಲವು ರಿಯಾಯಿತಿಗಳನ್ನು ನೀಡಿದ ಮೇಲೂ ಈ ಜನಗಳಿಂದ 1998ರಲ್ಲಿ ಬರೀ 350ಕೋಟಿ ರೂಪಾಯಿಗಳು ಮಾತ್ರ ಬಂದಿವೆಯಂತೆ. 1996ರಲ್ಲಿ ಮಾತ್ರ 2062 ಕೋಟಿ ರೂಪಾಯಿಗಳು ಬಂದಿದ್ದು ಗರಿಷ್ಠ ದಾಖಲೆಯಾದರೆ 1992ರಲ್ಲಿ 149 ಕೋಟಿ ರೂಪಾಯಿ ಬಂದದ್ದು ಕನಿಷ್ಠ ದಾಖಲೆ. ಹೇಗಿದೆ ಅನಿವಾಸಿ ಭಾರತೀಯರ ದೇಶಪ್ರೇಮ? ಮತ್ತು ಬಿಜೆಪಿಯ ಭ್ರಮೆ?

ಡಿ.ವೈ.ಎಫ್.ಐ. 6 ನೇ ರಾಜ್ಯ ಸಮ್ಮೇಳನ

ಮೂಲಭೂತವಾದಿ, ಧರ್ಮಾಂಧ ಶಕ್ತಿಗಳ ವಿರುದ್ಧ ಹೋರಾಡಿ.....

— ಕ್ಯಾಪ್ಟನ್ ಲಕ್ಷ್ಮಿಸೆಹಗಲ್

ಹುತಾತ್ಮ ಕಾಂ|| ಬಾಸ್ಕರ್ ಕುಂಬ್ಳೆನಗರ: ಮೂಲಭೂತವಾದಿ ಗಳು, ಮತ್ತು ಧರ್ಮಾಂಧ ಶಕ್ತಿಗಳ ಕೈಯಲ್ಲಿ ನಲುಗುತ್ತಿರುವ ಭಾರತ ಇಂದು ಸಂಕಷ್ಟದ ಸ್ಥಿತಿಯಲ್ಲಿದೆ. ಈ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಿ, ಜಾತ್ಯಾತೀತ ಮತ್ತು ಕೋಮು ಸೌಹಾರ್ದತಾ ಮೌಲ್ಯಗಳನ್ನು ರಕ್ಷಿಸುವ ಜವಬ್ದಾರಿ ಇಂದಿನ ಯುವ ಜನಾಂಗದ ಮೇಲಿದೆ. ಅದ್ದರಿಂದ ಯುವಜನರು ಮೂಲಭೂತವಾದಿ, ಧರ್ಮಾಂಧ ಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕೆಂದು ನೇತಾಜಿ ಸುಭಾಶ ಚಂದ್ರ ಬೋಸರ ನಿಕಟವರ್ತಿ ಆಝಾದ್ ಹಿಂದ್ ಸೇನೆಯ ಮಹಿಳಾ ತುಕಡಿಯ ಕ್ಯಾಪ್ಟನ್ ಕಾಂ|| ಲಕ್ಷ್ಮಿ ಸೆಹಗಲ್ ಕರೆ ನೀಡಿದರು.

ಏಪ್ರಿಲ್ -12 ರಿಂದ ಕೊಡಗು ಜಿಲ್ಲೆಯ ವೀರಾಜಪೇಟೆ ನಗರದಲ್ಲಿ ನಡೆದ ಡಿ.ವೈ.ಎಫ್.ಐ.ನ 6 ನೇ ಕರ್ನಾಟಕ ರಾಜ್ಯ ಸಮ್ಮೇಳನದ ಬಹಿರಂಗ ರ್ಯಾಲಿಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ಆಂದೋಲನದಲ್ಲಿ ಬ್ರಿಟಿಷರಿಗೆ ನಿರ್ಣಾಯಕ ಸೋಲುಂಟಾಗಿದ್ದರೆ, ಅದು ಸುಭಾಶ್ ಚಂದ್ರ ಬೋಸ್‌ರ ಐ.ಎನ್.ಎ. ಯಿಂದ ಮಾತ್ರ ಎಂದು ಬಣ್ಣಿಸಿ ಬೋಸ್ ಅವರ ಪಾತ್ರ, ಸತ್ಯಾದರ್ಶಗಳನ್ನು ಮೆಲುಕು ಹಾಕಿದ 85 ರ ಹರೆಯದ ಸೆಹಗಲ್, ಬೋಸ್ ಅವರ ಸತ್ಯಾದರ್ಶನದಲ್ಲಿ ನಂಬಿಕೆಯೇ ಇಲ್ಲದ ಅವರ ಒಂದು ಮಾರ್ಗವನ್ನೂ ಅನುಸರಿಸದ ಬಿಜೆಪಿ, ಇಂದು ಬೋಸ್ ಬಗ್ಗೆ ಮಾತನಾಡುತ್ತಿರುವುದನ್ನು ಗೇಲಿ ಮಾಡಿದರು. ಅಲ್ಲದೆ ಜಾತಿ ರಾಜಕಾರಣದಿಂದಾಗಿ ಇಂದು ಸೌಹಾರ್ದತೆ ಕದಡಿ ದೇಶ ಗಂಡಾಂತರದ ಕಾಲಘಟ್ಟದಲ್ಲಿ ಹಾಯುತ್ತಿದೆ ಎಂದು ಹೇಳುತ್ತಾ ಮೂಲಭೂತವಾದಿ ಶಕ್ತಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ನೇತಾಜಿ ಅವರು ಸಮಾಜವಾದ -ಸಮತಾವಾದದ ವಿರೋಧಿಯಾಗಿದ್ದರು, ಅವರು ಕಮ್ಯೂನಿಸ್ಟ ಆಗಿರಲಿಲ್ಲ ಎಂದು ಕಮ್ಯುನಿಸಂ ಶತ್ರುಗಳು ಹೇಳುತ್ತಾರೆ. ಆದರೆ ಭೂ ಸುಧಾರಣೆ, ಆರ್ಥಿಕ ಅಸಮಾನತೆ, ಸಮಾಜ ಬದಲಾವಣೆ ಕುರಿತಂತೆ ಶಿಕ್ಷಣ, ಆರೋಗ್ಯ ಕುರಿತಂತೆ ಬೋಸ್ ಸಂಪೂರ್ಣ ಮಾಹಿತಿ ಹೊಂದಿದ್ದರು. ಅವರು ಕಮ್ಯುನಿಸಂ ಗೆ ಹತ್ತಿರವಾಗಿದ್ದರು. ಹೀಗಾಗಿ ನಾನು ಐ.ಎನ್.ಎ. ದಿಂದ ವಾಪಸ್ಸಾದ ಮೇಲೆ ಸಿಪಿಐ(ಎಂ) ಪಕ್ಷವನ್ನು ಸೇರಿದೆ. ನನಗೆ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಜೊತೆ ಗುರ್ತಿಸಿಕೊಳ್ಳುವುದಕ್ಕೆ ಯಾವುದೇ ಹಿಂಜರಿಕೆ ಇಲ್ಲ ಎಂದು ಕ್ಯಾಪ್ಟನ್ ಸೆಹಗಲ್ ಹೆಮ್ಮೆಯಿಂದ ನುಡಿದರು.

ರಾಜಕೀಯ ಸ್ವಾತಂತ್ರ್ಯದೊಂದಿಗೆ ಆರ್ಥಿಕ ಸ್ವಾತಂತ್ರ್ಯವೂ ಇಂದಿನ ಮುಖ್ಯ ಗುರಿ ಎಂಬುದನ್ನು ಒತ್ತಿ ಹೇಳಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಸೆಣಸುವುದು ಮಾತ್ರ ನಮ್ಮ ಗುರಿಯಾಗಿತ್ತು ಆದರೆ ಇಂದು ಆರ್ಥಿಕ ಅಸಮಾನತೆ, ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ನಡೆಸಬೇಕಾದ ಅನಿವಾರ್ಯತೆ ಎದುರಾಗಿದೆ. ಇಂತಹ ಸವಾಲುಗಳನ್ನು ಸಮರ್ಥವಾಗಿ ಯುವಜನರು ಸಂಘಟನೆಗಳ ಮೂಲಕ ಎದುರಿಸ ಬೇಕೆಂದು ಅದರಲ್ಲಿ ಗೆಲುವು ಸಿಕ್ಕೆ-ಸಿಗುವುದೆಂದು ಕಾಂ|| ಲಕ್ಷ್ಮಿ ಸೆಹೆಗಲ್ ಆಶೆ ವ್ಯಕ್ತಪಡಿಸಿದರು.


ಬಹಿರಂಗ-ಸಭೆಯನ್ನುದ್ದೇಶಿಸಿ ಮಾತನಾಡಿದ್ದ ಡಿ.ವೈ.ಎಫ್.ಐ.ನ ಅಖಿಲ ಭಾರತ ಪುಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯರು ಆದ ಕಾಂ|| ಮಹಮದ್ ಸಲೀಂ - ದೇಶವನ್ನು ಕಾಡುತ್ತಿರುವ ಬಡತನ, ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಾಗಿ ಹೇಳಿಕೊಂಡು ಅಧಿಕಾರಕ್ಕೆ ಬಂದ ಬಿಜೆಪಿಗೆ ಇಂದು ಆ ಬಗ್ಗೆ ರಾಷ್ಟ್ರೀಯ ಚರ್ಚೆ ಬೇಕಾಗಿಲ್ಲ, ಬದಲಾಗಿ, ಮತಾಂತರ ಕುರಿತು ಚರ್ಚೆಯಾಗಬೇಕೆನ್ನುತ್ತಾರೆ ಶ್ರೀಮಾನ್ ವಾಜಪೇಯಿಯವರು. ಯುವಜನರ ವಿರೋಧಿಯಾದ ಈ ಆರ್.ಎಸ್.ಎಸ್. ನಿಯಂತ್ರಣದ ಸರ್ಕಾರ ತಕ್ಷಣ ತೊಲಗಬೇಕೆಂದು ಅದಕ್ಕಾಗಿ ಯುವಜನರು ತೀವ್ರ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಡಿ.ವೈ.ಎಫ್.ಐ. ಸೆಪ್ಟೆಂಬರ್-15 ರಂದು ದೆಹಲಿಯಲ್ಲಿ ಸಂಘಟಿಸಲಿರುವ ಯುವಜನರ ರ್ಯಾಲಿಯಲ್ಲಿ ಲಕ್ಷಾಂತರ ಯುವಜನರು ಪಾಲ್ಗೊಂಡು ಉದ್ಯೋಗ ಹಾಗೂ ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಒತ್ತಾಯಿಸಲಿದ್ದಾರೆ ಎಂದರು.

ಕೋಮು ಸೌಹಾರ್ದತೆ, ಸಮಗ್ರತೆ ಮತ್ತು ಅಭಿವೃದ್ಧಿ, ಘೋಷಣೆಯಡಿಯಲ್ಲಿ ಜರುಗಿದ ಬಹಿರಂಗ ಅಧಿವೇಶನದಲ್ಲಿ ಡಿ.ವೈ.ಎಫ್.ಐ. ಸಂಸ್ಥಾಪಕ ಸದಸ್ಯರು ಶಾಸಕರು ಆದ ಕಾಂ|| ಜಿ.ವಿ. ಶ್ರೀರಾಮರೆಡ್ಡಿ, ಡಿ.ವೈ.ಎಫ್.ಐ. ಅಖಿಲ ಭಾರತ ಅಧ್ಯಕ್ಷರು ಹಾಗೂ ಲೋಕಸಭಾ ಸದಸ್ಯರು ಆದ ಕಾಂ|| ಎಸ್.ಎನ್. ಕೃಷ್ಣದಾಸ್ ಮತ್ತು ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಮಾತನಾಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ವೀರಾಜಪೇಟೆ ತಾಲೂಕು ಪಂಚಾಯ್ತಿ ಅಧ್ಯಕ್ಷೆ ಪದ್ಮಿನಿ ಸೋಮಯ್ಯ ಮೊದಲಾದವರು ಉಪಸ್ಥಿತರಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರು ಖ್ಯಾತ ವಕೀಲರು ಆದ ಕಾಂ|| ಐ.ಆರ್ ಪ್ರಮೋದ್ ವಹಿಸಿದ್ದರು. ಸ್ವಾಗತ ಸಮಿತಿ ಪ್ರ. ಕಾರ್ಯದರ್ಶಿ ಪೀಟರ್ ಲೋಬೋ ಸ್ವಾಗತಿಸಿದರು. ಡಿ.ವೈ.ಎಫ್.ಐ. ರಾಜ್ಯಾಧ್ಯಕ್ಷ ಶಾಂತರಾಂ ನಾಯಕ್ ಅತಿಥಿಗಳನ್ನು ಪರಿಚಯಿಸಿದರು. ವಂದನಾರ್ಪಣೆಯನ್ನು ಕೆ. ಮಹಾಂತೇಶ್ ಮಾಡಿದರು.

ನೂತನ ರಾಜ್ಯ ಸಮಿತಿ


ಅಧ್ಯಕ್ಷರು


ಕಾರ್ಯದರ್ಶಿ

ಡಿ.ವೈ.ಎಫ್.ಐ.ನ ಕರ್ನಾಟಕ ರಾಜ್ಯ 6ನೇ ಸಮ್ಮೇಳನವು ಈ ಕೆಳಗಂಡ ಪದಾಧಿಕಾರಿಗಳನ್ನೊಳಗೊಂಡ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು.

ಅಧ್ಯಕ್ಷರು: ಶಾಂತರಾಂ ಎಸ್. ನಾಯಕ್ (ಉತ್ತರ ಕನ್ನಡ),

ಉಪಾಧ್ಯಕ್ಷರು- ಕೃಷ್ಣಪ್ಪ ಕೊಂಬಾಡಿ(ದ.ಕ), ಪೀಟರ ಲೋಬೊ(ಕೊಡಗು) ಎಸ್.ವೈ. ಗುರುಶಾಂತ್(ರಾಜ್ಯ ಕೇಂದ್ರ)

ಕಾರ್ಯದರ್ಶಿ- ಕೆ. ಮಹಾಂತೇಶ್ (ದಾವಣಗೆರೆ)

ಸಹ ಕಾರ್ಯದರ್ಶಿಗಳು- ಎಂ.ವಿ.ನಾರಾಯಣಸ್ವಾಮಿ (ಕೋಲಾರ), ವಿಠ್ಠಲ ಭಂಡಾರಿ (ಉತ್ತರ ಕನ್ನಡ), ಶರ್ಫುದ್ದೀನ್(ರಾಯಚೂರು), ರಾಮದಾಸ್ (ದ.ಕ),

ಖಜಾಂಚಿ- ಲಕ್ಷಣ್ ಕುಮಾರ್(ಬೆಂಗಳೂರು)

ಕಾರ್ಯದರ್ಶಿ ಮಂಡಳಿ ಸದಸ್ಯರು: ಕೆ.ಶ್ರೀನಿವಾಸ್(ಬೆಂಗಳೂರು), ಎ.ವಿ. ವೆಂಕಟರಾಮು (ಕೋಲಾರ), ಭರತ್ ರಾಜ್ (ಮಂಡ್ಯ)

ರಾಜ್ಯ ಸಮಿತಿ ಸದಸ್ಯರು: ಸಂಜೀವಯ್ಯ (ಬೆಂಗಳೂರು), ಭಾಸ್ಕರ ರೆಡ್ಡಿ (ಕೋಲಾರ), ಕುಮಾರಿ ಪುಣ್ಯವತಿ, ಡಿ. ಪ್ರಕಾಶ್ (ಮಂಡ್ಯ), ಸಿ ಮಾರುತಿ (ಮೈಸೂರು), ದೇವರಾಜ್ (ಮೈಸೂರು), ಕಿಶೋರ ಪುಟ್ಟಪ್ಪ. (ಕೊಡಗು), ಕುಮಾರಿ ಪ್ರಮೀಳ, ವಿ.ಚಂದ್ರಶೇಖರ್. (ದಕ್ಷಿಣ ಕನ್ನಡ), ಅರುಣ್‌ಕುಮಾರ್ (ದಕ್ಷಿಣ ಕನ್ನಡ), ನಾಗೇಶ್‌ಕುಮಾರ್ (ದಕ್ಷಿಣ ಕನ್ನಡ), ಶ್ರೀಧರ ಶೆಟ್ಟಿ (ಉತ್ತರ ಕನ್ನಡ), ಧರ್ಮೇಶ್ (ಹಾಸನ), ಬ್ರಹ್ಮದೇವ ಹವಳಿಗೆ (ದಾವಣಗೆರೆ), ಬಿ.ಗಣೇಶ್ (ಬಳ್ಳಾರಿ), ರಮೇಶ್ (ಬಳ್ಳಾರಿ), ಚಂದ್ರ ಶೇಖರ್ ನಾಡಗೌಡ (ರಾಯಚೂರು) ಶ್ರೀಮಂತ ಬಿರಾದಾರ್(ಗುಲ್ಬರ್ಗಾ), ಶ್ರೀಮಂತ ಹೊಳ್ಕರ್ (ಗುಲ್ಬರ್ಗಾ), ನಾರಾಯಣ ರಾಂಪುರ (ಬೀದರ್)

ಬಿಪಿಎಲ್ ಕಾರ್ಮಿಕರ ಮೇಲೆ ಪೋಲಿಸರ ವ್ಯವಸ್ಥಿತ ದೌರ್ಜನ್ಯ ಸಿಐಟಿಯು ರಾಜ್ಯ ಸಮಿತಿ ಖಂಡನೆ

ಪೋಲೀಸ್‌ನವರು ಯೋಜನಾ ಬದ್ಧವಾಗಿ ಬಿ.ಪಿ.ಎಲ್ ಕಾರ್ಮಿಕರು ಶಾಂತಿಯುತವಾಗಿ ಸಭೆ ಮುಗಿಸಿ ಹೋಗುವ ಸಂದರ್ಭದಲ್ಲಿ ಏ.8 ರಂದು ದೌರ್ಜನ್ಯ ಎಸಗಿರುತ್ತಾರೆ. ಬಿ.ಪಿ.ಎಲ್. ಕಾರ್ಮಿಕರಿಗೆ ಸಂಬಂಧಪಟ್ಟ ವಿಚಾರಗಳು ಉಚ್ಚನಾಯಾಲಯದಲ್ಲಿರುವುದರಿಂದ ಇವುಗಳ ತೀರ್ಮಾನಗಳ ಬಗ್ಗೆ ತಿಳಿಯಲು ಅನಿವಾರ್ಯವಾಗಿ ಆಗಿಂದಾಗ ಸಭೆ ಸೇರುವ ಅಗತ್ಯವಿರುತ್ತದೆ. ಈ ಹಿಂದೆ ಏ. 6 ರಂದು ಉಚ್ಚನ್ಯಾಯಾಲಯದಿಂದ ತೀರ್ಮಾನ ಹೊರಬರುವ ಸಂದರ್ಭ ಇದ್ದುದರಿಂದ ಕಾರ್ಮಿಕರಿಗೆ ತಿಳಿಸುವ ಸಲುವಾಗಿ 8-4-99 ರಂದು ಬೆಳಿಗ್ಗೆ 10-00 ಚಿಕ್ಕಲಾಲ್‌ಬಾಗ್‌ನಲ್ಲಿ ಎಲ್ಲಾ ಕಾರ್ಮಿಕರೂ ಸೇರಲು ಹೇಳಲಾಗಿತ್ತು. ಅದೇ ರೀತಿ ಎಲ್ಲಾ ಕಾರ್ಮಿಕರು ಬಂದಿದ್ದು ಉಚ್ಚ ನ್ಯಾಯಾಲಯದ 6ನೇ ತಾರಿಖಿನ ತೀರ್ಪು 9-4-99 ರಂದು ಕೊಡುವುದಾಗಿ ತಿಳಿದುಬಂದಿದ್ದು ಮತ್ತೊಮ್ಮೆ ಬಿ.ಪಿ.ಎಲ್. ಕಾರ್ಮಿಕರಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನು ತೀರ್ಮಾನ ತೆಗೆದುಕೊಳ್ಳುವುದಕ್ಕಾಗಿ 13-4-99 ರಂದು ಮತ್ತೊಮ್ಮೆ ಎ.ಡಿ.ಎ. ರಂಗಮಂದಿರದಲ್ಲಿ ಸೇರಲು ಹೇಳಲಾಯಿತು. ಈ ಎಲ್ಲಾ ಮೇಲ್ಕಂಡ ವಿಚಾರಗಳನ್ನು ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ವಿ.ಜೆ.ಕೆ. ನಾಯರ್ ಮತ್ತು ಸಿ.ಐ.ಟಿ.ಯು ಮುಖಂಡರಾದ ಹೆಚ್. ಎನ್. ಗೋಪಾಲಗೌಡರು ಸಭೆಗೆ ತಿಳಿಸಿ ಸುಮಾರು 12-00 ಗಂಟೆಗೆ ಸಭೆ ಮುಗಿದು ಎಲ್ಲಾ ಕಾರ್ಮಿಕರು ತಮ್ಮ ಮನೆಗಳಿಗೆ ತೆರಳಲು ಹೇಳಲಾಗಿತ್ತು.

ಮುಖಂಡರು ಆ ಸ್ಥಳವನ್ನು ಬಿಟ್ಟು ತಕ್ಷಣ ಬಿ.ಪಿ.ಎಲ್. ಕಾರ್ಮಿಕರು ಮನೆಗಳಿಗೆ ತೆರಳುವ ಸಂದರ್ಭದಲ್ಲಿ ಚಿಕ್ಕಲಾಲ್‌ಬಾಗಿನ ಎಲ್ಲಾ ಮುಖ್ಯ ದ್ವಾರಗಳನ್ನು ಪೋಲೀಸರು ಸುತ್ತುವರಿದು ನಿರಪರಾಧಿ ಕಾರ್ಮಿಕರನ್ನು ಬಂಧಿಸಿ ವ್ಯಾನುಗಳಲ್ಲಿ ತುಂಬಿಕೊಂಡು ಹೋಗಿರುತ್ತಾರೆ. ಪೋಲಿಸರ ಈ ವರ್ತನೆಯನ್ನು ಸಿ.ಐ.ಟಿ.ಯು ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ. ಬಿಪಿಎಲ್ ಕಾರ್ಮಿಕರು ಸಭೆಯನ್ನು ಶಾಂತಿಯುತವಾಗಿ ನಡೆಸುತ್ತಿದ್ದರೂ ಸಹ ಪೋಲೀಸರು ಉದ್ದೇಶಪೂರ್ವಕವಾಗಿ ಮಾಲೀಕರ ಪರ ಶಾಮಿಲಾಗಿ ಕಾರ್ಮಿಕರಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ. ಪೋಲೀಸ್‌ನವರ ವರ್ತನೆ ಬಿಪಿಎಲ್ ಮಾಲೀಕರ ಪರವಾಗಿ ಇರುತ್ತದೆ. ಕಾರ್ಮಿಕರು ಸ್ವಯಂ ಪ್ರೇರಣೆಯಿಂದ ಸಭೆಗೆ ಬರುವುದನ್ನು ತಡೆಯುವ ಸಲುವಾಗಿ ಮತ್ತು ಸಿಐಟಿಯು ಮುಖಂಡರು ಸಭೆಯನ್ನು ಮಾಡದಂತೆ ನಿಯಂತ್ರಿಸಲು ಪೋಲೀಸ್‌ನವರು ಶಾಂತಿ ಯುತವಾದ ಸಭೆಯನ್ನು ಭಂಗ ಮಾಡುತ್ತಿರುವುದು ಎದ್ದು ಕಾಣುತ್ತಿದೆ ಎಂದು ಸಿಐಟಿಯು ರಾಜ್ಯ ಸಮಿತಿ ಖಂಡಿಸಿದೆ.

20 ಜನ ಬಿಪಿಎಲ್ ಕಾರ್ಮಿಕರನ್ನು ಅನ್ಯಾಯವಾಗಿ ಮತ್ತು ಅಕ್ರಮವಾಗಿ ಬಂಧಿಸಿರುವವರನ್ನು ಕೂಡಲೇ ಬಿಡುಗಡೆ ಮಾಡಬೇಕು, ಯಾವುದೇ ಘಟನೆಗಳಿಗೆ ಸಂಬಂಧ ಇಲ್ಲದ ಕಾರ್ಮಿಕರನ್ನು ಬೀದಿ ಬೀದಿಗಳಲ್ಲಿ ಬಂಧಿಸುತ್ತಿರುವ ಪೋಲೀಸಿನವರ ಈ ನೀತಿಯನ್ನು ಕೂಡಲೇ ನಿಲ್ಲಿಸಬೇಕೆಂದು ಸಿಐಟಿಯು ಒತ್ತಾಯಿಸಿದೆ. ಕಾರ್ಮಿಕರ ನ್ಯಾಯಯುತ ಹೋರಾಟದ ಸಮಸ್ಯೆಯನ್ನು ಪರಿಹಾರ ಮಾಡುವ ಬದಲು ಪೋಲೀಸಿನವರು ಸಂಘದ ಕಛೇರಿಗೆ ನುಗ್ಗಿ ಕಾರ್ಮಿಕರನ್ನು ಬಂಧಿಸುವ ಈ ನೀತಿಯನ್ನು ಕೂಡಲೇ ನಿಲ್ಲಿಸಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ಅಗ್ರಹಿಸಿದೆ ಹಾಗೂ ಕೂಡಲೇ ಬಂಧಿತ ಕಾರ್ಮಿಕರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದೆ.

ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ನ್ಯಾಯವಾದಿಗಳ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲ

ಕರ್ನಾಟಕದ ಉತ್ತರ ಭಾಗಕ್ಕೆ ಧಾರವಾಡದಲ್ಲಿ ಹೈಕೋರ್ಟು ಪೀಠ ಅಗತ್ಯ ಇದೆ ಎಂದು ಒತ್ತಾಯಿಸಿ ಈ ಪ್ರದೇಶದ ನ್ಯಾಯವಾದಿಗಳು ಕಳೆದ ಹಲವು ವರ್ಷಗಳಿಂದ ಪ್ರಜಾಸತ್ತಾತ್ಮಕ ಹೋರಾಟಗಳನ್ನು ನಡೆಸುತ್ತಾ ಬಂದಿದ್ದಾರೆ. ಸಾರ್ವಜನಿಕರಿಂದ ಹೈ ಕೊರ್ಟ್ ಹಾಗೂ ಸುಪ್ರೀಮ್ ಕೋರ್ಟುಗಳಿಂದ ಈ ವಿಷಯದ ಬಗ್ಗೆ ಸಕಾರಾತ್ಮಕ ಪ್ರತಿಕ್ರಿಯೆಗಳು ದೊರೆತಿವೆ. ರಾಜ್ಯ ಸರ್ಕಾರದ ವಕ್ತಾರರೂ ಈ ಕುರಿತು ಸಹಾನುಭೂತಿಯಿಂದ ಪರಿಶೀಲಿಸಿ ನಿರ್ಧರಿಸುವುದಾಗಿ ಆಶ್ವಾಸನೆ ನೀಡುತ್ತಾ ಬಂದಿದ್ದಾರೆ.

ಆದರೆ, ಇದುವರೆಗೆ ಈ ಮುಖ್ಯ ಬೇಡಿಕೆ ಇನ್ನೂ ಈಡೇರದೇ ಇರುವುದಕ್ಕೆ ರಾಜ್ಯ ಸರ್ಕಾರದ ಅನಿಶ್ಚತತೆಯ ದೋರಣೆ ಕಾರಣ ಎಂದು ಸಿ.ಪಿ.ಐ.(ಎಂ) ಧಾರವಾಡ ಜಿಲ್ಲಾ ಸಮಿತಿ ಅಭಿಪ್ರಾಯ ಪಟ್ಟಿದೆ ಕರ್ನಾಟಕದ ಉತ್ತರ ಭಾಗದ ಬಹುದೊಡ್ಡ ಜನ ವಿಭಾಗದ ಅಗತ್ಯತೆಗಾಗಿ ಇರಬೇಕಾದ ಹೈಕೋರ್ಟ್ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರ ತುರ್ತು ಕ್ರಮ ವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಟಈ ಬೇಡಿಕೆಗಾಗಿ ನ್ಯಾಯವಾದಿಗಳು ಪುನ: ಪ್ರಾರಂಭಿಸಿದ ಹೋರಾಟಕ್ಕೆ ಸಿಪಿಐ(ಎಂ) ತನ್ನ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಪಕ್ಷದ ಧಾರವಾಡ ಜಿಲ್ಲಾ ಸಮಿತಿಯ ಪರವಾಗಿ ಸಿ.ಆರ್.ಭಟ್. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ರಸ್ತೆ ದುರಸ್ಥಿಗೆ ಒತ್ತಾಯಿಸಿ ರೈತರಿಂದ ರಸ್ತೆ ತಡೆ

ಬೆಂಗಳೂರು: ಕೆ.ಇ.ಬಿ. ಯುವರ ಅಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ಸರ್ಜಾಪುರದಿಂದ ಅತ್ತಿಬೆಲೆವರೆಗೆ ರಸ್ತೆ ದುರಸ್ತಿ ಮಾಡುವಂತೆ ಏಪ್ರಿಲ್ 7 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಆನೇಕಲ್ ತಾಲೂಕು ಸಮಿತಿ ನೇತೃತ್ವದಲ್ಲಿ ಕೆಇಬಿ ಕಛೇರಿ ಮುಂದೆ ಇನ್ನೂರಕ್ಕೂ ಹೆಚ್ಚು ರೈತರು ರಸ್ತೆ ತಡೆ ಕಾರ್ಯಕ್ರಮ ನಡೆಸಿದರು.

ಹೊಸೂರು ರಸ್ತೆ ಅತ್ತಿ ಬೆಲೆ ಮೂಲಕ ಸರ್ಜಾಪುರದ 8. ಕಿ.ಮಿ. ರಸ್ತೆಯನ್ನು ರಾಷ್ಟ್ರೀಯ ಲೋಕೋಪಯೋಗಿ ಇಲಾಖೆ ವಹಿಸಿ ಈ ರಸ್ತೆಯ ಮೂಲಕ ಹೊಸ ಕೋಟೆ ಮತ್ತು ವಿಜಯ ಪುರ ಮಾರ್ಗವಾಗಿ ದೇವನ ಹಳ್ಳಿ ರಾಷ್ಟ್ರೀಯ ಹೆದ್ದಾರಿಗೆ (WH7) ಸೇರಿಸುವಂತೆ ಸುಮಾರು 20 ಕೋಟಿ ರೂಗಳನ್ನು ಸರ್ಕಾರ ಮಂಜೂರು ಮಾಡಿದೆ. ಆದರೆ ಗುತ್ತಿಗೆ ಪಡೆದಿರುವ ಸಂಸ್ಥೆ ಅಲ್ಪಸ್ವಲ್ಪ ಕೆಲಸ ಮಾಡಿ ವಿಳಂಬ ಮಾಡುತ್ತಿದೆ. ಇಲ್ಲಿಯ ಶಾಸಕರು, ಸಂಸತ್‌ಸದಸ್ಯರು ಇತ್ತ ಗಮನ ಹರಿಸದಿರುವುದನ್ನು ರೈತ ಮುಖಂಡ ಶಾಮಣ್ಣ ರೆಡ್ಡಿ ತೀವ್ರವಾಗಿ ಖಂಡಿಸಿದರು.

ಇದೇ ಸಂದರ್ಭದಲ್ಲಿ ರೈತ ಮುಖಂಡರುಗಳಾದ ವೆಂಕಟಾಚಲಯ್ಯ, ರಾಮಯ್ಯ ಮೊದಲಾದವರು ಮಾತನಾಡಿದರು. ಮನವಿಯನ್ನು ತಾಲೂಕು ಮುಖಂಡ ಮಾದೇಶ ಅಧಿಕಾರಿಗಳಿಗೆ ನೀಡಿ ಬೇಗ ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಅಧಿಕಾರಿ ಒಂದು ವಾರದೊಳಗೆ ಅಧಿಕಾರಿಗಳು ಹಾಗೂ ರೈತ ಮುಖಂಡರ ಜೊತೆ ಒಂದು ವಾರದಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಕೃಷ್ಣರೆಡ್ಡಿ ವಂದನೆ ಸಲ್ಲಿಸಿದರು.

ಶೋಭಾಳ ಸಾವು: ಸಿಬಿಐ ತನಿಕೆಗೆ ಒತ್ತಾಯಿಸಿ ಜೆ.ಎಂ.ಎಸ್. ನಿಂದ ಮೆರವಣಿಗೆ

ಬಿಜಾಪುರ: ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ. ಮುನಗೋಳಿಯವರ ಸೊಸೆ ಶೋಭಾಳ ಸಾವನ್ನು ಸಿಬಿಐ ತನಿಕೆ ನಡೆಸುವಂತೆ ಅಖಿಲ ಬಾರತ ಜನವಾದಿ ಮಹಿಳಾ ಸಂಘ ಜಿಲ್ಲಾ ಸಮಿತಿ ಮಾರ್ಚ್ 30 ರಂದು ಬೃಹತ್ ಮೆರವಣಿಗೆ ನಡೆಸಿತು.

ಸಚಿವರ ಮನೆಗೆ ಹೊರಟ ಪ್ರತಿಭಟನಾಕಾರರನ್ನು ಪೋಲೀಸರು ಮಧ್ಯದಲ್ಲೆ ತಡೆದರು. ಸ್ಥಳಕ್ಕೆ ಆಗಮಿಸಿದ ತಹಸಿಲ್ದಾರರು ಮನವಿ ಸ್ವೀಕರಿಸಿ ಫ್ಯಾಕ್ಸ್ ಮುಖಾಂತರ ಸರ್ಕಾರಕ್ಕೆ ಮುಟ್ಟಿಸುವುದಾಗಿ ಹಾಗೂ ಸಿಬಿಐ ತನಿಖೆಗೆ ಸೂಚಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನಾ ಕಾರರನ್ನುದ್ದೇಶಿಸಿ ಮಾತನಾಡಿದ ರೈತ ಸಂಘಧ ಭಿಮಶಿ ಕಲಾದಗಿ, ಜೆ.ಎಂ.ಎಸ್.ನ ಸುರೇಖಾ ರಜಪೂತರು, ಶೋಭಾಳನ್ನು ಅಕೆಯ ಅತ್ತೆ ಮತ್ತು ನಾದಿನಿ ಬೆಂಕಿ ಹಚ್ಚಿ ಕೊಲೆ ಮಾಡಿದ್ದಾರೆಂಬ ಆರೋಪ ಕೇಳಿ ಬರುತ್ತಿದೆ ಆದ್ದರಿಂದ ಇದು ಕೇವಲ ಆಕಸ್ಮಿಕ ಸಾವು ಎಂದು ಕಡೆಗಣಿಸದೆ ಇದನ್ನು ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಇದೆ ಸಂದರ್ಭದಲಿ ಅಣ್ಣರಾಯ ಈಳೀಗೇರ ಮಾತನಾಡಿದರು.



ಈರಾಬಾಯಿ, ಹಜೇರಿ, ಲಕ್ಷ್ಮಿಮೈಲಾರಿ, ಶಹಜಾದ ಬಿಕಲಾದಗಿ, ಲಕ್ಷ್ಮಿ ಪ್ರಾಗಲಿ, ಲಕ್ಷ್ಮೀಬಾಯಿ ದಡೇಕರ, ಸೊಮಾಬಾಯಿ ಬ್ಯಾಳಿ ಮೊದಲಾದವರು ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಸಚಿವರ ಮನೆಯತ್ತ ಹೊರಟ ಮೆರವಣಿಗೆಯನ್ನು ತಡೆದ ಪೋಲೀಸರು 86 ಮಹಿಳೆಯರನ್ನು ಬಂದಿಸಿ ಬಿಡುಗಡೆ ಮಾಡಿದರು.

ರೇಲ್ವೆ ಗೇಜು ಪರಿವರ್ತನೆ

ಒಂದು ರಾಜ್ಯದ ಅಭಿವೃದ್ಧಿಗೆ, ಕೈಗಾರಿಕೆಗಳ ಬೆಳವಣಿಗೆಗೆ ವ್ಯಾಪಾರ ಕುದುರಿಸುವಿಕೆಗೆ, ದೇಶದ ಎಲ್ಲಾ ಭಾಗಗಳ ಸಂಪರ್ಕ ಅಗತ್ಯ ಆ ದಿಸೆಯಲ್ಲಿ ರೇಲ್ವೆ ಬಡಾವಕ್ಕೆ ಏಕ ರೂಪದ ರೇಲ್ವೆ ಮಾರ್ಗ ಅಗತ್ಯ ಈ ವಿಷಯದಲ್ಲಿ ಕರ್ನಾಟಕ್ಕೆ ಅನ್ಯಾಯವಾಗಿದೆ. ಹೊಸ ರೇಲ್ವೆ ಸಂಪರ್ಕಗಳ ಕುರಿತು ಕಡೆಗಣಿಸಲ್ಪಟ್ಟಿದೆ.

ಕರ್ನಾಟಕದ ಪೂಣಚ್ಚ, ದಾಸಪ್ಪ, ಹನುಮಂತಯ್ಯ,ಟಿ.ಎ.ಪೈ, ಜಾಫರ್ ಶರೀಫ್‌ರೆಲ್ಲ ಕೇಂದ್ರ ರೇಲ್ವೆ ಮಂತ್ರಿಗಳಾಗಿದ್ದಾವರು. ಗೇಜ್ ಪರಿವರ್ತನೆಯನ್ನು ಮಿರಜ ಮತ್ತು ಹೊಸಪೇಟೆಗಳಿಗೆ ಸೀಮಿತಗೊಳಿಸಿದಾಗ, ಹಾಸನ ಮಂಗಳೂರು ದಾರಿಯನ್ನು ಮೀಟರ್ ಗೇಜ್ ಆಗಿಯೇ ರಚಿಸಿದಾಗ ಕೇಂದ್ರ ಮಂತ್ರಿಗಳಾಗಲೀ, ಚುನಾಯಿತ ಸದಸ್ಯರಾಗಲೀ ಪ್ರತಿಭಟಿಸಿಲ್ಲ, ಧ್ವನಿ ಎತ್ತಲಿಲ್ಲ. ಸಿಪಿಐ(ಎಂ) ಬಿಟ್ಟರೆ ಇತ್ತ ಪ್ರಬಲ ಪಕ್ಷಗಳು ಅದರತ್ತ ಗಮನಹರಿಸಲಿಲ್ಲ ಹಾಗಾಗಿ ಹುಬ್ಬಳ್ಳಿ ಕಾರವಾರ, ಗುಲ್ಬರ್ಗ ಬೀದರು ಚಾಮರಾಜಪೇಟೆ- ನಾಗಮಂಗಲಗಳಂಥ ಬಹುಮುಖ್ಯ ಮಾರ್ಗಗಳು ಸಂಪೂರ್ಣ ಕಡೆಗಣಿಸಲ್ಪಟ್ಟಿವೆ. ನ್ಯಾರೋ ಗೇಜು ಮೀಟರ್ ಗೇಜು ಮಾರ್ಗಗಳು ಪರಿವತರ್ತನೆ ಕಾಣಲಿಲ್ಲ. ಜಾಫರ್ ಶರೀಫ್ ಇದ್ದಾಗ ಬೆಂಗಳೂರು- ಮೈಸೂರು, ಮೈಸೂರು-ಹಾಸನ, ಬಿಜಾಪುರ-ಹುಟುಗಿ ಲೊಲಿಡಾಕಾಸಲ್ ರಾಕ್, ಮಿರಜ-ಹುಬ್ಬಳಿ-ಬೆಂಗಳೂರು, ಹೊಸಪೇಟೆಗಳು ಗೇಜು ಪರಿವರ್ತನೆ ಕಂಡವು. ಹೊಸ ಮಾರ್ಗಗಳಿಗೆ ಅದೃಷ್ಟ ತೆರೆಯಲಿಲ್ಲ.

ವ್ಯಾಪಾರ ಪ್ರಯಾಣ ದೃಷ್ಟಿಯಿಂದ ಬಿಜಾಪುರ ಬಾಗಲಕೋಟೆ ಜಿಲ್ಲೆಗಳ ಅಭಿವೃದ್ಧಿ ದೃಷ್ಟಿಯಿಂದ ಸೋಲಾಪುರ ಗದಗ ಮಾರ್ಗದ ಗೇಜು ಪರಿವರ್ತನೆ ಅತ್ಯಗತ್ಯ. ಸಿಪಿಐ(ಎಂ) ಹೋರಾಟ ನಡೆಸುತ್ತ ಬಂದ ಪರಿಣಾಮವಾಗಿ, ಬಿಜಾಪುರ-ಹುಟುಗಿ ಮಾರ್ಗದ ಪರಿವರ್ತನೆ ಹೋದ ವರ್ಷ ಮುಗಿದಿದೆ. ರೇಲ್ವೆ ಬೋರ್ಡಿನ ಗೊಂದಲದಿಂದಾಗಿ ಸೋಲಾಪುರ ಹುಟುಗಿಯ 15 ಕಿ.ಮೀ. ಮಾರ್ಗ ನೆನೆಗುದಿಗೆ ಬಿದ್ದಿತ್ತು. ಅದೂ ಈಗ ಕೆಲಸ ನಡೆದಿದೆ. ಆದರೆ ಬಿಜಾಪುರ-ಗದಗ ನಡುವಿನ 200 ಕಿ.ಮೀ. ಮಾರ್ಗದ ಪರಿವರ್ತನೆ ಕುರಿತು ದೇವೇಗೌಡ ಸರಕಾರವಾಗಲಿ ಈಗಿನ ಬಿಜೆಪಿ ಸರಕಾರವಾಗಲೀ ಗಮನ ಹರಿಸದೆ ಈ ಭಾಗದ ಜನರಿಗೆ ಅಪಾರ ಅನ್ಯಾಯಮಾಡಿದೆ. ಹೋದ ವರ್ಷ ಬರೇ ರೂ. 5 ಕೋಟಿ ಮಂಜೂರು ಮಾಡಿದನ್ನು ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟಿಸಿ ರೇಲ್ವೆ ರೋಕೊ ಮಾಡಿ ಬಂಧನಕ್ಕೊಳಗಾಗಿದ್ದರು. ಈ ವರ್ಷವೂ ಬರೇ ರೂ 7 ಕೋಟಿ ಮಂಜೂರು ಮಾಡಿದ್ದರ ವಿರುದ್ಧ ಪ್ರಬಲ ಪ್ರತಿಭಟನೆ ನಡೆಸಲಾಯಿತು. ಗದಗ ಬಾಗಲಕೋಟೆ- ಬಿಜಾಪುರ ಜಿಲ್ಲೆಯ ಚೇಂಬರ ಆಫ್ ಕಾಮರ್ಸ್ ಪ್ರತಿನಿಧಿಗಳು ಬಾಗಲಕೋಟೆಯಲ್ಲಿ ಸಭೆ ಕರೆದಾಗ ಸಿಪಿಐ (ಎಂ) ಮುಖಂಡ ಎನ್.ಕೆ. ಉಪಾಧ್ಯಾಯ ಹಾಗೆಯೇ ಕಾಂಗ್ರೆಸ್, ಜನತಾದಳ, ಬಿಜೆಪಿ ಪಕ್ಷಗಳ ಪ್ರತಿನಿಧಿಗಳೆಲ್ಲಾ ಭಾಗವಹಿಸಿದ್ದರು. ಗೇಜು ಪರಿವರ್ತನೆ ಹೋರಾಟ ಸಮಿತಿ ರಚಿಸಿ ಎಪ್ರಿಲ್ -8 ರಂದು ಮೂರು ಜಿಲ್ಲೆಗಳಲ್ಲಿ ಬಂದ್ ಆಚರಿಸಿ ರೇಲ್ವೆ ರೋಕೋ ಮಾಡುವ ನಿರ್ಣಯವಾಯಿತು. ಈ ಸಂಘಟನೆಯ ರಾಜಕೀಯ ದುರುಪಯೋಗ ಮಾಡಿಕೊಳ್ಳ ಬಾರದೆಂಬ ನಿರ್ಣಯ ಕೈಗೊಂಡಿದ್ದರೂ ಕೂಡಾ ಬಿಜೆಪಿಯವರು ರಾಜಕೀಯ ದುರುಪಯೋಗ ಮಾಡಿಕೊಂಡು ಬಂದ್ ಕಾರ್ಯಕ್ರಮವನ್ನು ಏಕೈಕವಾಗಿ ಮುಂದೂಡುವ ಪ್ರಕಟಣೆ ಮಾಡಿ ಗೊಂದಲ ಉಂಟು ಮಾಡಿದಾಗ ಅದನ್ನು ಧಿಕ್ಕರಿಸಿ ಬಿಜಾಪುರ, ಬಾದಾಮಿ ಗದಗಗಳಲ್ಲಿ ಸಂಪೂರ್ಣ ಬಂದ್ ಮತ್ತು ಯಶಸ್ವಿ ರೇಲ್ವೆ ರೋಕೋ ನಡೆಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇದರಲ್ಲಿ ಮಹತ್ವದ ಪಾತ್ರವಹಿಸಿ ಬಿಜೆಪಿಯ ಒಡಕು ನೀತಿಯನ್ನು ಬಯಲಿಗೆಳೆಯಿತು. ಈ ಹೋರಾಟದ ಪ್ರತಿಫಲವಾಗಿ ಹೆಚ್ಚಿನ ಹಣ ಮಂಜೂರು ಮಾಡಿ ಕೆಲಸ ತ್ವರಿತಗೊಳಿಸುವ ಆಶ್ವಾಸನೆ ಸಿಕ್ಕಿದೆ.

- ಎನ್.ಕೆ.ಉಪಾಧ್ಯಾಯ

ಏಜೆನ್ಸಿದಾರರಿಗೆ ಸೂಚನೆ

ಐಕ್ಯರಂಗ ಕಳೆದ ವಾರ ಸಂಚಿಕೆ(ಸಂಖೆಯ 16) ಪ್ರಕಟವಾಗಲಿಲ್ಲ. ಈಗಾಗಲೇ ಹಲವು ಬಾರಿ ನಮ್ಮ ಏಜೆನ್ಸಿದಾರರಿಗೆ ತಿಳಿಸಿದಂತೆ ಪತ್ರಿಕೆ ಎದುರಿಸುತ್ತಿರುವ ಹಣದ ತೀವ್ರ ಮುಗ್ಗಟ್ಟಿನಿಂದಾಗಿ ಈ ಸಂಚಿಕೆ ಪ್ರಕಟವಾಗಲಿಲ್ಲ. ನಾವು ಹಲವು ಬಾರಿ ಮನವಿ ಮಾಡಿಕೊಂಡರೂ ಹಲವು ಏಜೆಂಟರು ತಮ್ಮಬಿಲ್ ಬಾಕಿಯ ಪಾವತಿಯ ಬಗ್ಗೆ ಮುತುವರ್ಜಿ ವಹಿಸುತ್ತಿಲ್ಲ. ಇನ್ನು ಮುಂದೆ 3 ತಿಂಗಳಿಗಿಂತ ಹೆಚ್ಚು ಬಾಕಿ ಯಿಟ್ಟುಕೊಳ್ಳುವ ಏಜೆನ್ಸಿಗಳಿಗೆ ಕಟ್ಟು ನಿಟ್ಟಾಗಿ ಪತ್ರಿಕೆಯನ್ನು ನಿಲ್ಲಿಸಲಾ ಗುತ್ತದೆ. ಏಜೆನ್ಸಿದಾರರು ತಮ್ಮ ಬಾಕಿ ಪಾವತಿಗೆ ಶೀಘ್ರವೇ ಕ್ರಮ ಕೈಗೊಂಡು ಸಹಕರರಿಸ ಬೇಕಾಗಿ ಕೋರುತ್ತೇವೆ

ಪುಟ 1 ರಿಂದ

ಸಂಪಾದಕೀಯ

ಹಾಗೂ ಭಜರಂಗ ದಳದ ಪಾತ್ರ ಕಾಣುತ್ತಿದ್ದರೂ ಕೂಡ ಯಾವುದೇ ಕೋಮುವಾದಿ ಶಕ್ತಿಗಳ ಪಾತ್ರ ಕಣ್ಣಿಗೆ ಕಾಣದಂತೆ ಇವರು ವರ್ತಿಸುತ್ತಿರುವುದು, ಪಟೇಲ್ ಸರ್ಕಾರಕ್ಕೆ ಯಾಡಿಯೂರಪ್ಪನವರ ಬೆಂಬಲ ಹಾಗೂ ಅವರಿಗೆ ಪಟೇಲರು ನೀಡುತ್ತಿರುವ ಒಳಬೆಂಬಲ ಇವೆಲ್ಲವು ಪಟೇಲರ ಯೋಚನೆ, ಒಳ ತರಂಗಗಳನ್ನು ಸೂಚಿಸುತ್ತಿದ್ದರೂ ಅವರ ಹಿಂಬಾಲಕರು ಅದನ್ನು ಗಮನಿಸದೆ ಕುರುಡಾಗಿ ಅವರ ಬಾಲ ಬಡಿಯತ್ತಿರುವ ಹಿನ್ನೆಲೆಯಲ್ಲಿ ಈ ಎಚ್ಚರ ಮಹತ್ವದ್ದು.

ಸಮೃದ್ಧ ಕರ್ನಾಟಕ-ಬಿಜೆಪಿಯ ಹೊಸ ನಾಟಕ

ಕರ್ನಾಟಕವನ್ನು ಆಳುತ್ತಿರುವ ಜನತಾದಳದ ಮುಖ್ಯಮಂತ್ರಿ ಜೆ.ಎಚ್. ಪಟೇಲರು ಇಂತಹ ನಿಲುವನ್ನು ತೆಗೆದುಕೊಳ್ಳುತ್ತಿರುವಾಗ ಬಿಜೆಪಿ ಇಡಿ ಕರ್ನಾಟಕದಲ್ಲಿ ಸಮೃದ್ಧ ಕರ್ನಾಟಕಕ್ಕಾಗಿ ಸಂಕಲ್ಪ ಯಾತ್ರೆ ಮಾಡುತ್ತಾ ಮುಂದಿನ ವಿಧಾನ ಸಭಾ ಚುನಾವಣೆಗಳಲ್ಲಿ ಅಧಿಕಾರಗಳಿಸುವುದಕ್ಕಾಗಿ ತೀವ್ರ ಪೈಪೋಟಿ ನಡೆಸುತ್ತಿದ್ದಾರೆ. ಸಾವಿರಾರು ಕಿಲೋಮೀಟರ್ ಕ್ರಮಿಸಿ ಹತ್ತಾರು ಸಾವಿರ ಹಳ್ಳಿ ಪಟ್ಟಣಗಳಲ್ಲಿ ತಮ್ಮ ತುತ್ತೂರಿ ಊದುತ್ತಿದ್ದಾರೆ.

ಲೋಕಸಭಾ ಚುನಾವಣೆಗಳ ನಂತರ ಕರ್ನಾಟಕ ರಾಜ್ಯ ಸರ್ಕಾರ ತಂತಾನೆ ನಮ್ಮ ಬುಟ್ಟಿಗೆ ಬಿತ್ತು ಎಂದು ಪುಲಕಿತರಾಗಿದ್ದ ಬಿಜೆಪಿಯ ಮಂದಿ ತಮ್ಮ ಕೇಂದ್ರ ಸರ್ಕಾರದ ಹುಚ್ಚಾಟಗಳು, ಜನರ ಜೀವನದ ಮೇಲಿನ ಧಾಳಿಗಳು ಇವುಗಳಿಂದ ಜನರು ತಮ್ಮ ಪಕ್ಷದಿಂದ ದಿನದಿಂದ ದಿನಕ್ಕೆ ಮಾರುದೂರ ಸರಿಯುತ್ತಿರುವುದನ್ನು ಗಮನಿಸಿದ, ರಾಜಸ್ಥಾನ, ಮಧ್ಯ ಪ್ರದೇಶ, ದೆಹಲಿಗಳಲ್ಲಿ ತಮ್ಮ ಪಕ್ಷಕ್ಕಾದ ಮರ್ಯಾದೆಯಿಂದ ಎಚ್ಚೆತ್ತು ಕೊಂಡು ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಹಲವು ಉಪಾಯಗಳಅ ಅನ್ವೇಷಣೆಯಲ್ಲಿ ತೊಡಗಿದರು. ಬೆಂಗಳೂರಿನಲ್ಲೇ ತಮ್ಮ ಪಕ್ಷದ ರಾಷ್ಟ್ರ ಕಾರ್ಯಕಾರಿ ಸಮಿತಿ ಯೆಂಬ ಜಂಬೂರಿ ನಡೆಸಿ ತೀವ್ರ ಚಿಂತನೆ ಮಾಡಿದರು. ಹುಟ್ಟಾ ಜನದ್ರೋಹಿಗಳಾದ ಇವರಿಗೆ ಮೊದಲು ಹೊಳೆದದ್ದೇ ಇಡೀ ಕರ್ನಾಟಕವನ್ನು ಕೋಮು ಕಿಚ್ಚಿನಲ್ಲಿ ಸುಡುವ ಉಪಾಯ. ಬಾಬಾಬುಡನ್ ಗಿರಿಯ ಸೂಫಿ ಸಂತರ ದರ್ಗಾವನ್ನು ಗುರಿಮಾಡಿ ರಾಜ್ಯದಲ್ಲಿ ಸೂಫಿ ಸಂತರು ಹಾಗೂ ಹಿಂದೂ ದೇವರುಗಳನ್ನು ಬೇರೆ ಬೇರೆ ಎಂದು ಭಾವಿಸದೆ ತಮ್ಮ ಮನದಾಳದಲ್ಲಿ ಇಬ್ಬರನ್ನೂ ನೆಲೆಗೊಳಿಸಿ ಪೂಜಿಸುತ್ತಿದ್ದ ಸಾಮರಸ್ಯದ ಸಂಸತಿಯ ಮೇಲೆ ಧಾಳಿಮಾಡಿ ಅದನ್ನು ಕೆಡಿಸದ ಹೊರತು ಕರ್ನಾಟಕದಲ್ಲಿ ತಮಗೆ ನೆಲೆಯಿಲ್ಲ ಎಂದು ಮನಗಂಡ ಬಿಜೆಪಿ ಇಂತಹ ಅನ್ಯೋನ್ಯತೆ ನಾಲ್ಕು ನೆಲೆಗಳಿಂದ ಜಾಥಾ ಹಾಗೂ ಬಾಬಾ ಬುಡನ್‌ಗಿರಿಯ ಮೇಲೆ ಧಾಳಿ ಆರಂಭಿಸಿದರು. ಆದರೆ ಜನ ಅದಕ್ಕೆ ನೀಡಬೇಕಾದ ತಿರಸ್ಕಾರ ಭಾವನೆಯಿಂದ ಈ ಸಂಚನ್ನು ನಿರಾಕರಿಸಿದರು. ಕರ್ನಾಟಕದಲ್ಲೆಲ್ಲಾ ಕೋಮು ಜ್ವಾಲೆಯನ್ನೆಬ್ಬಿಸುವ ಅವರ ಪ್ರಯತ್ನ ಹುಸಿಯಾಯಿತು.

ನಂತರ ಸುರತ್ಕಲ್‌ನಲ್ಲಿ ಕೇವಲ ಸುಳ್ಳುಗಳ ಸುರಿಮಳೆಯಿಂದ ಕೋಮು ದಂಗೆಯುನ್ನುಂಟುಮಾಡಿದರು. ಕೊಡಗು, ಮಧುಗಿರಿ, ನಂಜನಗೂಡು, ಇಲ್ಲೆಲ್ಲಾ ಇಂತಹ ಪ್ರಯತ್ನ ಮಾಡಿದರು. ಅದೂ ಹೆಚ್ಚಿನ ಫಲ ನೀಡಲಿಲ್ಲ.

ಕೊನೆಗೆ, ಕೋಮುವಾದಿ ಹಂಚಿಕೆಗಳೆಲ್ಲಾ ನಡೆಯದಾದಾಗ ವಿಧಿಯಿಲ್ಲದೆ ಜಾತ್ಯಾತೀತ ಘೋಷಣೆಯ ಮಾರ್ಗಕ್ಕೆ ಇಳಿದಿದ್ದಾರೆ. ಇಳಿದಿದ್ದಾರೆಯೇ ಹೊರತು ಏರಿಲ್ಲ. ಈಗ ಅವರ ಹೊಸ ನಾಟಕ-ಸಮೃದ್ಧ ಕರ್ನಾಟಕ. ಕರ್ನಾಟಕ ವೆಂಬ ವಿಶಾಲ ತೆರೆಯ ಮೇಲೆ ನಡೆಸಲು ಹೊರಟಿದ್ದಾರೆ.


ಹೊಸ ನಾಟಕ -ಸಮೃದ್ಧ ಕರ್ನಾಟಕ: ಈ ನಾಟಕದ ಪರದೆಯೆತ್ತುವ ಹೃರಲ್ಲಿಯೇ ಅದನ್ನು ಅರ್ಧಕ್ಕೇ ನಿಲ್ಲಿಸಿ ಪಾತ್ರಧಾರಿಗಳಲ್ಲಾ ದೆಹಲಿಗೆ ಧಾವಂತದಿಂದ ಧಾವಿಸಿದ್ದಾರೆ. ಅಲ್ಲಿ ಬೆಂಕಿ ಬಿದ್ದಿದೆ ತಮ್ಮೆಲ್ಲ ಕನಸುಗಳಿಗೆ, ಭಾರತವನ್ನು ಹಿಂದು ರಾಷ್ಟ್ರವಾಗಿಸುವ ತಮ್ಮ ಮಹಾನ್ ಕನಸಿಗೆ. ಇನ್ನು "ಸಮೃದ್ಧ ಕರ್ನಾಟಕ"ದ ವಿವಿಧ ದೃಶ್ಯಾವಳಿಗಳು, ಅಂಕಗಳು ಅಣಕುಗಳು, ಮೋಜುಗಳು ಇವು ಬೇರೆಯೇ ವಿಷಯ. ಬೇರೆಯ ಸಂದರ್ಭದಲ್ಲಿ ಈ ನಾಟಕದ ಅಂಗ ಅಂಗವನ್ನು ಬಿಚ್ಚಿಡುತ್ತೇವೆ.

ಕಳೆದ ವರ್ಷದ ಕೊನೆಯಾಗುತ್ತಿದ್ದಂತೆ ಭಾರತೀಯ ಜನತೆಗೆ ಒಂದು ಆತಂಕಕಾರಿ ಸುದ್ದಿಕಾದಿತ್ತು. ಸ್ವತಂತ್ರ ಭಾರತದಲ್ಲಿ ಸೇನಾಧಿಪತಿಯೊಬ್ಬರನ್ನು ವಜಾ ಮಾಡಿದ ಸುದ್ದಿಯದು. ಭಾರತದ ನೌಕಾ ಸೇನಾಧಿಪತಿ ಅಡ್ಮಿರಲ್ ವಿಷ್ಣು ಭಾಗವತರನ್ನು ವಜಾ ಮಾಡಿದ ಡಿಸೆಂಬರ್ 30, 1998 ರ ಈ ಅಭೂತಪೂರ್ವ ನಿರ್ಣಯ ಕೊನೆಗೆ ಬಿಜೆಪಿ ನೇತೃತ್ವದ ಸರ್ಕಾರಕ್ಕೇ ಮುಳುವಾಗಬಹುದು ಎಂದು ಆಗ ಬಹಳ ಮಂದಿ ನಿರೀಕ್ಷಿಸಿರಲಿಕ್ಕಿಲ್ಲ. ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುವ ಪ್ರತಿ ಪ್ರಯತ್ನದಲ್ಲೂ ರಕ್ಷಣಾ ಮಂತ್ರಿ ಫರ್ನಾಂಡೀಸ್ ಮತ್ತು ಅವರ ಸರ್ಕಾರ ತಮ್ಮ ದೇಶ-ವಿರೋಧಿ ಸ್ವರೂಪವನ್ನು ಹೆಚ್ಚೆಚ್ಚಾಗಿ ಬಯಲು ಮಾಡಿಕೊಳ್ಳುತ್ತಿದ್ದಾರೆ.



ಅಡ್ಮಿರಲ್ ಭಾಗವತ್ ವಜಾ ಪ್ರಕರಣ

ರಕ್ಷಣಾ ಮಂತ್ರಿಗಳೇ ಕಟಕಟೆಯಲ್ಲಿ



'ನೌಕಾ ಸೇನಾಧಿಪತಿಯಾಗಿ ಮುಂದುವರೆಯುವ ಅರ್ಹತೆಯಲ್ಲಿ ವಿಶ್ವಾಸ ಕಳಕೊಂಡಿರುವುದರಿಂದ' ಅಡ್ಮಿರಲ್ ವಿಷ್ಣು ಭಾಗವತರನ್ನು 'ತಕ್ಷಣದಿಂದಲೇ ಅವರ ಸೇವೆಯಿಂದ ಬಿಡುಗಡೆ ಮಾಡಲಾಗಿದೆ' (ಅಂದರೆ ವಜಾ ಮಾಡಲಾಗಿದೆ) ಎಂದು ಡಿಸೆಂಬರ್ 30 ರಂದು ಪ್ರಕಟಿಸಲಾಯಿತು.

ಅಡ್ಮಿರಲ್ ಭಾಗವತ್‌ರ ವಜಾಕ್ಕೆ ತಕ್ಷಣದ ಕಾರಣ ಕೇಂದ್ರ ಸಂಪುಟದ ಹತೋಟಿಯ ಅಧಿಕಾರವನ್ನು ಅವರು ಪ್ರಶ್ನಿಸಿದರು ಎಂದು. ವೈಸ್ ಅಡ್ಮಿರಲ್ ಹರಿಂದರ್ ಸಿಂಗ್‌ರವರನ್ನು ಉಪ ನೌಕಾ ಸೇನಾಧಿಪತಿಯಾಗಿ ನೇಮಿಸಿದ್ದನ್ನು ಒಪ್ಪಲು ಅವರು ನಿರಾಕರಿಸಿ ಸೇನೆಯ ಮೇಲೆ ನಾಗರಿಕ ಆಡಳಿತದ ಹತೋಟಿಯನ್ನು ಅವರು ಉಲ್ಲಂಘಿಸಿದ್ದಾರೆ ಎಂಬುದೇ ಅವರ ವಜಾಕ್ಕೆ ಕಾರಣ ಎಂದು ರಕ್ಷಣಾ ಮಂತ್ರಿಗಳು ಸಮರ್ಥಿಸಿಕೊಂಡರು. ಪ್ರಧಾನ ಮಂತ್ರಿಗಳು ಇಲ್ಲಿ ರಾಷ್ಟ್ರೀಯ ಭದ್ರತೆಯ ಪ್ರಶ್ನೆಯಿದೆ ಎಂದು ಸೂಚ್ಯವಾಗಿ ಹೇಳಿದರು. ಅಡ್ಮಿರಲ್ ಭಾಗವತ್ ಆಗ ಪ್ರತಿಕ್ರಿಯಿಸಿರಲಿಲ್ಲ. ಆದರೆ ಅವರ ಪತ್ನಿ ನಿಲೋಫರ್ ಭಾಗವತ್ ಬಿಜೆಪಿ ಸರಕಾರದ ಕೋಮುವಾದಿ ಪಕ್ಷಪಾತದಿಂದ ಈ ವಜಾ ಆಗಿದೆಯೆಂದರು.

ಎತ್ತಣಿಂದೆತ್ತ ಸಂಬಂಧ?

ಅವರ ಈ ಪ್ರತಿಕ್ರಿಯೆಗೆ ಕಾರಣಗಳಿವೆ. ಮೇಲೆ ಹೇಳಿದ ವೈಸ್ ಅಡ್ಮಿರಲ್ ಹರಿಂದರ್ ಸಿಂಗ್ ಮಾರ್ಚ್ 22, 1998 ರಲ್ಲಿ ತನ್ನ ಸೇನಾಧಿಪತಿ ತನ್ನ ವಿರುದ್ಧ ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ ಎಂದು ತನ್ನ ಮೇಲಧಿಕಾರಿಗೆ ಅಧಿಕೃತ ದೂರು ಕೊಟ್ಟಿದ್ದರು. ನೌಕಾಪಡೆಯ ಮುಖ್ಯಾಲಯ ಈ ದೂರನ್ನು ತಿರಸ್ಕರಿಸಿದಾಗ ಅವರು ಕಲ್ಕತ್ತಾ ಹೈಕೋರ್ಟಿಗೂ ಹೋದರು. ಹೈಕೋರ್ಟ್‌ಗೆ ಸಲ್ಲಿಸಿದ ಅವರ ಶಪಥ ಪತ್ರ(ಅಫಿಡವಿಟ್)ದಲ್ಲಿ ನಿಲೋಫರ್ ಭಾಗವತ್ 'ಅರೆ ಮುಸ್ಲಿಂ', ಸಿಪಿಐ ಸಹಾನುಭೂತಿ ಇರುವವರು ಎಂದೆಲ್ಲಾ ಹೇಳಲಾಗಿತ್ತು. ತನ್ನ ಬಡ್ತಿಯ ವಿಷಯದಲ್ಲಿ ಅವರು ತನ್ನ ಮೇಲಧಿಕಾರಿಯ ಪತ್ನಿಯ ಹೆಸರನ್ನೇಕೆ ಎಳೆಯಬೇಕು? ಇದು ಸಹಜವಾಗಿ ಏಳುವ ಪ್ರಶ್ನೆ. 1992-93 ರ ಮುಂಬೈಯ ಗಲಭೆಗಳ ಕುರಿತು ಶ್ರೀಕೃಷ್ಣ ಆಯೋಗದ ತನಿಖೆಗಳಲ್ಲಿ ನಿಲೋಫರ್‌ರವರು ಸಿಪಿಐ ನ ಪರ ವಕೀಲರಾಗಿ ಶಿವಸೇನೆಯ ಮುಖಂಡರನ್ನು ಖಾರವಾಗಿ, ನೇರವಾಗಿ ಪ್ರಶ್ನಿಸಿದ್ದರು. ಆಗ ಅಡ್ಮಿರಲ್ ಭಾಗವತ್‌ರಿಗೆ 'ನಿಮ್ಮ ಪತ್ನಿಯ ಈ ವರ್ತನೆಗಳಿಂದಾಗಿ ನಿಮಗೆ ತೊಂದರೆಯಾಗಬಹುದು' ಎಂಬ ಬೆದರಿಕೆಗಳೂ ಬಂದವಂತೆ.

ಕಲ್ಕತ್ತಾ ಹೈಕೋರ್ಟ್ ಹರಿಂದರ್ ಸಿಂಗರ ಫಿರ್ಯಾದನ್ನು ಪರಿಶೀಲಿಸಲು ನಿರಾಕರಿಸಿತು. ಅವರು ವಿಭಾಗಪೀಠಕ್ಕೆ ಅಪೀಲು ಮಾಡಿದರು. ಅದೂ ವಜಾ ಆಯಿತು. ಈ ನಡುವೆ ಭಾಗವತ್‌ರು ಹರಿಂದರ್ ಸಿಂಗ್ ವಿರುದ್ಧ ಮಾನನಷ್ಟದ ಅರ್ಜಿ ಹಾಕಿದರು. ಈ ವಿಷಯದಲ್ಲಿ ಬಂದ ನೋಟೀಸಿಗೆ ಹರಿಂದರ್ ಸಿಂಗ್ ಉತ್ತರಿಸಲೇ ಇಲ್ಲ.

ಇರಲಿ, ವೈಸ್ ಅಡ್ಮಿರಲ್ ಹರಿಂದರ್ ಸಿಂಗ್‌ರನ್ನು ತಮ್ಮ ಉಪ ಸೇನಾಧಿಪತಿಯಾಗಿ ಒಪ್ಪದಿರಲು ಅಡ್ಮಿರಲ್ ಭಾಗವತ್ ಇನ್ನೂ ಹಲವು ಕಾರಣಗಳನ್ನು ರಕ್ಷಣಾ ಮಂತ್ರಾಲಯಕ್ಕೆ ತಿಳಿಸಿದ್ದರು. ಸಿಖ್ ಸಮುದಾಯದ ಅಧಿಕಾರಿಗಳನ್ನು ಪ್ರತ್ಯೇಕಿಸಿ ಸಶಸ್ತ್ರ ಪಡೆಗಳಲ್ಲಿ ಕೋಮುವಾದ ಪ್ರಚೋದಿಸುವ ಪ್ರಯತ್ನ, ನೌಕಾಪಡೆಯ ಏಕೈಕ ಮುಸ್ಲಿಂ ಅಧಿಕಾರಿಯ ಮೇಲೆ ಅವರಿಗೆ ಕಾಶ್ಮೀರ ಉಗ್ರಗಾಮಿಗಳೊಂದಿಗೆ ಸಂಪರ್ಕವಿದೆಯೆಂಬ ಬುಡವಿಲ್ಲದ ಆಪಾದನೆ, ಅವರ ಮಿಲಿಟರಿ ಸಾಮರ್ಥ್ಯ ಹಾಗೂ ಹಣಕಾಸು ಋಜುತ್ವದ ಪ್ರಶ್ನೆಗಳು ಇವನ್ನೆಲ್ಲಾ ಗಮನಿಸಿ ಅವರನ್ನು 'ಉಪ ನೌಕಾಸೇನಾಧಿಪತಿಯಾಗಿ ನೇಮಿಸುವ ನಿರ್ಣಯ ಜಾರಿ ಮಾಡಲಾಗುವಂತದಲ್ಲ ಎಂದು ಡಿಸೆಂಬರ್ 28 ರಂದು ಅಡ್ಮಿರಲ್ ಭಾಗವತ್ ರಕ್ಷಣಾ ಇಲಾಖೆಗೆ ಬರೆದರು - ಎರಡು ದಿನಗಳ ನಂತರ ಅಡ್ಮಿರಲ್ ಭಾಗವತ್ ವಜಾಗೊಂಡರು. ಇದಕ್ಕೆ ಮೊದಲು ಹೈಕೋರ್ಟಿನಲ್ಲಿ ವಿಫಲವಾದ ಹರಿಂದರ್ ಸಿಂಗ್ ರವರ ಅರ್ಜಿಯನ್ನು ಪರಿಶೀಲಿಸಿದ ರಕ್ಷಣಾ ಮಂತ್ರಾಲಯ ಭಾಗವತ್‌ರವರು ಈ ಅಧಿಕಾರಿಯ ಬಗ್ಗೆ ಬರೆದ ಪ್ರತಿಕೂಲ ಟಿಪ್ಪಣಿಗಳನ್ನು ತೆಗೆದುಹಾಕಲು ಆಗಸ್ಟ್ 12 ರಂದು ನಿರ್ಧರಿಸಿತು ಎಂದು ತಿಳಿದುಬಂದಿದೆ.

ಭಾಗವತ್‌ರ ಸವಾಲು

ಸುಮಾರು ಎರಡು ತಿಂಗಳು ಮೌನವಾಗಿದ್ದ ಅಡ್ಮಿರಲ್ ಭಾಗವತ್ ಫೆಬ್ರವರಿ 22 ರಂದು ಪತ್ರಿಕಾ ಸಮ್ಮೇಳನ ಕರೆದಾಗ ಈ ಪ್ರಕರಣ ಹೊಸ ತಿರುವು ಪಡಕೊಂಡಿತು.

ಒಬ್ಬ ಉತ್ತಮ ಶಿಸ್ತಿನ ಸೇನಾಧಿಪತಿಯನ್ನು ರಕ್ಷಣಾ ಮಂತ್ರಿಗಳು ಕಾನೂನು ಬಾಹಿರವಾಗಿ ವಜಾ ಮಾಡಿಸಿದರೇ? ಹಾಗಿದ್ದರೆ ಅವರ ನಿಜ ಉದ್ದೇಶವೇನಿತ್ತು? ಭಾಗವತ್‌ರ ಈ ಪತ್ರಿಕಾ ಸಮ್ಮೇಳನದ ನಂತರ ಎಲ್ಲಾ ದೇಶಪ್ರೇಮಿಗಳನ್ನು ಕಾಡಲಾರಂಭಿಸಿರುವ ಪ್ರಶ್ನೆಯಿದು. ತನ್ನ ವಜಾ ಒಂದು 'ರಾಜಕೀಯ ಮಿಲಿಟರಿ ಕ್ಷಿಪ್ರಕ್ರಾಂತಿ' ಎಂದರು ಅಡ್ಮಿರಲ್ ಭಾಗವತ್. ನಾಗರಿಕ ಅಧಿಕಾರವನ್ನು ತಾನು ಪ್ರಶ್ನಿಸಿದೆ ಎಂಬ ಕಾರಣಕ್ಕೆ ವಜಾ ಮಾಡಲಾಯಿತಾದರೂ, ಈ ಬಗ್ಗೆ ಯಾವುದೇ ಪುರಾವೆಯನ್ನು ಸರಕಾರ ಕೊಟ್ಟಿಲ್ಲ ಎಂದರು ಭಾಗವತ್. ಸೇನಾ ಪಡೆಗಳ ಮೇಲೆ ನಾಗರಿಕ ಹತೋಟಿಯನ್ನು ತಾನು ಪ್ರಶ್ನಿಸಿಲ್ಲ ಎಂದ ಭಾಗವತ್ ವಾಸ್ತವವಾಗಿ ನಾಗರಿಕ ಹತೋಟಿ ಯೆಂದರೇನು ಎಂಬ ಮೂಲಭೂತ ಪ್ರಶ್ನೆಯೆತ್ತಿದರು. 'ನಾಗರಿಕ ಹತೋಟಿ ಯನ್ನು ಒಂದು ಧೋರಣಾ ಚೌಕಟ್ಟಿನಲ್ಲಿ ನಿರ್ವಚಿಸಬೇಕು. ಹತೋಟಿ ಯುದ್ಧ, ಶಾಂತಿಗೆ ಸಂಬಂಧಪಟ್ಟದ್ದು, ರಣನೀತಿಗೆ ಸಂಬಂಧಪಟ್ಟದ್ದು. ನೇಮಕ, ಬಡ್ತಿ ಇತ್ಯಾದಿ ಸೇನಾಪಡೆಗಳ ದೈನಂದಿನ ಚಟುವಟಿಕೆಗಳಿಗೆ ಸಂಬಂಧಪಟ್ಟಿದ್ದಲ್ಲ' ಎಂದು ತಮ್ಮ ಕಣ್ಣೋಟವನ್ನು ಅವರು ದೇಶದ ಮುಂದಿಟ್ಟರು. ರಕ್ಷಣಾ ಮಂತ್ರಿಗಳು ಹರಿಂದರ್ ಸಿಂಗ್ ಬಗ್ಗೆ ಮೇಲಧಿಕಾರಿಯಾದ ತನ್ನ ಟಿಪ್ಪಣಿಗಳನ್ನೆಲ್ಲಾ ಬದಿಗೊತ್ತಿದ್ದೇ ಅಲ್ಲ, 'ಸೇನಾಧಿಪತ್ಯದ ಸರಪಣಿ'ಯನ್ನೇ ಬುಡಮೇಲು ಮಾಡಲು ಪ್ರಯತ್ನಿಸಿದರು. ಇದರಿಂದ ಇಡೀ ಸೈನಿಕ-ನಾಗರೀಕ ಸಂಬಂಧಗಳನ್ನು, ಸಶಸ್ತ್ರ ಪಡೆಗಳ ಶಿಸ್ತಿನ ಚೌಕಟ್ಟನ್ನು ಅವರು ಬುಡಮೇಲು ಮಾಡಿದರು ಎಂದು ಅಡ್ಮಿರಲ್ ಭಾಗವತ್ ಆಪಾದಿಸಿದರು.

"ಮಂತ್ರಿಗಳು ಸಶಸ್ತ್ರಪಡೆಗಳನ್ನು ಒಡೆಯಲು ಒಂದು ಕೋಮುವಾದಿ ಮನವಿಯನ್ನು ಬಳಸಿದ ಒಬ್ಬ ಹಿರಿಯ ಅಧಿಕಾರಿಯನ್ನು ಬೆಂಬಲಿಸಿದರು. ಜಾರ್ಜ್ ಫರ್ನಾಂಡೀಸ್‌ರಿಗೆ ದೊರೆತ ಆದೇಶವೂ ಅಂತದ್ದೇ" ಎಂದು ಅಡ್ಮಿರಲ್ ಭಾಗವತ್ ಟಿಪ್ಪಣಿ ಮಾಡಿದರು.

ಭಾಗವತರು ಹೊರಗೆಡಹಿದ ಸಂಗತಿಗಳು ಇಷ್ಟೇ ಅಲ್ಲ. ನೌಕಾಪಡೆ ಮೂರು ಸಶಸ್ತ್ರ ಪಡೆಗಳಲ್ಲಿ ಅತಿ ಹೆಚ್ಚು ಬಂಡವಾಳ ಖರ್ಚಿರುವ ಪಡೆ. ಆದ್ದರಿಂದ ಅಂತರ್ರಾಷ್ಟ್ರೀಯ ಶಸ್ತ್ರಾಸ್ತ್ರ ವ್ಯಾಪಾರಿಗಳು ಇದರ ಮೇಲೆ ಕಣ್ಣಿಟ್ಟಿರುತ್ತಾರೆ. ನೌಕಾ ಸೇನಾಧಿಕಾರಿಗಳನ್ನು ಬುಟ್ಟಿಗೆ ಹಾಕಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಇದನ್ನು ರಕ್ಷಣಾ ಮಂತ್ರಿಗಳ ಗಮನಕ್ಕೆ ತರಲಾಗಿತ್ತು. ಹಿಂದೆ ನೌಕಾ ಸೇನಾಧಿಪತಿಯಾಗಿದ್ದು ಈಗ ತನ್ನ ಮಗನ ಶಸ್ತ್ರಾಸ್ತ್ರ ವ್ಯಾಪಾರದಲ್ಲಿ ಭಾಗಿಯಾಗಿರುವ ಅಡ್ಮಿರಲ್ ನಂದಾ ಹಾಗೂ ಜಾರ್ಜ್ ಫರ್ನಾಂಡೀಸ್‌ರ ನಡುವೆ ನೇರ ಸಂಪರ್ಕವಿತ್ತು. ಹರಿಂದರ್ ಸಿಂಗ್ ಬಗ್ಗೆ ಪ್ರತಿಕೂಲ ಟಿಪ್ಪಣಿಗಳನ್ನು ರಕ್ಷಣಾ ಮಂತ್ರಿಗಳು ಗಮನಕ್ಕೆ ತಗೊಳ್ಳದಿರಲು ಇದು ಕಾರಣ ಎಂದರು ಭಾಗವತ್.

ಕೇವಲ ಭಾಗವತರ ಪ್ರಶ್ನೆಯಲ್ಲ

ಇನ್ನೂ ಮುಂದುವರೆದು ಅಡ್ಮಿರಲ್ ಭಾಗವತ್ ಅಂಡಮಾನ್ ಕರಾವಳಿಯಲ್ಲಿ ನಡೆಯುತ್ತಿರುವ ಶಸ್ತ್ರಾಸ್ತ್ರ ಕಳ್ಳ ಸಾಗಾಣಿಕೆ ಹಾಗೂ ಭಾರತದ ರಾಜಕೀಯಸ್ಥರ ನಡುವಿನ ಶಾಮೀಲಿನ ಆತಂಕಕಾರಿ ಸಂಗತಿಯನ್ನು ಹೊರಗೆಡಹಿದರು. ಫೆಬ್ರವರಿ 1998 ರಲ್ಲಿ ನೌಕಾಪಡೆ, ಕರಾವಳಿ ಪಡೆಯೊಂದಿಗೆ ಸೇರಿಕೊಂಡು ನಡೆಸಿದ ಒಂದು ಕಾರ್ಯಾಚರಣೆಯಲ್ಲಿ ಶಸ್ತ್ರಾಸ್ತ್ರಗಳು ಹಾಗೂ ಮಾದಕ ವಸ್ತುಗಳು ದೊಡ್ಡ ಪ್ರಮಾಣದಲ್ಲಿ ಸಿಕ್ಕಿಹಾಕಿಕೊಂಡವು. ಈ ನಂತರ ಈ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರೆಯಿತು. ಆದರೆ ಜುಲೈ 27, 1998 ರಂದು ಜಾರ್ಜ್ ಫರ್ನಾಂಡೀಸ್ ಸೇನಾಪಡೆಗಳಿಗೆ ಒಂದು ನಿರ್ದೇಶನ ಕಳಿಸಿದರು - ಇಂತಹ ಕಾರ್ಯಾಚರಣೆಗಳನ್ನು ನಡೆಸುವ ಮೊದಲು ರಕ್ಷಣಾ ಮಂತ್ರಾಲಯದ ಅನುಮತಿ ಪಡೆಯಬೇಕು ಎಂದರು. ಮೂರೂ ಸಶಸ್ತ್ರ ಪಡೆಗಳ ಸೇನಾಧಿಕಾರಿಗಳು ಈ ಬಗ್ಗೆ ಆಗಸ್ಟ್ 8 ರಂದು ರಕ್ಷಣಾ ಮಂತ್ರಿಗಳನ್ನು ಭೇಟಿ ಮಾಡಿ ಇಂತಹ ಕಾರ್ಯಾಚರಣೆಗಳಿಗೆ ಪೂರ್ವಾನುಮತಿ ಬೇಕಿಲ್ಲ ಎಂದು ಸ್ಪಷ್ಟಪಡಿಸಿದರು. ನಂತರ ರಕ್ಷಣಾಮಂತ್ರಿಗಳು ಇನ್ನೊಂದು ಪತ್ರ ಕಳಿಸಿ ಇಂತಹ ಕಾರ್ಯಾಚರಣೆಗಳು ಭಾರತದ ಆರ್ಥಿಕ ವಲಯಕ್ಕಷ್ಟೇ ಸೀಮಿತವಾಗಿರಬೇಕು ಎಂದು ನಿರ್ದೇಶಿಸಿದರು. ಇಂತಹ ನಿರ್ದೇಶನ ಅರ್ಥಹೀನವಾಗಿತ್ತು. ಏಕೆಂದರೆ ಕಳ್ಳ ಸಾಗಾಣಿಕೆಗಳಿಗೂ ಈ ವಲಯಕ್ಕೂ ಏನೇನೂ ಸಂಬಂಧವಿರಲಿಲ್ಲ. ಆದರೂ ಫರ್ನಾಂಡೀಸ್ ಇಂತಹ ನಿರ್ದೇಶನ ಏಕೆ ನೀಡಿದರು? ಬಹುಶಃ ಈ ಪ್ರಶ್ನೆಗೆ ಸಿಗುವ ಉತ್ತರದಲ್ಲೇ ಬಹಳಷ್ಟು ಸತ್ಯ ಅಡಗಿದೆ. ಫರ್ನಾಂಡೀಸರಿಗೆ ಅಂಡಮಾನ್ ಕಾರ್ಯಾಚರಣೆಗಳಲ್ಲಿ ಇಷ್ಟೊಂದು ಆಸಕ್ತಿ ಏಕೆ? ಎಲ್.ಟಿ.ಟಿ.ಇ., ಬರ್ಮಾ ಹಾಗೂ ಈಶಾನ್ಯ ಭಾರತದ ಬಂಡುಕೋರರು ರಕ್ಷಣಾ ಮಂತ್ರಿಗಳ ಮನೆಯಿಂದಲೇ ಕಾರ್ಯನಿರ್ವಹಿಸುತ್ತಿದ್ದಾರೆ ಏಕೆ? ಅಡ್ಮಿರಲ್ ಭಾಗವತ್‌ರ ಈ ಪ್ರಶ್ನೆ ಈಗ ಎಲ್ಲಾ ದೇಶಪ್ರೇಮಿಗಳ ಪ್ರಶ್ನೆಯಾಗಿದೆ.

ಆದರೆ ಜಾರ್ಜ್ ಫರ್ನಾಂಡೀಸ್ ಇದಕ್ಕೆ ಉತ್ತರ ನೀಡಿಲ್ಲ. ಬದಲು ಪತ್ರಿಕೆಗಳಲ್ಲಿ ಭಾಗವತರ ಬಗ್ಗೆ ಇನ್ನಷ್ಟು ದೋಷಾರೋಪಣೆಗಳು ಪ್ರಕಟವಾಗಲಾರಂಭಿಸಿದವು. ಇವೆಲ್ಲಾ ರಕ್ಷಣಾ ಮಂತ್ರಾಲಯದ ಪ್ರಚೋದನೆಯಿಂದ ಆಗುತ್ತಿವೆ ಎಂಬುದು ಎಲ್ಲರಲ್ಲಿರುವ ಗುಮಾನಿ. ನೌಕಾ ಸೇನಾಧಿಕಾರಿಗಳ ಗುಪ್ತ ವೈಯಕ್ತಿಕ ವರದಿಗಳನ್ನು ಅಡ್ಮಿರಲ್ ಭಾಗವತ್ ನಿಯಮಬಾಹಿರವಾಗಿ ಬದಲಿಸಿದ್ದಾರೆ ಎಂಬ ಈ ಸುದ್ದಿಗಳನ್ನು ಆಧರಿಸಿ ನೌಕಾಸೇನಾಧಿಪತ್ಯದ ಮುಖ್ಯಾಲಯದಿಂದ ಸ್ಪಷ್ಟೀಕರಣ ಕೇಳಲಾಯಿತು. ನೌಕಾ ಸೇನಾಧಿಪತಿಯಾಗಿ ಅಡ್ಮಿರಲ್ ಭಾಗವತ್‌ರ ಇಂತಹ ಕ್ರಮಗಳೆಲ್ಲಾ ವಿಧಿ-ವಿಧಾನಗಳಿಗೆ ಅನುಗುಣವಾಗಿಯೇ ಇದ್ದವು ಎಂಬ ವಿಚಾರ ಈಗ ಬಯಲಿಗೆ ಬರುತ್ತಿರುವಂತೆ ಜಾರ್ಜ್ ಫರ್ನಾಂಡೀಸ್‌ರು ದೇಶಕ್ಕೆ ಉತ್ತರಿಸಬೇಕಾದ ಪ್ರಶ್ನೆಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮಾರ್ಚ್ 14 ರಂದು ಅಡ್ಮಿರಲ್ ಭಾಗವತ್ "ಒಬ್ಬ ಮಾನವಂತ ವ್ಯಕ್ತಿಗೆ ನಿಜಸಂಗತಿ ಮುಂದಿಡಲು ಅವಕಾಶವಿರಬೇಕು" ಎನ್ನುತ್ತಾ ಪ್ರಕಟಿಸಿದ ಶಪಥಪತ್ರ ನೋಡಿದ ಮೇಲೆ ಈ ಪ್ರಶ್ನೆಗಳ ಗಹನತೆ ಮತ್ತಷ್ಟು ಹೆಚ್ಚುತ್ತದೆ.

ಈ ಹಿನ್ನೆಲೆಯಲ್ಲಿ ಸಹಜವಾಗಿಯೇ ಈ ಪ್ರಕರಣ ಸಂಸತ್ತಿನಲ್ಲೂ ಚರ್ಚೆಗೆ ಬರಬೇಕಾಗಿತ್ತು. ಅದನ್ನು ತಡೆಯಲು ಬಿಜೆಪಿ ನೇತೃತ್ವದ ಸರಕಾರ ಸರ್ವಪ್ರಯತ್ನ ನಡೆಸಿತು. ದೇಶದ ಭದ್ರತೆಯ ನೆಪವೊಡ್ಡಿತು. ಒಂದು ಸಮಿತಿ ರಚಿಸಿ ಅದರಲ್ಲೇ ಚರ್ಚೆಯಾಗಲಿ ಎಂದಿತು. ಕೊನೆಗೂ ನಿರ್ವಾಹವಿಲ್ಲದೆ ಚರ್ಚೆಗೆ ಸರಕಾರ ಒಪ್ಪಬೇಕಾಗಿ ಬಂತು. ಆದರೆ ಜಂಟಿ ಸಂಸದೀಯ ಸಮಿತಿಗೆ ಇದನ್ನು ಒಪ್ಪಿಸಲು ಅಥವಾ ಈ ಗಹನ ವಿಚಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂಬ ಬೇಡಿಕೆಯನ್ನು ಒಪ್ಪಲು ವಾಜಪೇಯಿ ಸರಕಾರ ನಿರಾಕರಿಸುತ್ತಲೇ ಇದೆ.

ಹತಾಶ ರಕ್ಷಣಾ ಮಂತ್ರಿ?

ತನ್ನನ್ನು ಸಮರ್ಥಿಸಿಕೊಳ್ಳುವ ಪ್ರಯತ್ನಗಳೆಲ್ಲವೂ ಇನ್ನಷ್ಟು ಪ್ರಶ್ನೆಗಳನ್ನೇ ಹುಟ್ಟುಹಾಕುತ್ತಿರುವುದನ್ನು ಕಂಡು ರಕ್ಷಣಾ ಮಂತ್ರಿಗಳು ಹತಾಶರಾಗುತ್ತಿರುವಂತೆ ಕಾಣುತ್ತದೆ. ವಾಜಪೇಯಿ ಸರಕಾರದ ಮಿತ್ರಪಕ್ಷವೇ ಫರ್ನಾಂಡೀಸರನ್ನು ರಕ್ಷಣಾ ಮಂತ್ರಾಲಯದಿಂದ ತೆಗೆದುಹಾಕಬೇಕು, ಅಡ್ಮಿರಲ್ ಭಾಗವತ್‌ರನ್ನು ವಾಪಸು ತಗೊಳ್ಳಬೇಕು ಎಂಬ ಬೇಡಿಕೆಯಿಟ್ಟ ಮೇಲೆ ಅವರ ಹತಾಶೆ ಮೇರೆ ಮೀರಿದಂತೆ ಕಾಣುತ್ತದೆ.

ಏಪ್ರಿಲ್ 6 ರಂದು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಫರ್ನಾಂಡೀಸ್ ತಮ್ಮ ಹಳೆಯ ಆಪಾದನೆಗಳನ್ನೇ ಪುನರುಚ್ಚರಿಸಿದರು. ತಮ್ಮ ಮೇಲೆ ಬಂದಿರುವ ಆಪಾದನೆಗಳನ್ನು ತಳ್ಳಿಹಾಕಲು ಪ್ರಯತ್ನಿಸಿದರು. ಅವರ ಈ ಪ್ರಯತ್ನದಲ್ಲಿ ನೆರವಾಗಲು ಅಕ್ಕ-ಪಕ್ಕದಲ್ಲಿ ಬಿಜೆಪಿಯ ಭಾರೀ ಕುಳಗಳಾದ ವಾರ್ತಾಮಂತ್ರಿ ಪ್ರಮೋದ್ ಮಹಾಜನ್ ಹಾಗೂ ವಿದ್ಯುತ್ ಮಂತ್ರಿ ರಂಗರಾಜನ್ ಕುಮಾರಮಂಗಲಂ ಕೂಡಾ ಇದ್ದರು. ಈ ಬಾರಿ ಫರ್ನಾಂಡೀಸ್ ಹೊಸದೊಂದು ಆಪಾದನೆ ಹಾಕಿದರು. ಅಡ್ಮಿರಲ್ ಭಾಗವತ್ ನೌಕಾಪಡೆಯ ಒಂದು ಗುಪ್ತ ಯೋಜನೆಯ ಸೂಕ್ಷ್ಮ ಸಂಗತಿಗಳು 'ಸೋರಿ

→


ಜಾರ್ಜ್ ಫೆರ್ನಾಂಡೀಸ್ ಅಂಡಮಾನ್ ಪ್ರದೇಶದಲ್ಲಿ ಸಶಸ್ತ್ರ ಪಡೆಗಳ ಕಾರ್ಯಾಚರಣೆಗಳನ್ನು ಏಕೆ ಮಿತಿಗೊಳಿಸಬಯಸಿದರು?



ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ಅಡ್ಮಿರಲ್ ಭಾಗವತರ ಮೇಲೆ ಈಗ ಹೊಸ-ಹೊಸ ಆಪಾದನೆಗಳನ್ನು ಹಾಕುತ್ತಿದ್ದಾರೆ. ಆದರೆ ಇವು ಯಾವುವೂ ನೌಕಾ ಸೇನಾಧಿಪತಿಯನ್ನು ವಜಾಮಾಡಿದ, ಆ ಮೂಲಕ ಸಶಸ್ತ್ರ ಪಡೆಗಳ ಮನೋಬಲಕ್ಕೆ ಗಂಭೀರ ಆಘಾತವುಂಟು ಮಾಡಿದ ಸ್ವೇಚ್ಛಾಚಾರದ ಕ್ರಮಕ್ಕೆ ಒಪ್ಪತಕ್ಕ ಸಮರ್ಥನೆಗಳನ್ನು ಒದಗಿಸುತ್ತಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಜಾರ್ಜ್ ಫರ್ನಾಂಡೀಸರು ಜುಲೈ 27,1998 ರಂದು ರಕ್ಷಣಾ ಮಂತ್ರಾಲಯ ಕಳಿಸಿದ ಸುತ್ತೋಲೆಯ ಬಗ್ಗೆ ಇನ್ನೂ ವಿವರಣೆ ನೀಡಿಲ್ಲ ಎಂದು ಪೊಲಿಟ್ ಬ್ಯೂರೋ ನೆನಪಿಸಿದೆ. ಈ ಸುತ್ತೋಲೆ ಅಂಡಮಾನ್ ಪ್ರದೇಶದಲ್ಲಿ ಸಶಸ್ತ್ರ ಪಡೆಗಳ ಕಾರ್ಯಾಚರಣೆಯ ಮೇಲೆ ಮಿತಿ ಹಾಕಿತ್ತು. ಫೆಬ್ರವರಿ 1998 ರಲ್ಲಿ ಬರ್ಮಾದ ಸಶಸ್ತ್ರ ಬಂಡುಕೋರರಿಗೆಂದು ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳ ಕಳ್ಳಸಾಗಾಣಿಕೆಯಾಗುತ್ತಿದ್ದ ಹಡಗನ್ನು ತಡೆದ ನಂತರ ಈ ಕಾರ್ಯಾಚರಣೆ ಆರಂಭವಾಗಿತ್ತು. ಈ ಶಸ್ತ್ರಾಸ್ತ್ರಗಳು ನಂತರ ಈಶಾನ್ಯ ಭಾರತದಲ್ಲಿನ ಸಶಸ್ತ್ರ ಉಗ್ರಗಾಮಿಗಳಿಗೂ ತಲುಪುತ್ತಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳು ಕರೆನ್ ನ್ಯಾಶನಲ್ ಯುನಿಯನ್‌ಗೆಂದು ಕಳಿಸಿದವುಗಳು. 1950 ರ ದಶಕದಿಂದಲೂ ಸಿಐಎ ಬರ್ಮಾದ ಸಶಸ್ತ್ರ ಗುಂಪುಗಳಿಗೆ ಹಣ ಒದಗಿಸುತ್ತಾ ಬಂದಿದೆ. ಭಾರತದ ಭದ್ರತೆಗೆ ಹಾನಿಕಾರಕವಾದ ಇಂತಹ ಕಾರ್ಯಾಚರಣೆಗಳನ್ನು ಫರ್ನಾಂಡೀಸ್ ಏಕೆ ಈಗಲೂ ರಕ್ಷಿಸುತ್ತಿದ್ದಾರೆ ಎಂಬುದಕ್ಕೆ ವಿವರಣೆ ನೀಡಬಲ್ಲರೇ? ಇದು ಸಿಪಿಐ(ಎಂ) ಪ್ರಶ್ನೆ ಮಾತ್ರವಲ್ಲ, ಎಲ್ಲಾ ದೇಶಪ್ರೇಮಿಗಳ ಪ್ರಶ್ನೆ.

ಫರ್ನಾಂಡೀಸ್ ಅಜೆಂಡಾ?



ಇತ್ತೀಚಿನ ಸಂದರ್ಶನವೊಂದರಲ್ಲಿ ಜಾರ್ಜ್ ಫರ್ನಾಂಡೀಸ್ 'ಸ್ವತಂತ್ರ ಟಿಬೆಟ್' ಗೆ ತನ್ನ ಬೆಂಬಲವನ್ನು ಪುನರುಚ್ಚರಿಸಿದ್ದಾರೆ. ಇದು ವಾಜಪೇಯಿ ಸರಕಾರದ ನಿಲುವೇನು? ರಕ್ಷಣಾ ಮಂತ್ರಿಗಳು ದೇಶದ ಹಿತಾಸಕ್ತಿಗಳಿಗೆ ಮಾರಕವಾದ ತನ್ನದೇ ಅಜೆಂಡಾವನ್ನು ಮುಂದುವರಿಸಲು ಸಾಧ್ಯವೇ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕೇಳಿದೆ.

ತನ್ನ ಸೇನಾಧಿಪತಿಯ ವಿರುದ್ಧವೇ ಬಹಿರಂಗ ಕೋಮುವಾದಿ ಅಪಾದನೆ ಹಾಕಿದ ಇನ್ನೊಬ್ಬ ನೌಕಾ ಸೇನಾಧಿಕಾರಿಗೆ ನೀಡಿರುವ ಪೋಷಣೆಗೆ ಯಾವುದೇ ವಿವರಣೆ ನೀಡಿಲ್ಲ.

"ಸಶಸ್ತ್ರ ಪಡೆಗಳೊಂದಿಗೆ ಈ ರೀತಿ ವರ್ತಿಸಬಹುದು ಹಾಗೂ ರಾಷ್ಟ್ರೀಯ ಭದ್ರತೆಯ ಹೆಸರು ಹೇಳಿಕೊಂಡು ಈ ಬಗ್ಗೆ ಚರ್ಚೆಯನ್ನು ದಮನ ಮಾಡಬಹುದು ಎಂದು ಜಾರ್ಜ್ ಫರ್ನಾಂಡೀಸ್ ಹಾಗೂ ವಾಜಪೇಯಿ ಸರಕಾರ ಯೋಚಿಸಿದ್ದರೆ ಅವರು ದೊಡ್ಡ ತಪ್ಪು ಮಾಡುತ್ತಿದ್ದಾರೆ. ಜಾರ್ಜ್ ಫರ್ನಾಂಡೀಸ್ ದೇಶದ ಸಶಸ್ತ್ರ ಪಡೆಗಳಲ್ಲಿ ಕೈ ಹಾಕಿ ರಕ್ಷಣಾ ಮಂತ್ರಿಯಾಗಿದ್ದುಕೊಂಡು ತನ್ನ ಪ್ರಿಯ ಅಜೆಂಡಾವನ್ನು ತರಲು ಪ್ರಯತ್ನಿಸುತ್ತಿದ್ದಾರೆ ಎಂಬ ಅಪಾದನೆ ಹೊತ್ತು ಕಟಕಟೆಯಲ್ಲಿದ್ದಾರೆ. ವಾಜಪೇಯಿ ಸರಕಾರ ಈ ಗಂಭೀರ ಪರಿಸ್ಥಿತಿಯ ಪರಿಣಾಮಗಳನ್ನು ಎದುರಿಸಲೇಬೇಕಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಚ್ಚರಿಸಿದೆ.

ರಕ್ಷಣಾ ಮಂತ್ರಿಗಳು ಜಾಗ ಖಾಲಿ ಮಾಡಲಿ

ನೌಕಾಸೇನಾಧಿಪತಿ ಅಡ್ಮಿರಲ್ ಭಾಗವತ್‌ರನ್ನು ಬೇಕಾಬಿಟ್ಟಿ ವಜಾ ಮಾಡಿದ್ದಕ್ಕೆ ಕಾರಣಗಳನ್ನು ಸಂಸತ್ತಿಗೆ ತಿಳಿಸಲು ನಿರಾಕರಿಸುವ, ಎರಡೂ ಸದನಗಳಲ್ಲಿ ಈ ಬಗ್ಗೆ ಒಂದು ಗಂಭೀರ ಚರ್ಚೆ ನಡೆಯದಂತೆ ಅಡ್ಡಿ-ಆತಂಕಗಳನ್ನು ಒಡ್ಡಿರುವ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ಈಗ ಮಾಧ್ಯಮಗಳ ಮೂಲಕ ತನ್ನ ಸಮರ್ಥನೆಯ ಪ್ರಚಾರ ನಡೆಸಿದ್ದಾರೆ. ಸಂಬಂಧಪಟ್ಟ ಎಲ್ಲಾ ಕಾಗದ ಪತ್ರಗಳನ್ನು ಸಂಸತ್ತಿನ ಎದುರು ಇಡಬೇಕು ಎಂದಾಗ ರಾಷ್ಟ್ರೀಯ ಭದ್ರತಾ ಕಾರಣಗಳಿಂದಾಗಿ ಹಾಗೆ ಮಾಡಲಾಗದು ಎಂದು ವಾಜಪೇಯಿ ಸರ್ಕಾರ ಹೇಳಿತ್ತು. ಆದರೆ ಈಗ ಅದೇ ಸರಕಾರದ ರಕ್ಷಣಾಮಂತ್ರಿಯೇ ಸ್ವತಃ ದೂರದರ್ಶನ ಸಂದರ್ಶನವೊಂದರಲ್ಲಿ ಗೋಪ್ಯ ಕಾಗದ ಪತ್ರಗಳಲ್ಲಿನ ಅಂಶಗಳನ್ನು ತಿಳಿದ್ದಾರೆ. ಇದು ಸಂಸತ್ತಿನ ಬಗ್ಗೆ ಅವರಿಗಿರುವ ತೀವ್ರ ತಿರಸ್ಕಾರವನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಕಳೆದ ವರ್ಷ ಅಂಡಮಾನ್ ಬಳಿ ಶಸ್ತ್ರಾಸ್ತ್ರಗಳಿದ್ದ ಒಂದು ಹಡಗನ್ನು 'ಆಪರೇಷನ್ ಲೀಚ್'ನಲ್ಲಿ ಹಿಡಿದು ಹಾಕಿದ ನಂತರ ಶಸ್ತ್ರಾಸ್ತ್ರ ಕಳ್ಳ ಸಾಗಾಣಿಕೆಯ ವಿರುದ್ಧ ಸಶಸ್ತ್ರ ಕಾರ್ಯಾಚರಣೆಗಳಲ್ಲಿ ತನ್ನ ಮಧ್ಯಪ್ರವೇಶವನ್ನು ಮುಚ್ಚಿಕೊಳ್ಳಲು ರಕ್ಷಣಾ ಮಂತ್ರಿಗಳು ಹತಾಶ ಯತ್ನ ನಡೆಸಿದ್ದಾರೆ. ಈ ಬಗ್ಗೆ ಜಂಟಿ ಸಂಸದೀಯ ಸಮಿತಿಯಿಂದ ಒಂದು ಪೂರ್ಣ ಪ್ರಮಾಣದ ತನಿಖೆ ನಡೆಸದೆ ಸೂಕ್ತ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಅದುವರೆಗೆ ಜಾರ್ಜ್ ಫರ್ನಾಂಡೀಸ್ ರಕ್ಷಣಾ ಮಂತ್ರಿಯಾಗಿ ಮುಂದುವರೆಯುವುದು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

→

ಹೋಗುವಂತೆ ಮಾಡಿದರು' ಎಂಬುದೇ ಆ ಆಪಾದನೆ. ಮರುದಿನ ದೂರದರ್ಶನ ಕಾರ್ಯಕ್ರಮವೊಂದರಲ್ಲಿ ಇನ್ನೂ ಸ್ಪಷ್ಟವಾಗಿ ಅವರ ಮೇಲೆ 'ದೇಶದ್ರೋಹ'ದ ಆಪಾದನೆ ಯನ್ನೇ ಹಾಕಿದರು. ಮಿಲಿಟರಿ ನ್ಯಾಯಾಲಯ ದಲ್ಲಿ ಅವರ ವಿಚಾರಣೆಯನ್ನು (ಕೋರ್ಟ್ ಮಾರ್ಶಲ್) ನಡೆಸಬೇಕಾಗಬಹುದು ಎಂದು ಸೂಚಿಸಿದರು. ಇದರಿಂದಲೂ ತನ್ನನ್ನು ಸಮರ್ಥಿಸಿಕೊಳ್ಳಲಾಗಿಲ್ಲ ಎಂದನಿಸಿದಾಗ 'ದೂರದರ್ಶನ'ದಲ್ಲಿ ಒಂದು ದೀರ್ಘ ಸಂದರ್ಶನ ಏರ್ಪಡಿಸಿದರು. ಅದೂ ಪ್ರಯೋಜನಕಾರಿ ಯಾಗಿಲ್ಲ. ಜನಗಳ ಪ್ರಶ್ನೆಗೆ ಅದರಲ್ಲೂ ಉತ್ತರ ಸಿಕ್ಕಿಲ್ಲ.

ಫರ್ನಾಂಡೀಸರು ಹೇಳುತ್ತಿರುವ 'ಗುಪ್ತ ಯೋಜನೆ' ಪರಮಾಣು ಸಬ್‌ಮೆರಿನ್ ಕುರಿತಾದ್ದು. ಈ ಬಗ್ಗೆ ಇಂಟರ್‌ನೆಟ್‌ನಲ್ಲಿ ಈಗ 700-800 ಲೇಖನಗಳಿವೆ. ಯಾರೂ ಅದನ್ನು ನೋಡಬಹುದು ಎಂದು ಅಡ್ಮಿರಲ್ ಭಾಗವತ್ ಪ್ರತಿಕ್ರಿಯಿಸುತ್ತಾ ಹೇಳಿದ್ದಾರೆ. ಇಷ್ಟಕ್ಕೂ ಈ ಯೋಜನೆಯ ಬಗ್ಗೆ ಮೊದಲು ಪ್ರಕಟವಾದದ್ದು ದಿಲ್ಲಿಯ ಪತ್ರಿಕೆಯೊಂದರಲ್ಲಿ, ಅದರಲ್ಲಿ ರಕ್ಷಣಾ ಮಂತ್ರಾಲಯದ ಮೂಲಗಳನ್ನು ಉದ್ಧರಿಸಲಾಗಿತ್ತು ಎಂದು ಅಡ್ಮಿರಲ್ ಭಾಗವತ್ ಹೇಳಿದ್ದಾರೆ. ಅದಾದ 25 ದಿನಗಳ ನಂತರವೇ ಅದೇ ವಿಷಯದಲ್ಲಿ ಇನ್ನೊಂದು ಪತ್ರಿಕೆಯಲ್ಲಿ ಇನ್ನೊಂದು ವರದಿ ಬಂತು. ತನ್ನ ಹೆಸರನ್ನು ತೆಗೆದುಕೊಳ್ಳಲಾಗಿತ್ತು, ಆದರೆ ಅದಕ್ಕೂ, ತನಗೂ ಸಂಬಂಧವಿಲ್ಲ ಎಂದಿದ್ದಾರೆ ಭಾಗವತ್. ಅದೇನೇ ಇರಲಿ, ಈ ಬಗ್ಗೆ ಸಂಬಂಧಪಟ್ಟ ಸೇನಾಧಿಪತಿಗೆ ತನ್ನ ಸಮಜಾಯಿಷಿ ನೀಡಲು ಅವಕಾಶ ಕೊಡದೆಯೇ ಆತನನ್ನು ವಜಾ ಮಾಡಲು ಸಾಧ್ಯವೇ ಎಂಬುದು ಅಡ್ಮಿರಲ್ ಭಾಗವತ್‌ರ ಪ್ರಶ್ನೆ.

'ಕೋರ್ಟ್ ಮಾರ್ಷಲ್ ಎದುರಿಸಲು ನನಗೆ ಬಹಳ ಸಂತೋಷವಾಗುತ್ತದೆ. ಆಪಾದನೆಗಳನ್ನು, ಅದಕ್ಕೆ ಪುರಾವೆಗಳನ್ನು ಒದಗಿಸಲಿ" ಎಂದು ಸವಾಲು ಹಾಕಿರುವ ಅಡ್ಮಿರಲ್ ಭಾಗವತ್ 'ಕೋರ್ಟ್ ಮಾರ್ಷಲ್ ಬಗ್ಗೆ ಮಾತನಾಡುವವರೇ, ಜನತೆಯ ನ್ಯಾಯಾಲಯದೆದುರು ವಿಚಾರಣೆಗೆ ಒಳಗಾಗಬೇಕಾಗುತ್ತದೆ'' ಎಂದಿದ್ದಾರೆ.

ಹೌದು, ಜಾರ್ಜ್ ಫರ್ನಾಂಡೀಸ್ ಜನಗಳ ಬಹಳಷ್ಟು ಗಹನ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ - ಅವರು ಮಾತ್ರವಲ್ಲ, ಬಿಜೆಪಿ ಮುಖಂಡರೂ ಕೂಡಾ.

ಉತ್ತರ ಕರ್ನಾಟಕ ರಾಜ್ಯದ ಬೇಡಿಕೆಗೆ ಸಿಪಿಐ(ಎಂ) ಉಗ್ರ ವಿರೋಧ

1.ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂಬ ಬೇಡಿಕೆಯನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸೆಕ್ರಟಾರಿಯೇಟ್ ತೀವ್ರವಾಗಿ ವಿರೋಧಿಸಿದೆ. ಪದೇ ಪದೇ ಇಂತಹ ಬೇಡಿಕೆ ಮುಂದಿಡುತ್ತಿರುವುದನ್ನು ಉಗ್ರವಾಗಿ ಖಂಡಿಸಲಾಗಿದೆ. ಇಂತಹ ವಿಭಜನಕಾರಿ ಪ್ರವೃತ್ತಿಗಳನ್ನು ಬೆಳೆಸುವುದು ಉತ್ತರ ಕರ್ನಾಟಕದ ಬೆಳವಣಿಗೆಗೆ ಮಾರಕವೇ ಹೊರತು ಸಾಧಕವಲ್ಲ ಎಂಬುದನ್ನು ಜನತೆ ಅರಿತು ಈ ಪ್ರತ್ಯೇಕತಾವಾದಿಗಳನ್ನು ತಿರಸ್ಕರಿಸಬೇಕು.

ಪ್ರತೇಕ ರಾಜ್ಯದ ರಚನೆ ಬೇಡಿಕೆಯು ದೇಶದಲ್ಲಿ ಬಹಳದೀಘ ಕಾಲದ ಚರ್ಚೆ ಚಳುವಳಿಗಳ ಫಲವಾಗಿ ಸಾಧಿತವಾದ ಭಾಷಾವಾರು ಪ್ರಾಂತ್ಯಗಳ ರಚನೆಯ ತತ್ವಕ್ಕೆ ವಿರೋಧವಾದದ್ದು. ಹಿಂದೆ ಏಕೀಕರಣ ಚಳುವಳಿಯಲ್ಲಿ ಉತ್ತರ ಕರ್ನಾಟಕದ ಜನತೆ ಧೀಮಂತ ಪಾತ್ರ ನಿರ್ವಹಿಸಿದ್ದಾರೆ- ಎಂಬುದನ್ನು ಸಿಪಿಐ(ಎಂ) ನೆನಪಿಸಿದೆ.

ಪ್ರಾದೇಶಿಕ ಅಸಮಾನತೆ ಭಾರತದ ದೇಶ ಅನುಸರಿಸುತ್ತಿರುವ ಬಂಡವಾಳ ಶಾಹಿ ಅಭಿವೃದ್ಧಿ ಮಾರ್ಗದ ಫಲವಾಗಿದೆ. ವಿದೇಶಿ ಬಂಡವಾಳಶಾಹಿಗಳಿಗೆ ಮಣೆ ಹಾಕುವ ಐ.ಎಂ.ಎಫ್. ವಿಶ್ವಬ್ಯಾಂಕ್ ನಿರ್ದೇಶಿತ ಹೊಸ ಆರ್ಥಿಕನೀತಿಯು ಕೆಲವೇ ಪ್ರದೇಶಕ್ಕೆ ಮಾತ್ರ ಬಂಡವಾಳ ಹೂಡಿಕೆಯನ್ನು ಸೀಮಿತಗೊಳಿಸುವುದರಿಂದ ಇತ್ತೀಚಿನ ವರ್ಷಗಳಲ್ಲಿ ಅಸಮಾನತೆಯ ಭಾವನೆ ಹೆಚ್ಚಾಗಿದೆ. ಇದಕ್ಕೆ ಪರಿಹಾರ-ಸಮಗ್ರ ಜನಪರ ಪರ್ಯಾಯ ಮಾರ್ಗಗಳನ್ನು ರೂಪಿಸುವುದು ಅದಕ್ಕಾಗಿ ಹೋರಾಡುವುದು. ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಪೂರ್ಣವಾಗಿ ಧುಮುಕಿ ಹೋರಾಡಿದ ಕಮ್ಯುನಿಸ್ಟ್ ಪಕ್ಷವು ಅಂದಿನಿಂದಲೂ ರಾಜ್ಯದ ಅಭಿವೃದ್ಧಿಗೆ ಭಿನ್ನವಾದ ಮಾರ್ಗಗಳನ್ನು ಸೂಚಿಸುತ್ತಲೇ ಬಂದಿದೆ. ಆದರೆ ಆಳುತ್ತಾ ಬಂದವರು- ಅವುಗಳನ್ನು ನಿರ್ಲಕ್ಷಿಸುತ್ತಾ ಬಂದಿದ್ದಾರೆ. ಇಂತಹ ದು:ಸ್ಥಿತಿಗೆ ಕಾರಣರಾದವರೇ ಪ್ರತ್ಯೇಕ ರಾಜ್ಯದ ಬೇಡಿಕೆಯ ಹಿಂದಿರುವುದು ಗಂಭೀರವಾದ ವಿಷಯ- ಎಂದು ಸಿಪಿಐ(ಎಂ) ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಾದೇಶಿಕ ಅಸಮಾನತೆ ತೊಲಗಿಸಿ, ಸಮಗ್ರ ಅಭಿವೃದ್ಧಿಯ ಪಥವನ್ನು ರಚಿಸಿ, ಜಾರಿಗೆ ಕ್ರಮವಹಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನು ಸಿಪಿಐ(ಎಂ) ಅಗ್ರಹಿಸಿದೆ. ಅದಕ್ಕಾಗಿ ಹೋರಾಟ ನಡೆಸಲು ಜನತೆ ಮುಂದಾಗಬೇಕೆಂದು ಸಿ.ಪಿ.ಐ.(ಎಂ) ಕರೆ ನೀಡಿದೆ.

2. ಹುಬ್ಬಳ್ಳಿ - ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಬೆಂಬಲಿಸಿರುವ ಸಿಪಿಐ(ಎಂ) ಪಕ್ಷವು ಈ ಬಗ್ಗೆ ಸರ್ಕಾರ ಕೂಡಲೇ ಕ್ರಮವಹಿಸಿ ಚಳುವಳಿ ಮುಕ್ತಾಯಗೊಳಿಸಬೇಕೆಂದು ಒತ್ತಾಯಿಸಿದೆ.

3. ಬೆಂಗಳೂರು ನೀರು ಸರಬರಾಜನ್ನು ವಿದೇಶಿ ಹಾಗೂ ದೇಶೀ ಖಾಸಗಿ ಬಂಡವಾಳಿಗರಿಗೊಪ್ಪಿಸುವ ಪ್ರೈವಾಟರ್ ಯೋಜನೆ ಕೈಬಿಡಬೇಕೆಂದು ಆಗ್ರಹಿಸಿರುವ ಸಿಪಿಐ(ಎಂ) ಬೆಂಗಳೂರು ಬೆಳವಣಿಗೆಗನುಗುಣವಾಗಿ ಜಲ ಮಂಡಲಿಯೇ ನೀರಿನ ಪೂರೈಕೆ ಮಾಡುವ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕೆಂದು ಒತ್ತಾಯಿಸಿದೆ.

"ಪ್ರತ್ಯೇಕತೆಯ ಒಡಕು ದನಿ ಬೇಡ"
ಎಸ್.ಎಫ್.ಐ. - ಡಿ.ವೈ.ಎಫ್.ಐ. ತೀವ್ರ ವಿರೋಧ

ಉತ್ತರ ಕರ್ನಾಟಕ ಅಭಿವೃದ್ಧಿ ಪರ ವೇದಿಕೆಯು ಪ್ರತೇಕ ಉತ್ತರ ಕರ್ನಾಟಕ ರಾಜ್ಯಕ್ಕಾಗಿ ಒತ್ತಾಯಿಸಿ ನಿರ್ಣಯ ಅಂಗೀಕರಿಸಿರುವ ಇತ್ತೀಚಿನ ಗಂಭೀರ ಬೆಳವಣಿಗೆಯ ಕುರಿತು ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.), ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಗಳು ಪ್ರತ್ಯೇಕ ಉತ್ತರ ಕರ್ನಾಟಕದ ಬೇಡಿಕೆಯನ್ನು ತೀವ್ರವಾಗಿ ವಿರೋಧಿಸಿವೆ.

ಉತ್ತರ ಕರ್ನಾಟಕ ಅಭಿವೃದ್ಧಿಗಾಗಿ ಹಾಗೂ ಪ್ರಾದೇಶಿಕ ಅಸಮಾನತೆಯ ವಿರುದ್ಧ ಹೋರಾಡಲು ಎಸ್.ಎಫ್.ಐ., ಡಿ.ವೈ.ಎಫ್.ಐ.ಗಳು ಬದ್ಧವಾಗಿವೆ. ಆದರೆ ಉತ್ತರ ಕರ್ನಾಟಕದ ಹಿಂದುಳಿದಿರುವಿಕೆಗೆ ಪ್ರತ್ಯೇಕವಾದ ಯಾವ ರೀತಿಯಲ್ಲೂ ಪರಿಹಾರವನ್ನು ಒದಗಿಸುವುದಿಲ್ಲ, ಮಾತ್ರವಲ್ಲ ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಎಲ್ಲರೂ ಮನಗಾಣಬೇಕಿದೆ ಎಂದಿದೆ.

ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿರುವುದು ನಮ್ಮ ಆಳುವ ಸರಕಾರಗಳ ದೋಷಪೀರಿತ ಆರ್ಥಿಕ ನೀತಿಗಳು, ಸಮಾನತೆಯ ಆಶಯ ಹಾಗೂ ಜನಪರ ಅಭಿವೃದ್ಧಿಯ ಕಣ್ಣೋಟವಿಲ್ಲದ ಬೆಳವಣಿಗೆಯ ದಾರಿ. ಪ್ರಾದೇಶಿಕ ಅಸಮಾನತೆ ಕೇವಲ ಉತ್ತರ ಕರ್ನಾಟಕದ ಸಮಸ್ಯೆಯಲ್ಲ, ಭಾರತದ ಉದ್ದಗಲಕ್ಕೂ ಇಂತಹ ಸಮಸ್ಯೆ ವ್ಯಾಪಕವಾಗಿದೆ. ಪ್ರತ್ಯೇಕತೆಯಿಂದ ಅಭಿವೃದ್ಧಿಯ ಆಶಯ ಈಡೆರುವುದಿಲ್ಲ. ಬದಲಾಗಿ ರಾಜ್ಯ ಮತ್ತಷ್ಟು ದುರ್ಬಲವಾಗುತ್ತದೆ. ಜನಪರ ಅಭಿವೃದ್ಧಿಗಾಗಿ ಸಮಾನ ಬೆಳವಣಿಗಾಗಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಳೆಸುವುದೊಂದೇ ಈ ಸಮಸ್ಯೆಗೆ ಇರುವ ಏಕೈಕ ಪರಿಹಾರವಾಗಿದೆ.

ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಭಾಷೆ- ಸಂಸ್ಕೃತಿಯ ನೆಲೆಯಲ್ಲಿ ಒಂದುಗೂಡಿಸಲು ಸುದೀರ್ಘ ಹೋರಾಟಗಳನ್ನು ನಡೆಸಿ ಕರ್ನಾಟಕದ ಏಕೀಕರಣ ಸಾಧಿಸಲಾಗಿದೆ. ಜನರ ಹೋರಾಟದಿಂದ ಗಳಿಸಿದ ಈ ಐಕ್ಯತೆಯನ್ನು ಛಿದ್ರ ಮಾಡುವುದು, ಒಟ್ಟಾರೆ ಕರ್ನಾಟಕದ ನಾಡು ನುಡಿ ಸಂಸ್ಕೃತಿ ಜನಜೀವನದ ಅಭಿವೃದ್ಧಿಗೆ ಮಾರಕ ವಾದದ್ದು ಎಂದು ಎಚ್ಚರಿಸಿರುವ ಎಸ್.ಎಫ್.ಐ.-ಡಿ.ವೈ.ಎಫ್.ಐ. ಸಂಘಟನೆಗಳು ಪ್ರತ್ಯೇಕತೆಯ ಒಡಕು ದನಿಯನ್ನು ಬಿಟ್ಟು ಸಮಗ್ರ ಕರ್ನಾಟಕದ ಅಭಿವೃದ್ಧಿಗಾಗಿ ಪ್ರಾದೇಶಿಕ ಅಸಮಾನತೆಯ ವಿರುದ್ಧ ಎಲ್ಲರೂ ಒಂದಾಗಿ ಹೋರಾಡೋಣ ಎಂದು ಕರೆ ನೀಡಿವೆ.

ಸಿಪಿಐ(ಎಂ) ಮೊದಲೇ ನೀಡಿದ ಎಚ್ಚರ

ರಾಜ್ಯದಲ್ಲಿ ಪ್ರತ್ಯೇಕತಾವಾದಿ ಭಾವನೆಗಳು ಹರಡುತ್ತಿರುವ ಬಗ್ಗೆ ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನ ದಲ್ಲಿ ಎಚ್ಚರಿಸಿತ್ತು. ಸಮ್ಮೇಳನದ ವರದಿ ಈ ಬಗ್ಗೆ ಏನು ಹೇಳಿತ್ತು ನೋಡಿ -

2.7 ವಿವಿಧ ಪ್ರದೇಶಗಳ ಅಸಮಾನ ಬೆಳವಣಿಗೆಗೆ ಬಂಡವಾಳಶಾಹಿ ಅಭಿವೃದ್ಧಿ ಪಥವೇ ಮೂಲಕಾರಣ. ಹೀಗಾಗಿ ಆಗಲೇ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದ್ದ ಕೈಗಾರಿಕೆಗಳು - ರಾಜ್ಯದ ಒಟ್ಟು ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳಲ್ಲಿ ಶೇ 53.39 ಹಾಗೂ ಕಾರ್ಮಿಕರ ಸಂಖ್ಯೆ ಯಲ್ಲಿ ಶೇ 50 ನ್ನು ಪಡೆದಿದ್ದ ಬೆಂಗಳೂರು ಹೊಸ ಆರ್ಥಿಕ ನೀತಿಗಳ ಕಾರಣವಾಗಿ ಮತ್ತಷ್ಟು ಹೆಚ್ಚು ಬಂಡವಾಳವನ್ನು ಕೇಂದ್ರೀಕರಿಸಿಕೊಳ್ಳುತ್ತಿದೆ.

ಮೂರು ಪ್ರದೇಶಗಳನ್ನು(ಬೆಂಗಳೂರು ನಗರವಲಯ, ಬಳ್ಳಾರಿ-ಕೊಪ್ಪಳ, ದ.ಕ-ಉ.ಕ. ವಲಯ) ಹೊರತು ಪಡಿಸಿ ಇಡೀ ರಾಜ್ಯದಲ್ಲಿ ಹೊಸ ಆರ್ಥಿಕ ನೀತಿಯ ಫಲವಾಗಿ ಲಾಭ ಕೆಲವರಿಗೇ ಸಿಕ್ಕುತ್ತಿದೆ. ನಾವು ಅದರಿಂದ ವಂಚಿತರಾಗುತ್ತಿದ್ದೇವೆ ಎಂಬ ಭಾವನೆ ಇತರರಲ್ಲಿ ಮೂಡುತ್ತಿದೆ.

3.10 ಹೊಸ ಆರ್ಥಿಕ ನೀತಿಯ ಖಾಸಗೀಕರಣದ ಕ್ರಮಗಳಿಂದಾಗಿ ಪ್ರಾದೇಶಿಕ ಅಸಮಾನತೆ ತೀವ್ರ ವಾಗುತ್ತಿದೆ. ಅದರ ಫಲವಾಗಿ ಹಿಂದುಳಿದ ಪ್ರದೇಶಗಳು ಈ ಅಭಿವೃದ್ಧಿಯ ವೇಗದ ವಾಹನದಲ್ಲಿ ಹೊರಗೆಸೆಯಲ್ಪಟ್ಟವರು ಎಂದು ಭಾವಿಸಿ ತಮ್ಮ ಪ್ರದೇಶಗಳ ಅಭಿವೃದ್ಧಿಯಾಗಬೇಕೆಂದು ಒತ್ತಾಯಿಸುತ್ತಿವೆ. ಈ ಪ್ರಜಾಸತ್ತಾತ್ಮಕ ಭಾವನೆಯನ್ನು ದುರುಪಯೋಗ ಮಾಡಬಯಸುವ ಅಂಧಾಭಿಮಾನಿ ಶಕ್ತಿಗಳು ವಿಭಜನಕಾರಿ ಕೂಗುಗಳನ್ನೆಬ್ಬಿಸುತ್ತಾ ಉತ್ತರ ಕರ್ನಾಟಕ ಪ್ರತ್ಯೇಕವಾಗಬೇಕು, ಹೈದರಾಬಾದ್ - ಕರ್ನಾಟಕ ಪ್ರತ್ಯೇಕವಾಗಬೇಕು, ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂಬ ಕೂಗೆಬ್ಬಿಸಿವೆ. ಈ ಕೂಗಿಗೆ ಬಿಜೆಪಿ ನೇರ ವಾಗಿ ಬೆಂಬಲಿಸುತ್ತಿದೆ. ಲೋಕಶಕ್ತಿಯೂ ಬೆಂಬಲ ನೀಡುತ್ತಿದೆ. ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂಬ ಚಳುವಳಿ, ಬಂದ್‌ಗಳನ್ನು ಕೊಡಗು ರಾಜ್ಯ ಮುಕ್ತಿ ಮೋರ್ಚಾ ಸಂಘಟಿಸಿದೆ. ಅದೇ ಸಮಯದಲ್ಲಿ, ಪ್ರಾದೇಶಿಕ ಅಸಮಾನತೆ ಎಂಬುದೇ ಇಲ್ಲ, ಎಲ್ಲಾ ಪ್ರದೇಶಗಳ ಅಭಿವೃದ್ಧಿಗೂ ಒಂದೇ ಸಮನಾಗಿ ಗಮನ ನೀಡುತ್ತಿದೆ ಎಂದು ಸರ್ಕಾರ ವಾದಿಸುತ್ತಿದೆ. ಇದು ಈಗಾಗಲೇ ಉರಿಯುತ್ತಿರುವ ಬೆಂಕಿಯ ಮೇಲೆ ತುಪ್ಪ ಸುರಿದಂತೆ ಆಗುತ್ತದೆ. ಪ್ರಜಾಸತ್ತಾತ್ಮಕ ಶಕ್ತಿಗಳು ಅಸಮಾನತೆ ಯನ್ನು ಹೋಗಲಾಡಿಸಲು ಸಮಗ್ರ ಅಭಿವೃದ್ಧಿಯ ಜನಪರ ಪರ್ಯಾಯ ದಾರಿಗಾಗಿ ಹೋರಾಡಬೇಕು. ಅಸಮಾನತೆಗೆ ಮೂಲ ಕಾರಣ ಹೊಸ ಆರ್ಥಿಕ ನೀತಿ ಹಾಗೂ ಬಂಡವಾಳಶಾಹಿ ದಾರಿ ಎಂಬುದನ್ನು ಮನಗಾಣಬೇಕು.

2.8 ಪ್ರಾದೇಶಿಕ ಭಾವನೆಗಳನ್ನು ಹೋಗಲಾಡಿಸಲು ರಾಜ್ಯದ ಎಲ್ಲಾ ಪ್ರದೇಶಗಳ ಅಭಿವೃದ್ಧಿಯನ್ನು ಸಮತೋಲನ ಮಾಡಲು ಸರ್ಕಾರ ದೃಢ ಮನಸ್ಸಿನ ಯೋಜಿತ ಪ್ರಯತ್ನ ಮಾಡಬೇಕು. ಇದಕ್ಕೆ ಸರ್ಕಾರದ ಪಾತ್ರ ಪ್ರಧಾನವಾಗಿರಬೇಕು. ಆದರೆ ಕೇಂದ್ರ ಸರ್ಕಾರದ ನೀತಿಗಳು ಇದರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಾ ಸರ್ಕಾರದ ಪಾತ್ರವನ್ನು ಕ್ಷೀಣಗೊಳಿಸುವ ಸರ್ಕಾರದ ವೆಚ್ಚವನ್ನ ಕಡಿತಗೊಳಿಸುವ ಪ್ರಯತ್ನ ಮಾಡುತ್ತಿದೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದ ಸಿಪಿಐ(ಎಂ) ನ 16ನೇ ಅಖಿಲ ಭಾರತ ಮಹಾಧಿವೇಶನವೂ ಈ ವಿಷಯವನ್ನು ಚರ್ಚಿಸಿತು.

ಮಹಾಧಿವೇಶನದ ರಾಜಕೀಯ ಠರಾವಿನ ಈ ಅಂಶಗಳನ್ನು ನೋಡಿ:

2.57 ಈ ಅವಧಿಯಲ್ಲಿ ಪ್ರತ್ಯೇಕ ರಾಜ್ಯಗಳ ಬೇಡಿಕೆಗಳು ಝಾರ್ಖಂಡ್, ಉತ್ತರಾಖಂಡ, ಚತ್ತೀಸ್‌ಘಡ್, ವಿದರ್ಭ, ಬೋಡೋಲ್ಯಾಂಡ್ ಮತ್ತು ತೆಲಂಗಾಣ ಇತ್ಯಾದಿ ವಲಯಗಳಿಂದ ಎದ್ದು ಬಂದಿವೆ. ಆರ್ಥಿಕ ಅಸಮತೋಲನ ಹಾಗೂ ಅದರಿಂದಾಗಿ ಕೆಲವು ಪ್ರದೇಶಗಳ ಹಿಂದುಳಿಕೆ, ಆದಿವಾಸಿ ಪಟ್ಟಿಗಳಲ್ಲಿ ಹಿಂದುಳಿಕೆಯನ್ನು ಶಾಶ್ವತವಾಗಿಸಿರುವುದು ಹಾಗೂ ಪ್ರಾದೇಶಿಕ ಭಾವನೆಗಳ ಬಳಕೆ ಇಂತಹ ಪ್ರಾದೇಶಿಕ ಆಂದೋಲನಗಳಿಗೆ ಕಾರಣವಾಗುವ ಅಂಶಗಳು.

2.58. ಕೆಲವು ಬೂರ್ಜ್ವಾ ಪಕ್ಷಗಳು ರಾಜಕೀಯ ಬೆಂಬಲ ಪಡೆಯಲು ಇಂತಹ ಘೋಷಣೆಗಳನ್ನೆತ್ತುವಲ್ಲಿ ಪರಸ್ಪರ ಸ್ಪರ್ಧಿಸುತ್ತಿವೆ. ಅಲ್ಲದೆ ಕೆಲವು ಪಕ್ಷಗಳು, ನಿರ್ದಿಷ್ಟವಾಗಿ ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ನಿರಂತರವಾಗಿ ವಿರೋಧಿಸಿಕೊಂಡು ಬಂದ ಬಿಜೆಪಿ, ರಾಜ್ಯಗಳನ್ನು ಒಡೆಯುವ ಪ್ರಯತ್ನ ಮಾಡುತ್ತಿವೆ. ಸಿಪಿಐ(ಎಂ) ಈಗಿರುವ ರಾಜ್ಯಗಳ ಇನ್ನಷ್ಟು ವಿಭಜನೆಯನ್ನು ವಿರೋಧಿಸುತ್ತದೆ. ಏಕೆಂದರೆ ಇದು ಮತ್ತಷ್ಟು ವಿಭಜನಕಾರಿ ಹಾಗೂ ವಿಚ್ಛಿದ್ರಕಾರಿ ಬೇಡಿಕೆಗಳಿಗೆ ಪ್ರಚೋದನೆ ನೀಡುತ್ತದೆ. ಇಲ್ಲಿರುವ ಮೂಲಭೂತ ಪ್ರಶ್ನೆಯೆಂದರೆ ಈ ಪ್ರದೇಶಗಳ ಹಿಂದುಳಿಕೆಯನ್ನು ನಿವಾರಿಸುವುದು. ಬುಡಕಟ್ಟು ಜನಗಳು ಒಟ್ಟಾಗಿರುವ ನೆರೆಹೊರೆ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡಬೇಕು. ಹಿಂದುಳಿದ ಪ್ರದೇಶಗಳಲ್ಲಿನ ಸನ್ನಿವೇಶ ಭಿನ್ನವಾದದ್ದು. ಇಲ್ಲಿ ತೆಲಂಗಾಣ, ವಿದರ್ಭದಂತಹ ಪ್ರದೇಶಗಳಲ್ಲಿ ಪ್ರತ್ಯೇಕ ರಾಜ್ಯಗಳ ರಚನೆಯನ್ನು ವಿರೋಧಿಸುತ್ತಲೇ ಪಕ್ಷ ಈ ಪ್ರದೇಶಗಳ ಹಿಂದುಳಿಕೆಯನ್ನು ನಿವಾರಿಸಲು ಪ್ರಚಾರಾಂದೋಲನಗಳ ಗಂಭೀರವಾಗಿ ಕೈಗೆತ್ತಿಕೊಳ್ಳಬೇಕು

ಸಂಕಲ್ಪ ಯಾತ್ರೆಯ ಹೆಸರಲ್ಲಿ ಹೊಸದೊಂದು ನಾಟಕ

1998 ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ 28 ಸ್ಥಾನಗಳಲ್ಲಿ ಸ್ವತಂತ್ರವಾಗಿ 15 ಸ್ಥಾನಗಳನ್ನು, ತನ್ನ ಮಿತ್ರ ಪಕ್ಷದೊಂದಿಗೆ 18 ಸ್ಥಾನಗಳನ್ನು ಗೆದ್ದ ಕರ್ನಾಟಕದಲ್ಲಿ ಇನ್ನು ಮುಂದೆ ನಮ್ಮದೇ ಅಧಿಕಾರ ಎಂದು ಬೀಗಿದ್ದ ಬಿಜೆಪಿ ಕೇಂದ್ರ ಸರ್ಕಾರದಲ್ಲಿ ತನ್ನ ವಿಫಲತೆಯ ಫಲವಾಗಿ ಕಳೆದುಕೊಂಡ ಜನ ಬೆಂಬಲವನ್ನು ಮತ್ತೆ ಗಳಿಸಲು ಬಾಬಾ ಬುಡನ್‌ಗಿರಿ ಮೊದಲಾದ ಪ್ರಶ್ನೆಗಳೂ, ಸುರತ್ಕಲ್‌ನಂತಹ ಕೋಮು ದಂಗೆಗಳೂ ವಿಫಲವಾಗುತ್ತಿರುವ ಹಿನ್ನೆಲೆಯಲ್ಲಿ 'ಸಮೃದ್ಧ ಕರ್ನಾಟಕ' ದ ಹೆಸರಿನಲ್ಲಿ ಹೊಸದೊಂದು ನಾಟಕವನ್ನಾರಂಭಿಸಿದೆ.

ಭಾರತದ ಆರ್ಥಿಕತೆ, ಭದ್ರತೆ, ಸಾಮರಸ್ಯಕ್ಕೆ ಕೇವಲ ಒಂದು ವರ್ಷದಲ್ಲಿ ಮಾಯಲಾರದ ಧಕ್ಕೆ ತಂದ ಬಿಜೆಪಿ ಕರ್ನಾಟಕಕ್ಕೆ ಸಮೃದ್ಧಿ ತರುವುದು ಸಾಧ್ಯವೇ? ರಾಜಸ್ಥಾನ, ಮಧ್ಯಪ್ರದೇಶ, ದೆಹಲಿಗಳ ಜನ ಬಿಜೆಪಿಯನ್ನು ತಿರಸ್ಕರಿಸಿದ್ದು ಬಿಜೆಪಿ ಯಾವ ರಾಜ್ಯಕ್ಕೂ ಸಮೃದ್ಧಿಯನ್ನೂ ಯಾವ ಜನತೆಗೂ ನೆಮ್ಮದಿಯನ್ನು ತರಲು ಸಾಧ್ಯವಿಲ್ಲವೆಂಬುದನ್ನು ಸಾರುತ್ತದೆ. ಈಗ ಅಧಿಕಾರದಲ್ಲಿರುವ ಉತ್ತರ ಪ್ರದೇಶ, ಹಿಮಾಚಲ ಪ್ರದೇಶದಲ್ಲಿ ಈ ರಾಜ್ಯಗಳ ಸಮೃದ್ಧಿಗಾಗಿ ಕೈಗೊಂಡ ಒಂದಾದರೂ ಕ್ರಮದ ಬಗ್ಗೆ ದೇಶದಲ್ಲಿ ನೆಚ್ಚಿಕೆ ಮೂಡಿಸಬಲ್ಲರೆ?

ಜೊತೆಗೆ ಕರ್ನಾಟಕದ ಸಮೃದ್ಧಿಯಾಗಬೇಕಾದರೆ ರಾಜ್ಯ ಸರ್ಕಾರಕ್ಕೆ ಹೆಚ್ಚು ಸಂಪನ್ಮೂಲಗಳು ಬೇಕು. ರಾಜ್ಯ ಸರ್ಕಾರಕ್ಕೆ ತನ್ನ ಎರಡು ವರ್ಷಗಳ ಬಜೆಟ್ಟಿನಲ್ಲಿ ನೂರಾರು ಕೋಟಿಯ ಆದಾಯಕ್ಕೆ ಧಕ್ಕೆ ತಂದ ಬಿಜೆಪಿ ರಾಜ್ಯದ ಸಮೃದ್ಧಿಯನ್ನು ಬಯಸುತ್ತದೆಯೇ?

ಸದಾ ಹಿಂದಿ ಹೇರಿಕೆಯ ಸಂಸ್ಕೃತ ಹೇರಿಕೆಯ ಪ್ರಯತ್ನ ಮಾಡುವ, ಸಂಸ್ಕೃತಿ ಸರ್ವಾಧಿಕಾರದ ಬಿಜೆಪಿಯಿಂದ ಕರ್ನಾಟಕದ ಆಡುನುಡಿಗಳು ವೈವಿಧ್ಯಮಯ ಸಂಸ್ಕೃತಿ; ಭಾಷೆಗಳು ಮುಖ್ಯವಾಗಿ ಕನ್ನಡ ಭಾಷೆ, ಸಂಸ್ಕೃತಿಯ ಸಮೃದ್ಧಿಯಾದೀತೆ? ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಪ್ರಶ್ನಿಸಿದೆ.

ಈ ಪ್ರಶ್ನೆಗಳನ್ನು ಜನತೆಯ ಮುಂದಿಡಲು, ಈ ಬಗ್ಗೆ ಕರ್ನಾಟಕ ರಾಜ್ಯಾದ್ಯಂತ ಪ್ರಚಾರ ಮಾಡಿ ಜನತೆಯನ್ನು ಎಚ್ಚರಿಸುವ ಜಾಥಾ, ಬಹಿರಂಗ ಸಭೆಗಳ ಕಾರ್ಯಕ್ರಮವನ್ನು ಸಿಪಿಐ(ಎಂ) ಹಾಕಿಕೊಂಡಿದೆ. ಬಿಜೆಪಿಯ ಒಂದು ವರ್ಷದ ವಿನಾಶಕಾರಿ ಆಡಳಿತದ ವಿವಿಧ ಆಯಾಮಗಳ ಬಗ್ಗೆ ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರ ಕಿರುಪುಸ್ತಕವನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗಿದೆ.

ಹಿಮಾಚಲ ಪ್ರದೇಶ: ಬಿಜೆಪಿ ಸರಕಾರದ ಪೋಲೀಸ್ ದಮನವನ್ನು ಲೆಕ್ಕಿಸದೆ

ನಾತ್ಪಾ-ಝುಕ್ರಿಯ ಕಾರ್ಮಿಕ ರೈತರ ಮುಷ್ಕರ

ಹಿಮಾಚಲ ಪ್ರದೇಶದ ನಾತ್ಪಾ-ಝುಕ್ರಿಯ ವಿದ್ಯುತ್ ನಿಗಮ(ಎನ್.ಟಿ.ಪಿ.ಸಿ.) ಯೋಜನೆಯ ಜಾರಿಯಲ್ಲಿ ತಮ್ಮ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಸಾವಿರಾರು ರೈತರು ಮತ್ತು ಕಾರ್ಮಿಕರು ಇಲ್ಲಿ ಎರಡು ತಿಂಗಳಿಂದ ಹೋರಾಟದಲ್ಲಿದ್ದಾರೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಅವರ ಮೇಲೆ ಪೋಲೀಸ್ ದಮನ ಹಾಗೂ ಭಯೋತ್ಪಾದನೆಯನ್ನು ಬಳಸಿ ತನ್ನ ಜನ-ವಿರೋಧಿ ಮುಖವನ್ನು ತೋರಿಸುತ್ತಿದೆ.

ಈ ವಿದ್ಯುತ್ ಯೋಜನೆ ದೇಶದ ಅತಿದೊಡ್ಡ ಜಲವಿದ್ಯುತ್ ಯೋಜನೆ. 1500 ಮೆ.ವಾ. ವಿದ್ಯುತ್ ಉತ್ಪಾದನೆ ಇದರ ಗುರಿ. ಈ ಕಂಪನಿಯ 75ಶೇ ಶೇರು ಬಂಡವಾಳ ಕೇಂದ್ರ ಸರ್ಕಾರದ್ದು. ಉಳಿದದ್ದು ರಾಜ್ಯ ಸರ್ಕಾರದ್ದು. ಯೋಜನೆಯ ಕಾಮಗಾರಿಯನ್ನು ಎನ್.ಜೆ.ಜೆ.ವಿ. ಹಾಗೂ ಸಿ.ಎಫ್.ಜೆ.ವಿ. ಎಂಬ ಎರಡು ಕಂಪನಿಗಳಿಗೆ ನೀಡಿದೆ. ಇದರಲ್ಲಿ ಇಟೆಲಿ, ಕೆನಡಾ ಮತ್ತು ದಕ್ಷಿಣ ಕೊರಿಯದ ಬಹುರಾಷ್ಟ್ರೀಯ ಕಂಪನಿಗಳದು ಪ್ರಧಾನ ಪಾಲು.

ಈ ಬಹುರಾಷ್ಟ್ರೀಯ ಕಂಪನಿಗಳು ಸ್ಥಳೀಯ ಕಂಟ್ರಾಕ್ಟರುಗಳ ಮೂಲಕ ಬಿಹಾರ, ಒರಿಸ್ಸಾದಿಂದ ಸಾವಿರಾರು ಕಾರ್ಮಿಕರನ್ನು ದುಡಿಸಿಕೊಂಡಿವೆ. ಯಥಾ ಪ್ರಕಾರ ಆಳುವ ಪಕ್ಷಗಳ ರಾಜಕಾರಣಿಗಳ ಹಾಗೂ ಸರ್ಕಾರಿ ಅಧಿಕಾರಿಗಳ ಕೈಬೆಚ್ಚಗೆ ಮಾಡಿ ಈ ಕಾರ್ಮಿಕರ ಶೋಷಣೆ ನಡೆಯುತ್ತಿದೆ. ನೆಲದಡಿಯ ಕಾಲುವೆಗಳಲ್ಲಿನ ವಿಪರೀತ ಉಷ್ಣದಿಂದಾಗಿ 1993 ರಿಂದ ಈ ಯೋಜನೆಯಲ್ಲಿ ಸುಮಾರು 200 ಕಾರ್ಮಿಕರು ಪ್ರಾಣ ಕಳಕೊಂಡಿದ್ದಾರೆ. ಈ ಯೋಜನೆಯ ಬಹುಪಾಲು ಕಾರ್ಮಿಕರು ಕ್ಷಯ, ಉಬ್ಬಸ ಮುಂತಾದ ರೋಗಗಳಿಂದ ನರಳುತ್ತಿದ್ದಾರೆ. ಆದರೂ ರಾಜ್ಯ ಮಾನವಹಕ್ಕು ಆಯೋಗದ ಮಧ್ಯಪ್ರವೇಶ ಹಾಗೂ ನಿರ್ದೇಶನದ ನಂತರವೇ ಅವರಿಗೆ ಸೂಕ್ತ ಪರಿಹಾರವನ್ನು ಎನ್.ಜೆ.ಜೆ.ವಿ. ನೀಡಿತು.

ಈಗ ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದಿಂದ 135 ಕಿ.ಮಿ. ದೂರದಲ್ಲಿರುವ ಝುಕ್ರಿಯಲ್ಲಿ ಫೆಬ್ರವರಿ 18 ರಿಂದ ಮುಷ್ಕರ ನಡೆಯುತ್ತಿದೆ.

ಸಿಐಟಿಯು ಇಲ್ಲಿಯ ಕಾರ್ಮಿಕರನ್ನು ಸಂಘಟಿಸಿದರೆ, ಅಖಿಲ ಭಾರತ ಕಿಸಾನ್ ಸಭಾ ಈ ಪ್ರದೇಶದ ರೈತರ, ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡಿದೆ. ತಮ್ಮಲ್ಲಿದ್ದ ಇಂಟಕ್ ಸಂಘ ತಮ್ಮ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳದಿದ್ದಾಗ ಕಾರ್ಮಿಕರೇ ಸ್ವತಃ ಸಿಐಟಿಯು ಮುಖಂಡರನ್ನು ಆಹ್ವಾನಿಸಿದರು. ಸಿಐಟಿಯು ನೇತೃತ್ವದಲ್ಲಿ ಈ ಎರಡೂ ಕಂಪನಿಗಳ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಿದರು. ಸಮಾನ ಕೆಲಸಕ್ಕೆ ಸಮಾನ ವೇತನ - ಅವರ ಪ್ರಮುಖ ಬೇಡಿಕೆ.

ಈ ಯೋಜನೆಯಿಂದ ಹಲವು ವಿಧಗಳಿಂದ ಹಾನಿಗೊಳಗಾಗಿರುವ ರೈತರನ್ನು ಕಿಸಾನ್ ಸಭಾ ಸಂಘಟಿಸಿ ಯೋಜನೆಗೆಂದು ವಹಿಸಿಕೊಂಡ ತಮ್ಮ ಜಮೀನಿಗೆ ಸೂಕ್ತ ಪರಿಹಾರ ಕೇಳುತ್ತಿದ್ದಾರೆ. ಅಲ್ಲದೆ ಸ್ಥಳೀಯ ಜನರಿಗೆ ಪ್ರತಿಕುಟುಂಬಕ್ಕೆ ಒಬ್ಬರಂತೆ ಈ ಯೋಜನೆಯಲ್ಲಿ ಕೆಲಸ ಕೊಡಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ 5000 ಕಾರ್ಮಿಕರಲ್ಲಿ ಸ್ಥಳೀಯರು ಕೇವಲ 52. ಹೆಚ್ಚಿನವರು ರಾಜ್ಯದ ಹೊರಗಿನವರು - ಇದು ಇನ್ನೊಂದು ಸಮಸ್ಯೆ.

ಮತ್ತೊಂದು ಸಮಸ್ಯೆಯೆಂದರೆ ಪರಿಸರಕ್ಕೆ ಆಗುತ್ತಿರುವ ಹಾನಿ. ನಿರ್ಮಾಣ ಕಾರ್ಯದಲ್ಲಿನ ಸ್ಫೋಟಗಳಿಂದಾಗಿ ಸ್ಥಳೀಯ ನಿವಾಸಿಗಳ ಮನೆಗಳಲ್ಲಿ ಬಿರುಕು ಬರುತ್ತಿದೆ, ಕುಡಿಯುವ ನೀರಿನ ಮೂಲಗಳು ಒಣಗುತ್ತಿವೆ. ಹುಲ್ಲುಗಾವಲು ಮಾಯವಾಗುತ್ತಿವೆ. ಈ ಎಲ್ಲಾ ಪ್ರದೇಶಗಳನ್ನು ಕಿಸಾನ್ ಸಭಾ ಎತ್ತಿಕೊಂಡಿದೆ.

ಸಿಐಟಿಯು ಮತ್ತು ಕಿಸಾನ್ ಸಭಾ ಏಕಕಾಲದಲ್ಲಿ ಚಳುವಳಿ ನಡೆಸುತ್ತಿವೆ. ಸಿ.ಎಫ್.ಜೆ.ವಿ. ಯ ಆಡಳಿತ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಂಡರೂ ಇನ್ನೊಂದು ಸಂಸ್ಥೆ ಎನ್.ಜೆ.ಜೆ.ವಿ ಚಳುವಳಿ ನಿರತ ಕಾರ್ಮಿಕರೊಂದಿಗೆ ಮಾತುಕತೆ ತಪ್ಪಿಸಿಕೊಳ್ಳುತ್ತಿದೆ.

ಮಾರ್ಚ್ 12 ರಂದು ಈ ಬಹುರಾಷ್ಟ್ರೀಯ ಕಂಪನಿಗಳಿಗೆ ತಮ್ಮ ವಿಧೇಯತೆ ತೋರಲು ರಾಜ್ಯ ಬಿಜೆಪಿ ಸರಕಾರ ದಮನ ಚಕ್ರ ಆರಂಭಿಸಿದೆ. ವಿಧಾನ ಸಭೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರು ಬಹಿರಂಗವಾಗಿಯೇ ಕೈಗಾರಿಕಾ ಶಾಂತಿಯ ಹೆಸರಲ್ಲಿ ಬಹುರಾಷ್ಟ್ರೀಯ ಕಂಪನಿಗಳ ನಿಲುವಿಗೆ ಬೆಂಬಲ ವ್ಯಕ್ತಪಡಿಸಿದರು.

ಅದೇ ದಿನ ಸಿಐಟಿಯು ಹಾಗೂ ಕಿಸಾನ್ ಸಭಾ ಝುಕ್ರಿಯಲ್ಲಿ ಜಂಟಿ ರ್‍ಯಾಲಿಗೆ ಕರೆ ನೀಡಿತ್ತು. ಈ ರ್‍ಯಾಲಿಯನ್ನು ತಡೆಯಲು ರಾಜ್ಯ ಸರ್ಕಾರ ಸರ್ವಪ್ರಯತ್ನ ನಡೆಸಿತು. ಮುಖಂಡರನ್ನೆಲ್ಲಾ ಬಂಧಿಸಿತು. ಒಂದು ಸಾವಿರ ರೈತ-ಕಾರ್ಮಿಕರನ್ನು ಬಂಧಿಸಿತು. ಅಂದಿನಿಂದ ರಾಜ್ಯ ಸರ್ಕಾರದ ಎನ್.ಜೆ.ಜೆ.ವಿ. ಆಡಳಿತದೊಂದಿಗೆ ಶಾಮೀಲಾಗಿ ಈ ಪ್ರದೇಶದಲ್ಲಿ ಭಯೋತ್ಪಾದನೆ ಹರಡಿದೆ. ಆದರೂ ಮುಷ್ಕರ ಮುರಿಯಲು ಅವರಿಗಾಗಿಲ್ಲ.

ಮಾರ್ಚ್ 17 ರಂದು ಮತ್ತೆ ರ್‍ಯಾಲಿಗೆ ಸಿಐಟಿಯು ಮತ್ತು ಕಿಸಾನ್ ಸಭಾ ಕರೆ ನೀಡಿದವು. ಸಿಪಿಐ(ಎಂ) ಸಂಸತ್ ಸದಸ್ಯ ಹಾಗೂ ಸಂಸದೀಯ ವಿದ್ಯುತ್ ಉಪಸಮಿತಿಯ ಸದಸ್ಯ ಬಸುದೇವ ಆಚಾರ್ಯ ಈ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುವರು ಎಂದು ಪ್ರಕಟಿಸಲಾಯಿತು. ರಾಜ್ಯ ಸರಕಾರ ಈ ರ್‍ಯಾಲಿಗೆ ಅನುಮತಿ ನಿರಾಕರಿಸಿ ಬಸುದೇವ ಆಚಾರ್ಯ ಝುಕ್ರಿಗೆ ತಲುಪದಂತೆ ತಡೆಯಲು ಪ್ರಯತ್ನಿಸಿತು. ಆದರೂ ರ್‍ಯಾಲಿ ಪಕ್ಕದ ಒಂದು ಹಳ್ಳಿಯಲ್ಲಿ ನಡೆದೇ ನಡೆಯಿತು. ಬಸುದೇವ ಆಚಾರ್ಯ ರ್‍ಯಾಲಿನ್ನುದ್ದೇಶಿಸಿ ಮಾತನಾಡುತ್ತ ರಾಜ್ಯ ಸರ್ಕಾರದ ಪ್ರಜಾಪ್ರಭುತ್ವ-ವಿರೋಧಿ ಕ್ರಮಗಳನ್ನು ಖಂಡಿಸಿದರು. ಸಂಸದೀಯ ಉಪ ಸಮಿತಿ ಶೀಘ್ರದಲ್ಲೇ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸುತ್ತದೆ ಹಾಗೂ ಸಂಸತ್ತಿನಲ್ಲಿ ಈ ವಿಷಯವನ್ನು ಎತ್ತುತ್ತೇನೆ ಎಂದು ಅವರು ಹೇಳಿದರು.

ಈ ನಡುವೆ ಸಿಐಟಿಯು ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆಯವರು ಎನ್.ಜೆ.ಜೆ.ವಿ. ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಸಿಐಟಿಯು ಕಾರ್ಯದರ್ಶಿ ಜೀವನ್ ರಾಯ್ ಕೇಂದ್ರ ವಿದ್ಯುತ್ ಮಂತ್ರಿಯೊಂದಿಗೆ ಈ ಪ್ರಶ್ನೆ ಯೆತ್ತಿ ಎನ್.ಜೆ.ಜೆ.ವಿ. ಆಡಳಿತದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪಂಜಾಬಿನಲ್ಲಿ ಸಾಲಮುಕ್ತಿ ಆಂದೋಲನ 20 ಸಾವಿರ ರೈತರ ಜೈಲ್‌ಭರೋ

ಕರ್ಜಾ ಮುಕ್ತಿ ಅಥವಾ ಸಾಲಮುಕ್ತಿ ಆಂದೋಲನ ನಡೆಸುತ್ತಿರುವ 20 ಸಾವಿರಕ್ಕೂ ಹೆಚ್ಚು ರೈತರು ಮಾರ್ಚ್ 30 ರಂದು ಸೆಕ್ಷನ್ 144 ಹೇರಿ ಉಂಟು ಮಾಡಿದ್ದ ಅಡೆತಡೆಗಳನ್ನೆಲ್ಲಾ ಮುರಿದು ಚಂಢಿಗಡದಲ್ಲಿ ಬಂಧನಕ್ಕೊಳಗಾದರು. ರಾಜ್ಯ ಕಿಸಾನ್ ಸಭಾ ಅಧ್ಯಕ್ಷ ರಜಪಾಲ್ ಸಿಂಗ್ ಹಾಗೂ ಪ್ರಧಾನ ಕಾರ್ಯದರ್ಶಿ ಲೆಹ್ಮಾರ್ ಸಿಂಗ್ ಟಗ್ಗರ್ ನೇತೃತ್ವದಲ್ಲಿ ಸಾಗರದಂತೆ ಹರಿದು ಬಂದ ರೈತ ಜನ 'ನಮ್ಮ ಸಾಲ ಮನ್ನಾ ಮಾಡಿ, ಇಲ್ಲವೇ ನಮ್ಮನ್ನು ಬಂಧಿಸಿ' ಎಂದು ಘೋಷಣೆ ಹಾಕುತ್ತಾ ಮಟ್ಕಾ ಚೌಕ್‌ನಲ್ಲಿ ಹಾಕಿದ್ದ ಭಾರೀ ತಡೆಗಳನ್ನು ತಲುಪಿದಾಗ ಪೋಲೀಸರು ಅವರನ್ನು ಬಂಧಿಸಿದರು.

ಇದಕ್ಕೆ ಮೊದಲು ರಾಜ್ಯದ ಎಲ್ಲಾ ಕಡೆಗಳಿಂದ ಬಂದ ರೈತರ ರ್‍ಯಾಲಿ ನಡೆಯಿತು. ಎಐಕೆಎಸ್ ಅಧ್ಯಕ್ಷ ಎನ್.ಆರ್.ಪಿಳ್ಳೆ ಅವರನ್ನುದ್ದೇಶಿಸಿ ಮಾತನಾಡಿದರು. ರೈತರ ಹೆಚ್ಚುತ್ತಿರುವ ಸಾಲ ಹೊರೆ, ದರಿದ್ರೀಕರಣಕ್ಕೆ ವಿಶ್ವಬ್ಯಾಂಕ್, ಐಎಂಎಫ್, ಡಬ್ಲ್ಯುಟಿಓ ಆದೇಶಿತ ನೀತಿಗಳೇ ಮೂಲಕಾರಣ ಎಂದರು. ಇಂತಹ ಸಮರಧೀರ ಹೋರಾಟಗಳ ಮೂಲಕ ಮಾತ್ರವೇ ಸಾಮ್ರಾಜ್ಯಶಾಹಿ - ಪರ, ರೈತ-ವಿರೋಧಿ ದಿವಾಳಿಕೋರ ನೀತಿಗಳನ್ನು ಸೋಲಿಸಲು ಸಾಧ್ಯ ಎಂದು ಅವರು ಹೇಳಿದರು.

ಈ ಚಳುವಳಿಯ ಮುಖ್ಯ ಬೇಡಿಕೆ ಬಡ ಮತ್ತು ಮಧ್ಯಮ ರೈತರ ಎಲ್ಲಾ ಸಾಲಗಳ ಮನ್ನಾ, ಬೆಳೆ ವಿಮಾ ಯೋಜನೆಯ ಪರಿಣಾಮಕಾರಿ ಜಾರಿ, ರೈತರ ಉತ್ಪನ್ನಗಳಿಗೆ ಫಲಕಾರಿ ಬೆಲೆ, ಕೃಷಿ ಲಾಗುವಾಡುಗಳಿಂದ ಸಬ್ಸಿಡಿ, ತೀವ್ರಗಾಮಿ ಭೂಸುಧಾರಣೆ ಹಾಗೂ ರೇಷನ್ ವ್ಯವಸ್ಥೆಯನ್ನು ಬಲಪಡಿಸುವುದು.

ತ್ರಿಪುರಾ ಬಜೆಟ್

ಅಭಿವೃದ್ಧಿ ಮತ್ತು ಜನ ಕಲ್ಯಾಣಕ್ಕೆ ಒತ್ತು

ಕೇಂದ್ರದ ಜನ-ವಿರೋಧಿ ಆರ್ಥಿಕ ನೀತಿಗಳಿಂದಾಗಿ ದೇಶವನ್ನು ಆವರಿಸಿರುವ ಆರ್ಥಿಕ ಬಿಕ್ಕಟ್ಟಿನ ನಡುವೆ ತ್ರಿಪುರಾದ ಎಡರಂಗ ಸರ್ಕಾರ ಮಾರ್ಚ್21 ರಂದು ಮಂಡಿಸಿದ ಬಜೆಟ್ ಜನಪರ ಒತ್ತು ಕೊಡಲು ಪ್ರಯತ್ನಿಸಿದೆ. ಇದು ಈ ಎಡರಂಗ ಸರಕಾರದ ಎರಡನೇ ಬಜೆಟ್. ಹಿಂದಿನ ಬಜೆಟ್‌ನಂತೆ ಇದರಲ್ಲಿ ಯಾವುದೇ ತೆರಿಗೆಗಳಿಲ್ಲ. ಯೋಜನಾ ವೆಚ್ಚವನ್ನು 14.6 ಶೇ ದಷ್ಟು ಹೆಚ್ಚಿಸಲಾಗಿದೆ. ಕೊರತೆ 150 ಕೋಟಿ ರೂ.ಗಳಷ್ಟಿದೆ. ಕೇಂದ್ರ ಈ ಹಿಂದುಳಿದ ವಿಶೇಷ ಗುಂಪಿಗೆ ಸೇರಿದ ರಾಜ್ಯಕ್ಕೆ ಕೊಡಬೇಕಾದ ಹಣವನ್ನು ಅಂತಿಮಗೊಳಿಸಿದ ನಂತರ ಈ ಕೊರತೆಯನ್ನು ತುಂಬಿಸಲು ಸಾಧ್ಯ ಎಂದು ರಾಜ್ಯ ಹಣಕಾಸು ಮಂತ್ರಿ ಬಾದಲ್ ಚೌಧುರಿ ನಿರೀಕ್ಷಿಸುತ್ತಾರೆ.

ಕನಿಷ್ಟ ಮೂಲ ಸೇವೆಗಳು, ಮೂಲರಚನೆಗಳ ಬೆಳವಣಿಗೆ ಮತ್ತು ಉದ್ಯೋಗಾವಕಾಶ ನಿರ್ಮಾಣ, ಈ ಬಜೆಟ್ ನೀಡಿರುವ ಮುಖ್ಯ ಒತ್ತು. ಕಳೆದ ವರ್ಷ 106 ಕೋಟಿ ರೂ. ಬಜೆಟ್ ಕೊರತೆ ತೋರಿಸಲಾಗಿತ್ತು. ಕೇಂದ್ರದಿಂದ ಅಗತ್ಯ ನೆರವು ಕೇಳುವ ಮಾತ್ರವಲ್ಲದೆ ತನ್ನ ಆಡಳಿತ ಖರ್ಚನ್ನು ಕಡಿತ ಮಾಡಿ ಈ ವರ್ಷದ ಬಜೆಟ್ 15.11 ಕೋಟಿ ರೂ.ಗಳ ಆರಂಭದ ನಿಧಿ ಹೊಂದುವಂತೆ ಮಾಡಿರುವುದು, ಐದನೇ ವೇತನ ಆಯೋಗದಿಂದಾದ ಹೆಚ್ಚಿನ ಖರ್ಚನ್ನು ತೂಗಿಸಿ ಎಡರಂಗ ಸರಕಾರ ತೋರಿಸಿದ ಹಣಕಾಸು ಶಿಸ್ತನ್ನು ಬಿಂಬಿಸುತ್ತದೆ ಎಂದು ಬಾದಲ್ ಚೌಧುರಿ ಹೇಳಿದರು.

ರಾಜ್ಯದ ಬಡತನದ ರೇಖೆಯ ಕೆಳಗಿರುವ 74% ಜನರ ಆರ್ಥಿಕ ಉದ್ಧಾರವನ್ನು ಗಮನದಲ್ಲಿಟ್ಟುಕೊಂಡು ಈ ಬಜೆಟ್ ತಯಾರಿಸಲಾಗಿದೆ ಎಂದು ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಹೇಳಿದ್ದಾರೆ. ಕೃಷಿ ಹಾಗೂ ಅದಕ್ಕೆ ಸಂಬಂಧಪಟ್ಟ ನೀರಾವರಿ, ಸಂಪರ್ಕ, ಬೀಜ, ರಸಗೊಬ್ಬರ, ಕೀಟನಾಶಕ ಹಾಗೂ ಕೃಷಿ ಉತ್ಪನ್ನಗಳ ಮಾರಾಟ ಇವೆಲ್ಲವುಗಳ ಮೇಲೆ ಒತ್ತು ನೀಡಲಾಗಿದೆ. ರಾಜ್ಯದ 85ಶೇ ಜನ ಗ್ರಾಮವಾಸಿಗಳು. ಬಹುಪಾಲು ಜನ ಅರಣ್ಯ ಪ್ರದೇಶಗಳಲ್ಲಿ ಇರುವವರು. ಅವರು ಸದಾ ಕೇಂದ್ರದ 'ಅರಣ್ಯ ರಕ್ಷಣೆ'ಯ ಹೆಸರಲ್ಲಿ ಕಿರುಕುಳ ಅನುಭವಿಸುತ್ತಿದ್ದಾರೆ. ಪರಿಸರ ಸಮತೋಲನಕ್ಕೆ ಶೇ.3 ಅರಣ್ಯ ಸಾಕೆಂದಿದ್ದರೂ ಇಲ್ಲಿನ ಬುಡಕಟ್ಟು ಜನಗಳಿಗೆ ಕೇಂದ್ರ ಸರ್ಕಾರದ ಕಾನೂನುಗಳಿಂದ ಕಿರುಕುಳವಾಗುತ್ತಿವೆ. ಇದರಿಂದಾಗಿ ಕೇಂದ್ರದ ನೀತಿಗಳ ವಿರುದ್ಧ ಅವಿಶ್ರಾಂತ ಹೋರಾಟದೊಂದಿಗೇ ಎಡರಂಗ ಸರ್ಕಾರ ಸಿಕ್ಕ ಎಲ್ಲಾ ಸಂಪನ್ಮೂಲಗಳನ್ನು ಬಳಸಿ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವನ್ನು ನಿವಾರಿಸಿ ರಾಜ್ಯವನ್ನು ಸ್ವಾವಲಂಬಿಯಾಗಿಸಲು ಪ್ರಯತ್ನಿಸುತ್ತಿದೆ. ಆದ್ದರಿಂದಲೇ ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು ಇಳಿಮುಖವಾದರೂ, ಐದನೇ ವೇತನ ಆಯೋಗದ ಶಿಫಾರಸುಗಳಿಂದಾಗಿ 225 ಕೋಟಿ ರೂ. ಹೆಚ್ಚಿನ ಖರ್ಚು ಬಂದರೂ ಎಡರಂಗ ಸರ್ಕಾರ ಈ ಬಜೆಟ್ ಮೂಲಕ ಅಭಿವೃದ್ಧಿ ಮತ್ತು ಜನ ಕಲ್ಯಾಣಕ್ಕೆ ಒತ್ತು ನೀಡುವ ಸಾಹಸಕ್ಕಿಳಿದಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

1995-96 ಹಾಗೂ 1996-97 ರ ನಡುವೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ 6.17ಶೇ ರಷ್ಟು ಏರಿದೆ. ಅದಕ್ಕನುಗುಣವಾಗಿ ತಲಾ ಆದಾಯವೂ ಏರಿದೆ. ಆದರೆ ಈಗಲೂ ಇದು ರಾಷ್ಟ್ರೀಯ ಸರಾಸರಿಗಿಂತ ಕಮ್ಮಿ ಇದೆ ಎಂದು ನೆನಪಿಸಿದ ರಾಜ್ಯ ಹಣಕಾಸು ಮಂತ್ರಿಗಳು ಕೇಂದ್ರದ ಉದಾರ ನೆರವಿನಿಂದ ಮಾತ್ರವೇ ಈ ಹಿಂದುಳಿದ ರಾಜ್ಯವನ್ನು ಈ ಮಟ್ಟದಿಂದ ಮೇಲೆತ್ತಲು ಸಾಧ್ಯ ಎಂದು ತಮ್ಮ ಬಜೆಟ್ ಭಾಷಣದಲ್ಲಿ ಪುನರುಚ್ಚರಿಸಿದರು.

ವಿಶೇಷ ಕ್ರಮಗಳು: ಇದಕ್ಕೆ ಮೊದಲು ಮಾರ್ಚ್ 18 ರಂದು ಸಭೆ ಸೇರಿದ್ದ ರಾಜ್ಯ ಸಂಪುಟ ಕೆಲವು ಪರಿಹಾರ ಕ್ರಮಗಳ ಬಗ್ಗೆ ನಿರ್ಣಯ ಕೈಗೊಂಡಿತು. ಉಗ್ರಗಾಮಿಗಳ ಧಾಳಿಗಳಿಂದ ಗಾಯಗೊಂಡವರಿಗೆ ಹಣಕಾಸು ನೆರವು, ಈಗ ಉಂಟಾಗಿರುವ ಬರ ಪರಿಸ್ಥಿತಿಯಿಂದ ಸಂಕಟಗ್ರಸ್ತವಾಗಿರುವ ಪ್ರದೇಶಗಳ ಜನರಿಗೆ ಪರಿಹಾರ ಇವುಗಳಲ್ಲಿ ಸೇರಿದೆ. ಸಾಮಾನ್ಯವಾಗಿ ವರ್ಷದ ಆರಂಭದಿಂದಲೇ ಮಳೆ ಕಾಣುವ ಈ ರಾಜ್ಯದಲ್ಲಿ ಇದುವರೆಗೆ ಮಳೆ ಬಂದಿಲ್ಲ. ರಾಜ್ಯ ಸರಕಾರ ಇಂತಹ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡಲು, ಗ್ರಾಮೀಣ ಉದ್ಯೋಗವಕಾಶಗಳನ್ನು ವಿಸ್ತರಿಸಲು ನಿರ್ಧರಿಸಲಾಯಿತು. ಅಲ್ಲದೆ ರಾಜ್ಯದ ಕಾಲೇಜು ಹಾಗೂ ವಿ.ವಿ. ಅಧ್ಯಾಪಕರಿಗೆ ಪರಿಷತ್ ಯು.ಜಿ.ಸಿ. ವೇತನ ಶ್ರೇಣಿಗಳ ಪ್ರಯೋಜನ ಒದಗಿಸಬೇಕು ಎಂದೂ ರಾಜ್ಯ ಸರಕಾರ ನಿರ್ಧರಿಸಿರುವುದಾಗಿ ಪ್ರಸಾರ ಮಂತ್ರಿ ಜಿತೇಂದ್ರ ತಿಳಿಸಿದ್ದಾರೆ. ○

ದಿಲ್ಲಿ ಕೊಳಗೇರಿಯಲ್ಲಿ ಬೆಂಕಿ ಆಕಸ್ಮಿಕವಲ್ಲ, ಬುಡಮೇಲು ಕೃತ್ಯ

ಹೀಗೆಂದು ಒಂದು ಅಧ್ಯಯನದಿಂದ ತಿಳಿದುಬಂದಿದೆ. ಮಾರ್ಚ್ 14 ರಂದು ದಿಲ್ಲಿಯ ಸಂಜಯ್ ಅಮರ್ ಕಾಲನಿಯಲ್ಲಿ ನಡೆದ ಬೆಂಕಿ ಪ್ರಕರಣದಲ್ಲಿ 32 ಜನ ಪ್ರಾಣ ಕಳಕೊಂಡರು. ಇವರಲ್ಲಿ ಬಹುಪಾಲು ಬಂಗಾಳಿಗಳು. ಇದು ಬೇಸಗೆಯಲ್ಲಿ ಸಾಮಾನ್ಯವಾಗಿ ಆಗುವ ಬೆಂಕಿ ಆಕಸ್ಮಿಕವಲ್ಲ ಎಂದು ಇಂಡಿಯನ್ ಸೋಶ್ಯಲ್ ಇನ್‌ಸ್ಟಿಟ್ಯೂಟ್‌ನ ಒಂದು ಅಧ್ಯಯನದಿಂದ ಕಂಡು ಬಂದಿದೆ.

ಈ ದುರಂತಕ್ಕೆ ಒಳಗಾದವರು ಮತ್ತು ಪೋಲೀಸರ ಹಾಗೂ ಸ್ಥಳೀಯ ಮುಖಂಡರ ಹೇಳಿಕೆಗಳಲ್ಲಿ ಬಹಳ ಅಂತರ ಕಂಡು ಬಂದಿದೆ. ಇದು ಆಕಸ್ಮಿಕವಲ್ಲ, ಮನುಷ್ಯ ಕೃತ ಅಪಘಾತ ಎಂಬ ಗುಮಾನಿ ಬರುತ್ತದೆ. ಇದೊಂದು ಸಂಘಟಿತ ಯೋಜನಾಬದ್ಧ ಕೆಲಸವಿದ್ದಂತೆ ಕಾಣುತ್ತದೆ. ಈ ಕೊಳಗೇರಿಯ ಬಂಗಾಳೀ ಭಾಷಿಕ ಮುಸ್ಲಿಮ್ ನಿವಾಸಿಗಳ ಮೇಲೆ ಪೋಲೀಸ್ ಅತ್ಯಾಚಾರಗಳ ವಿರುದ್ಧ ನಡೆಯಲಿದ್ದ ಪ್ರತಿಪಕ್ಷಗಳ ಸಭೆಗೂ ಈ ಬೆಂಕಿ ಪ್ರಕರಣಕ್ಕೂ ಸಂಬಂಧವಿದ್ದಂತೆ ಕಾಣುತ್ತದೆ ಎಂದಿರುವ ಈ ಅಧ್ಯಯನ ಈ ಕೊಳಗೇರಿಯಲ್ಲಿ ಪರಸ್ಪರ ಸ್ಫೋಟಿಸುತ್ತಿರುವ ಹಿಂದೂ ಕೋಮುವಾದಿ ಶಕ್ತಿಗಳು ಮತ್ತು ಸಮಾಜಘಾತುಕ ಶಕ್ತಿಗಳು ಹಾಗೂ ದಿಲ್ಲಿ ಪೋಲೀಸ್ ನಡುವೆ ಶಾಮೀಲಿನ ಅಂಶ ತಮ್ಮ ತನಿಖೆಯಿಂದ ತೀವ್ರ ಗಮನಕ್ಕೆ ಬಂದಿದೆ ಎಂದು ಹೇಳಿದೆ.

ಪರಿಹಾರ ವಿತರಣೆಯಲ್ಲೂ ಅತ್ಯಂತ ಹೆಚ್ಚು ಕಷ್ಟಕ್ಕೊಳಗಾದ ವಿಭಾಗಗಳನ್ನು ಉದ್ದೇಶಪೂರ್ವಕವಾಗಿಯೇ ಉಪೇಕ್ಷಿಸಿರುವುದು ಕಂಡುಬಂದಿದೆ ಎಂದೂ ಈ ಅಧ್ಯಯನ ಹೇಳಿದೆ

(ಕೃಪೆ: ಗಣಶಕ್ತಿ ಆನ್‌ಲೈನ್)

ಅಡ್ವಾನಿಯವರೇಕೆ ಕೈಕೈ ಹಿಸುಕುತ್ತಾರೆ?

ದೇಶದ ರಾಜಧಾನಿಯಲ್ಲಿ ವಿಪರೀತಗೊಳ್ಳುತ್ತಿರುವ ದುಷ್ಟ ಅಪಹರಣಗಳನ್ನು ಎಸಗಿದ ಕ್ರಿಮಿನಲ್ ಗಳನ್ನು ಬಂಧಿಸುವಲ್ಲಿ ವಿಫಲರಾಗಿರುವ ದಿಲ್ಲಿ ಪೋಲೀಸರು ಈ ರೀತಿ ಅಪರಾಧಿಗಳು ತೀವ್ರವಾಗಿ ಹೆಚ್ಚುತ್ತಿರುವುದನ್ನು ಪ್ರತಿಭಟಿಸುವವರನ್ನು ಬಂಧಿಸುವಲ್ಲಿ ಮಾತ್ರ ಮುಂದಿದ್ದಾರೆ. ಹಲವು ಮಹಿಳಾ ಸಂಘಟನೆಗಳು ಕ್ರಿಮಿನಲ್ ಕೃತ್ಯಗಳನ್ನು ತಡೆಯುವಲ್ಲಿ ಗೃಹ ಮಂತ್ರಿ ಅಡ್ವಾನಿ ಯವರ ಶೋಚನೀಯ ವಿಫಲತೆಯ ಬಗ್ಗೆ ತಮ್ಮ ಕ್ರೋಧವನ್ನು ವ್ಯಕ್ತಪಡಿಸಲು ಕಛೇರಿಯ ಮುಂದೆ ನಡೆಸಿದ ಸಭೆ ನಡೆಸಿದಾಗ ಮಹಿಳಾ ಸಂಘಟಣೆಯ ಅಧ್ಯಕ್ಷೆ ಕಾಳಿಂಗಿ ದೇಶಪಾಂಡೆ ಪ್ರತಿಭಟನಾಕಾರರ ಪರವಾಗಿ ಮಾತನಾಡುತ್ತ ದಿಲ್ಲಿಯಲ್ಲಿ ಅಪರಾಧಗಳು ಮುಂಬೈ, ಚೆನ್ನೈ, ಕಲ್ಕತ್ತಾಗಳಿಗಿಂತ ಹೆಚ್ಚು ಎಂದು ಮಂತ್ರಾಲಯವೇ ಒಪ್ಪಿಕೊಂಡಿದೆ ಎಂಬುದನ್ನು ನೆನಪಿಸಿದರು. ಮಹಿಳೆಯರು ಮತ್ತು ಮಕ್ಕಳೆ ಮತ್ತೆ ಮತ್ತೆ ಇದಕ್ಕೆ ಹೆಚ್ಚಾಗಿ ಗುರಿಯಾಗುತ್ತಿದ್ದಾರೆ. ಇದರಿಂದ ದಿಲ್ಲಿಯ ಮುಗ್ಧ ನಾಗರೀಕರಲ್ಲಿ ಸಂಪೂರ್ಣ ಅಭದ್ರತೆಯ ಭಾವನೆ ಮೂಡಿದೆ ಎಂದರು.

"ಅಡ್ವಾಣಿ ಹಾತ್ ಕ್ಯೂಂ ಮಲ್ತೇಹೈಂ? ಉನ್ಕೇ ಆಗೇ-ಆಗೇ ಅಪರಾಧೀ ಚಲ್ತೇ ಹೈಂ (ಅಡ್ವಾಣಿ ಕೈ ಹಿಸುಕುತ್ತೀರೇಕೆ? ಅವರ ಮುಂದೆ - ಮುಂದೆ ಅಪರಾಧಿಗಳು ನಡೆಯುತ್ತಾರೆ)

ಅಡ್ವಾಣೀ ರಾಜ್ ಕಾ ಕೀರ್ತಿಮಾನ್
ಬಿತರೇ ಮೇಂ ಹೈ ಔರತ್ ಕೀ ಜಾನ್

(ಅಡ್ವಾಣಿ ರಾಜ್ಯಭಾರದ ದಾಖಲೆ ಮಹಿಳೆಯರ ಪ್ರಾಣಕ್ಕೆ ಬೆದರಿಕೆ)

ಈ ಘೋಷಣೆಗಳು ಅಡ್ವಾಣಿಯವರ ಕಚೇರಿಯೆದುರು ಮೊಳಗಿದವು.

ಪ್ರತಿಭಟನಾಕಾರರ ಪರವಾಗಿ ಸಲ್ಲಿಸಿದ ಮನವಿ ಪತ್ರದಲ್ಲಿ 'ದಿಲ್ಲಿಯ ಗೃಹಿಣಿಗಾಗಲಿ, ವಿದ್ಯಾರ್ಥಿನಿಗಾಗಲಿ, ದುಡಿಯುವ ಮಹಿಳೆಗಾಗಲಿ ಭದ್ರತೆಯಿದೆ ಎಂಬ ಭಾವನೆಯೇ ಇಲ್ಲದಂತಾಗಿದೆ" ಎನ್ನುತ್ತಾ ಇದಕ್ಕೆ ಗೃಹಮಂತ್ರಿಗಳೇ ನೇರ ಹೊಣೆ ಎಂದು ದಿಲ್ಲಿಯ ಮಹಿಳಾ ಸಂಘಟನೆಗಳು ಭಾವಿಸುವುದಾಗಿ ತಿಳಿಸಿದೆ. ಕಾನೂನು ಜಾರಿ ಮಾಡುವ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕ್ರಿಮಿನಲ್‌ಗಳಿಗೆ ಬಹಿರಂಗ ಆಶ್ರಯದಿಂದಾಗಿ ಸಾಮಾನ್ಯ ನಾಗರೀಕರಲ್ಲಿ ಅಸಹಾಯಕತೆಯ, ಭಯದ ಭಾವನೆ ಉಂಟಾಗಿವೆ. ಆದ್ದರಿಂದ ಇತ್ತೀಚೆಗೆ ವರದಿಯಾದ ಅಪರಾಧಗ ಳಲ್ಲಿನ ಎಲ್ಲಾ ಕ್ರಿಮಿನಲ್‌ಗಳನ್ನು ಬಂಧಿಸಿ ಉಗ್ರ ಶಿಕ್ಷೆ ವಿಧಿಸಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಪಡಿಸಲಾಗಿದೆ.

ಜನವಾದಿ ಮಹಿಳಾ ಸಮಿತಿ, ಎನ್.ಎಫ್.ಐ ಡಬ್ಲ್ಯು, ಜಾಗೋರಿ, ಅಂಕುರ್, ಶಕ್ತಿಶಾಲಿನಿ, ಆ್ಯಕ್ಷನ್ ಇಂಡಿಯಾ, ಸಬಲಾ ಸಂಘ ಇತ್ಯಾದಿ ಸಂಘಟನೆಗಳ ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದ್ದರು.

(ಕೃಪೆ: ಗಣಶಕ್ತಿ ಆನ್‌ಲೈನ್)

ಯೆಲ್ಸಿನ್ ದೋಷಾರೋಪಣೆ ವಿಚಾರಣೆ ನಿಲ್ಲಿಸಲು ರಷ್ಯಾ ಪಾರ್ಲಿಮೆಂಟ್ ನಕಾರ

ಯೆಲ್ಸಿನ್ ಮೇಲೆ ದೇಶದ್ರೋಹ ದೋಷಾರೋಪಣೆ ಬಗ್ಗೆ ಏಪ್ರಿಲ್ 15 ರಂದು ಚರ್ಚೆ ಆರಂಭಿಸಲು ಪಾರ್ಲಿಮೆಂಟ್ ನಿರ್ಧರಿಸಿದೆ. ಯೆಲ್ಸಿನ್ ಮೇಲೆ ದೋಷಾರೋಪಣೆ ಪ್ರಕ್ರಿಯೆ ನಿಲ್ಲಿಸಬೇಕೆಂಬ ಸಲಹೆಯನ್ನು ಪಾರ್ಲಿಮೆಂಟ್ ತಿರಸ್ಕರಿಸಿದೆ. ಅವರ ಮೇಲೆ ಐದು ಆಪಾದನೆಗಳನ್ನು ಹೊರಿಸಲಾಗಿದೆ. 1991ರಲ್ಲಿ ಸೋವಿಯತ್ ಒಕ್ಕೂಟದ ವಿಘಟನೆಗೆ ಕಾರಣವಾದದ್ದಕ್ಕೆ, 1993ರಲ್ಲಿ ರಷ್ಯನ್ ಪಾರ್ಲಿಮೆಟ್ ಭವನದ ಮೇಲೆ ಸಶಸ್ತ್ರದಾಳಿ, 1994 ರಲ್ಲಿ ಚೆಚನ್ಯಾ ಮೇಲೆ ದಾಳಿ, ರಶ್ಯಾದ ಸೈನ್ಯವನ್ನು ನಾಶಮಾಡಿದ, ರಶ್ಯಾದ ನರಮೇಧ- ಇದು ಆಪಾದನೆಗಳನ್ನು ಯೆಲ್ಸಿನ್ ಮೇಲೆ ಹೊರಿಸಲಾಗಿದೆ. ರಶ್ಯನ್ ಪಾರ್ಲಿಮೆಂಟು (ಡೂಮಾ) ಈ ದೋಷಾರೋಪಣೆಯನ್ನು ಬಹುಮತದಿಂದ ಸಮರ್ಥಿಸಿದರೂ, ಅಧ್ಯಕ್ಷ ತನ್ನ ಪರ ಸಂವಿಧಾನಾತ್ಮಕ ಶಕ್ತಿ ಬಳಸಿ ತನ್ನ ಅಪಾರ ಅಧಿಕಾರದ ಬಳಕೆ ಮಾಡಿ ಯೆಲ್ಸಿನ್ ಪದಚ್ಯುತಿ ತಪ್ಪಿಸಿಕೊಳ್ಳಬಲ್ಲ. ಆದರೆ ದೇಶದ ಡೂಮಾ ಬಹುಮತದಿಂದ ಅಧ್ಯಕ್ಷರ ಮೇಲೆ ದೋಷಾರೋಪಣೆ ಮಾಡುವ ಸಾಧ್ಯತೆಯು ಆತನಲ್ಲಿ ನಡುಕ ಹುಟ್ಟಿಸಿದೆ.

ಇದಲ್ಲದೆ ಯೆಲ್ಸಿನ್‌ರ ಸಂಬಂಧಿಗಳ ಭ್ರಷ್ಟಾಚಾರದ ಹಲವು ಹಗರಣಗಳು ಬೆಳಕಿಗೆ ಬಂದಿರುವುದು ಈಗಾಗಲೆ ಅದೋಸ್ಥಿತಿಯಲ್ಲಿರುವ ಅಧ್ಯಕ್ಷರ ನೈತಿಕ ಶಕ್ತಿಯನ್ನು ಇನ್ನಷ್ಟು ಕುಂದಿಸಿದೆ. ಯೆಲ್ಸಿನ್‌ರ ಮಗಳು ಸೇರಿದಂತೆ ಕೆಲವು ಸಂಬಂಧಿಗಳು ಕ್ರೆಮ್ಲಿನ್ ಮತ್ತು ಇತರ ಸರಕಾರಿ ಕಟ್ಟಡಗಳ ದುರಸ್ತಿ ಸಂಬಂಧಿಸಿದ ಕಾಂಟ್ರಾಕ್ಟ್‌ಗೆ ಲಂಚ ಪಡೆದು ಸ್ವಿಸ್ ಬ್ಯಾಂಕ್‌ನಲ್ಲಿ ಇಟ್ಟಿರುವ ಬಗ್ಗೆ ಪುರಾವೆ ಇದೆ ಎಂಬ ಸುದ್ದಿ ಹರಡುತ್ತಿದ್ದಂತೆ, ದೇಶದ ಪ್ರಾಸಿಕ್ಯೂಟರ್-ಜನರಲ್ ಮೇಲೆ ಒತ್ತಡ ಹೇರಿ ಆತನ ರಾಜಿನಾಮೆ ತೆಗೆದುಕೊಂಡ ಪ್ರಕರಣ ಯೆಲ್ಸಿನ್‌ಗೆ ಸಾಕಷ್ಟು ಮುಖಭಂಗ ಉಂಟುಮಾಡಿದೆ. ಪ್ರಾಸಿಕ್ಯೂಟರ್ ಜನರಲ್ ರಾಜಿನಾಮೆಯು ಪಾರ್ಲಿಮೆಂಟಿನ ಮೇಲ್ಮನೆ ತಿರಸ್ಕರಿಸಿ, ಯೆಲ್ಸಿನ್ ಮಾನ ಮೂರು ಕಾಸಾಗಿತ್ತು. ಅದು ಸಾಲದೆಂಬಂತೆ ಮರುದಿನ ಪ್ರಾಸಿಕ್ಯೂಟರ್ ಜನರಲ್‌ರ ಹೋಲುವ ಮನುಷ್ಯ ಇಬ್ಬರು ವೇಶ್ಯೆಯರ ಜತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ವಿಡಿಯೊವನ್ನು ಟೆಲಿವಿಷನ್ ಕೇಂದ್ರ ಪ್ರಸಾರ ಮಾಡಿದ್ದು ಅಧ್ಯಕ್ಷರು ಇಳಿದಿರುವ ಹೊಲಸು ಮಟ್ಟಕ್ಕೆ ಹಿಡಿದ ಕನ್ನಡಿಯಾಗಿತ್ತು. ಪ್ರಾಸಿಕ್ಯೂಟರ್ ಜನರಲ್ ತನ್ನ ರಾಜಿನಾಮೆಗೆ ಎಲ್ಲಾ ರೀತಿಯ ಒತ್ತಡ ತರಲಾಗುತ್ತದೆ ಎಂಬ ಹೇಳಿಕೆ ಯೆಲಿನ್‌ರನ್ನು ಸಂಪೂರ್ಣವಾಗಿ ಬಯಲುಮಾಡಿದೆ.

ಯೆಲ್ಸಿನ್ ಈಗ ದೈಹಿಕವಾಗಿಯೂ, ರಾಜಕೀಯವಾಗಿಯೂ ತೀರಾ ಹತಾಶ ಸ್ಥಿತಿಯಲ್ಲಿದ್ದು, ತೀರಾ ತೀವ್ರ ಕ್ರಮ ಕೈಗೊಳ್ಳಬಹುದು ಎಂದು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.



ಪರಾಗುವೆ ಉಪಾಧ್ಯಕ್ಷರ ಕೊಲೆ-ಅಧ್ಯಕ್ಷರ ಪದಚ್ಯುತಿ

ಉಪಾಧ್ಯಕ್ಷರ ಕೊಲೆಯಾಗಿದ್ದು, ಆತನ ಕೊಲೆಗಾರರು ಅಧ್ಯಕ್ಷರು ಮತ್ತು ಮಾಜಿ ಜನರಲ್ ಒಬ್ಬನ ಚಿತಾವಣೆ ಮೇಲೆ ಈ ಕೊಲೆ ಮಾಡಿದ್ದು ಎಂಬ ಆಪಾದನೆ ಮೇಲೆ ಅಧ್ಯಕ್ಷರನ್ನು ಪದಚ್ಯುತಿ ಮಾಡಿದ ವಿಚಿತ್ರ ಘಟನೆ ದಕ್ಷಿಣ ಅಮೇರಿಕದ ಪರಾಗುವೆಯಿಂದ ವರದಿಯಾಗಿದೆ.

ಉಪಾಧ್ಯಕ್ಷ ಲೂಯಿಮರಿಯಾ ಅರ್ಗಾನ ಮತ್ತು ಅಧ್ಯಕ್ಷ ರೌಲ್ ಕುಬಾಸ್ ಇಬ್ಬರೂ ಒಂದೇ ಪಕ್ಷ ಕೊಲರಾಡೊಗೆ ಸೇರಿದವರಾದರೂ, ಅವರ ನಡುವೆ ಆತಂಕ ಇತ್ತು. 1996ರಲ್ಲಿ ಮಿಲಿಟರಿ ಕ್ಷಿಪ್ರಕಾಂತಿ ಆಪಾದನೆ ಮೇಲೆ 10 ಜನರು ಜೈಲುವಾಸ ಅನುಭವಿಸಿದರೂ ಜನರಲ್ ಲಿಯೋ ಅವೀರೊ ಜತೆಸೇರಿ ಅಧ್ಯಕ್ಷರು ಪಿತೂರಿ ಮಾಡಿದ್ದರು ಎಂದು ಆಪಾದಿಸಲ್ಪಟ್ಟರು. ಪಾರ್ಲಿಮೆಂಟ್ ಅಧ್ಯಕ್ಷರ ಮೇಲೆ ದೋಷಾರೋಪಮಾಡಿ ಪದಚ್ಯುತಗೊಳಿಸಲು ಈಗ ಸೆನೆಟ್ ಅಧ್ಯಕ್ಷ ಲೂಯಿಸ್ ಗೊನಸಾಲಿಸ್ ತಾತ್ಕಾಲಿಕ ಅಧ್ಯಕ್ಷರಾಗಿದ್ದಾರೆ.

ಮಾಜಿ ಅಧ್ಯಕ್ಷ ಕುನಸ್ ಬ್ರೆಜಿಲ್‌ಗೆ ಓಡಿಹೋಗಿದ್ದು, ಅಲ್ಲಿ ರಾಜಕೀಯ ಆಶ್ರಯ ಪಡೆದಿದ್ದಾರೆ. ಜನರಲ್ ಲಿವಿಯೋ ಅರ್ಜೆಂಟೈನಾಕ್ಕೆ ಓಡಿಹೋಗಿದ್ದು ಅಲ್ಲಿ ರಾಜಕೀಯ ಆಶ್ರಯ ಪಡೆದಿದ್ದಾರೆ.

ಜನರಲ್ ಪಿನೋಶಿಯನ್ನು ಸ್ಪೈನ್‌ಗೆ ಗಡಿಪಾರು ಮಾಡುವ ತೀರ್ಮಾನ

ಚಿಲಿಯ ಮಾಜಿ ಕುಖ್ಯಾತ ಸರ್ವಾಧಿಕಾರಿ ಜನರಲ್ ಪಿನೋಶಿಯನ್ನು ಬ್ರಿಟನ್ನಿನಲ್ಲಿ ಒಂದಿಷ್ಟು ಯುದ್ಧ ಅಪರಾಧಗಳ ವಿಚಾರಣೆಗಾಗಿ ಸ್ಪೈನ್‌ಗೆ ಗಡಿಪಾರು ಮಾಡುವ ಕೇಸು ಇನ್ನೊಮ್ಮೆ ಆತನ ವಿರುದ್ಧ ತೀರ್ಮಾನ ಆಗಿದೆ. ಬ್ರಿಟನ್‌ನ ಲಾರ್ಡ್ಸ್-ಅಲ್ಲಿನ ಸರ್ವೋಚ್ಚ ಕೋರ್ಟು ಆತನನ್ನು ಸ್ಪೈನ್‌ಗೆ ಗಡಿಪಾರು ಮಾಡಬಹುದು. ಆತನಿಗೆ ಈ ಪ್ರಕರಣದಲ್ಲಿ ಮಾಫಿ ಕೊಡಲಾಗುವುದಿಲ್ಲ ಎಂದು ತೀರ್ಪಿಟ್ಟಿದೆ. ಆದರೆ 1988ರ ಮೊದಲು ಮಾಡಿದ ಅಪರಾಧ ಕೃತ್ಯಗಳಿಗೆ ಇದು ಅನ್ವಯಿಸುವುದಿಲ್ಲ ಎಂಬ ತೀರ್ಪು ಕೊಡುವ ಮೂಲಕ ಪಿನೋಶಿಗೂ ಸ್ವಲ್ಪ ಪರಿಹಾರ ನೀಡಿದೆ. ಅಲ್ಲದೆ ಪಿನೋಶಿಯ ಗಡಿಪಾರು ಬಗ್ಗೆ ಗೃಹ ಸಚಿವರು ಇನ್ನೊಮ್ಮೆ ಪರಿಶೀಲಿಸ ಬಹುದು ಎಂದು ಕೋರ್ಟು ಸಲಹೆ ಮಾಡಿದೆ.

ಪಿನೋಷಿ ಲಾಯರುಗಳು ಈ ಕೇಸನ್ನು ಇನ್ನಷ್ಟು ಎಳೆದು ಆತ ಜೈಲಿಗೆ ಹೋಗುವ ಸಾಧ್ಯತೆಯನ್ನು ವಿಳಂಬಗೊಳಿಸಲು ಪ್ರಯತ್ನಿಸಿದರೂ ಆತ ಬ್ರಿಟನ್‌ನಿಂದ ಚಿಲ್ಲಿಯಂಗೆ ನೇರ ಮರಳುವ ಸಾಧ್ಯತೆ ಕಡಿಮೆಯಾಗಿದೆ. ಕನಿಷ್ಟ ಕೆಲವು ವರ್ಷಗಳ ಜೈಲುವಾಸ ಅನುಭವಿಸುವುದು ಪಿನೋಶಿಯಗೆ ಅನಿವಾರ್ಯವಾಗಬಹುದು.

ಈಗಲೂ ಅಮೇರಿಕದ ಯುದ್ಧದಿಂದ ನರಳುತ್ತಿರುವ ವಿಯೆಟ್ನಾಮಿಯರು

ವಿಯೆಟ್ನಿಯ ಯುದ್ಧ ಮುಗಿದು 24 ವರ್ಷಗಳ ನಂತರದಲ್ಲೂ ಜನ ಯುದ್ಧದ ಪರಿಣಾಮಗಳಿಂದ ಸಾವು, ನೋವು ಅನುಭವಿಸುತ್ತಿದ್ದಾರೆ. ಕ್ವಾಂಟ್ರೀ ಪ್ರಾಂತ್ಯ ಆಗಿನ ಉತ್ತರ-ದಕ್ಷಿಣ ವಿಯಟ್ನಾಂಗಳ ಗಡಿ ಪ್ರದೇಶದಲ್ಲಿದ್ದ ಪ್ರದೇಶವಾಗಿತ್ತು. ಅಲ್ಲಿ ಅತ್ಯಂತ ದೊಡ್ಡ ಸಭೆಯ ಮೈನ್‌ಗಳನ್ನು ಹಾಕಲಾಗಿತ್ತು. ಆಗ ಹುದುಗಿಟ್ಟಿರುವ ಮೈನ್‌ಗಳು ಬಾಂಬುಗಳನ್ನು ಈಗಲೂ ಜನ ಮುಟ್ಟಿದಾಗ, ಎಡವಿದಾಗ ಸಿಡಿದು ಸಾವು, ಅಂಗವಿಕಲತೆಗೆ ಗುರಿಯಾಗುತ್ತಿದ್ದಾರೆ. 1975ರಿಂದ 5400 ಜನ ಸತ್ತಿದ್ದಾರೆ, ಇಲ್ಲವೆ ತೀವ್ರ ಗಾಯಗೊಂಡಿದ್ದಾರೆ. ಯುದ್ಧ ನಿಂತಾಗಿನಿಂದ ಇಂತಹ ಸಿಡಿತಲೆಗಳನ್ನು ಹುಡುಕಿ ನಿಸ್ಸತ್ವಗೊಳಿಸಲು ಕೆಲಸ ನಡೆದಿದ್ದರೂ ಸಂಪನ್ಮೂಲ ಅಭಾವದಿಂದ ಆ ಕೆಲಸ ಪೂರ್ಣವಾಗಿಲ್ಲ. ಉದಾಹರಣೆಗೆ ಕಳೆದ ಒಂದು ವರ್ಷ ಅಮೇರಿಕಾದ ಸ್ವಯಂ-ಸೇವಾ ಸಂಸ್ಥೆಯ ನೆರವಿನಿಂದ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ 80 ಎಕರೆಯಷ್ಟು ಜಾಗದಲ್ಲಿ ಸಾವಿರ ಸಿಡಿತಲೆಗಳನ್ನು ಹುಡುಕಿ ನಿರ್ನಾಮಗೊಳಿಸಲಾಯಿತು. ಅದಕ್ಕೆ ತಗಲುವ ವೆಚ್ಚ 7 ಲಕ್ಷ ಡಾಲರುಗಳು.

ಬರ್ಮದ ವಿರೋಧಿ ನಾಯಕಿ ಸೂಕಿ ಪತಿ ನಿಧನ

ಬರ್ಮದ ಮಿಲಿಟರಿ ಸರ್ಕಾರದ ವಿರುದ್ಧ ಹೋರಾಡುತ್ತಿರುವ ವಿರೋಧಿ ಶಕ್ತಿಗಳ ನಾಯಕಿ ಸೂಕಿಯವರ ಪತಿ ಲಂಡನ್‌ನಲ್ಲಿ ಮರಣ ಹೊಂದಿದ್ದು, ಸೂಕಿ ಅವರ ಕೊನೆ ದಿನಗಳಲ್ಲಿ ಭೇಟಿ ಮಾಡಲು ಸರ್ಕಾರ ಅನುಮತಿ ಕೊಟ್ಟಿರಲಿಲ್ಲ. ಸೂಕಿ ಪತಿ ಬರ್ಮಾ ಭೇಟಿಗೆ ಅನುಮತಿ ಕೋರಿದ್ದು, ಇದಕ್ಕೆ ಅಧಿಕಾರಿಗಳು ಒಪ್ಪಲಿಲ್ಲ. ಸೂಕಿ ಬೇಕಾದರೆ ಲಂಡನ್ನಿಗೆ ಹೋಗಬಹುದು ಎಂದಿದ್ದರು. ಆದರೆ ಒಂದು ಭಾರಿ ಲಂಡನ್‌ಗೆ ಹೋದರೆ ದೇಶಕ್ಕೆ ಬರಲು ಅನುಮತಿಯನ್ನು ಸರ್ಕಾರ ನಿರಾಕರಿಸಬಹುದು ಎಂಬ ಆತಂತದಿಂದ ಸೂಕಿ ಲಂಡನ್‌ಗೆ ಹೋಗಿರಲಿಲ್ಲ.

ಝಪಾಟಿಸ್ಟರಿಗೆ ಜನಮತ ಸಂಗ್ರಹದಲ್ಲಿ ಜಯ

ಮೆಕ್ಸಿಕೊದ ಝಪಾಟಿಸ್ಟಾ ಅಲ್ಲಿನ ಮೂಲನಿವಾಸಿ ರೆಡ್ ಇಂಡಿಯನ್ನರ ಬದುಕಿನ ಮೇಲೆ ಮೆಕ್ಸಿಕನ್ ಸರ್ಕಾರದ ದಾಳಿಯ ವಿರುದ್ಧ ಪ್ರತಿರೋಧದಲ್ಲಿ ಹುಟ್ಟಿದ ಚಳುವಳಿ. ಈ ಮೂಲನಿವಾಸಿ ರೆಡ್ ಇಂಡಿಯನ್ನರು ಮೆಕ್ಸಿಕೊದ ಸುಮಾರು 10 ಕೋಟಿ ಜನಸಂಖ್ಯೆಯ ಶೇಕಡಾ 10 ಇದ್ದಾರೆ. ಅವರು ಸದ್ಯಕ್ಕೆ ಎರಡನೇ ದರ್ಜೆಯ ಪ್ರಜೆಗಳ ಹಾಗೆ ಇದ್ದಾರೆ. ಝಪಾಟಿಸ್ಟಾ ಸಶಸ್ತ್ರ ಹೋರಾಟ, ರಾಜಕೀಯ ಪ್ರಚಾರ ಅವರಿಗೆ ದೇಶದ ರಾಜಕೀಯದಲ್ಲಿ ಒಂದು ಸ್ಥಾನವನ್ನು ತಂದುಕೊಟ್ಟಿದೆ. ಆದರೂ ಎರಡೂವರೆ ವರ್ಷಗಳಿಂದ ಸರ್ಕಾರ ಝಪಾಟಿಸ್ಟರ ಜತೆ ಮಾಡಿದ ಶಾಂತಿ ಒಪ್ಪಂದ ಇನ್ನೂ ಪಾಲಿಸಿಲ್ಲ.

ಆದರೆ ಇತ್ತೀಚೆಗೆ ಝಪಾಟಿಸ್ಟ್ ರಾಜಕೀಯ ವಲಯದಲ್ಲಿ ಜಯಗಳಿಸಿದೆ. ಝಪಾಟಿಸ್ಟ್ ಒತ್ತಡದಿಂದ ರೆಡ್ ಇಂಡಿಯನ್ನರ ಪರಿಸ್ಥಿತಿ ಬಗ್ಗೆ ಜನಮತಸಂಗ್ರಹ ಮಾಡಬೇಕಾಗಿ ಬಯಸಿ ಅದರಲ್ಲಿ ಸ್ಪಷ್ಟ ರಾಜಕೀಯ ಜಯಗಳಿಸಿದೆ.

ಜನಮತಸಂಗ್ರಹಿಸಲು ನಾಲ್ಕು ಪ್ರಶ್ನೆಗಳು ರೆಡ್ ಇಂಡಿಯನ್ನರಿಗೆ ವ್ಯಾಪಕ ನಾಗರಿಕ ಹಕ್ಕು, ಮತ್ತು ಸರ್ಕಾರದಲ್ಲಿ ಪಾಲ್ಗೊಳ್ಳುವ ಶಕ್ತಿ ಕೊಡುವ ಕ್ರಿಯೆಗಳಿಗೆ ಸಂಬಂಧಪಟ್ಟಿದ್ದವು.

ಆರುಲಕ್ಷ ಕೊಸೊವೊರನ್ನು ನಿರಾಶ್ರಿತರಾಗಿ ಮಾಡಿದ ನಾಟೋ ಬಾಂಬ್‌ದಾಳಿ

ಯುಗೋಸ್ಲಾವಿಯದ ಈಸ್ಟರ್ ಕದನವಿರಾಮ ಸಲಹೆಗೆ ನಾಟೋ ಬರ್ಬರ ದಾಳಿಯ ಉತ್ತರ

ನಾಟೋ ಎರಡು ವಾರ ಕಳೆದರೂ ತನ್ನ ಬರ್ಬರ ಬಾಂಬ್ ದಾಳಿಯನ್ನು ಮುಂದುವರೆಸಿದೆ. ಈಗಿನ ಬಾಂಬ್‌ದಾಳಿ ಮಿಲಿಟರಿ ಸ್ಥಾವರಗಳಿಗೆ ಮಾತ್ರ ದಾಳಿಮಾಡುವ ನಾಟಕ ಸಹ ಆಡುತ್ತಿಲ್ಲ. ಸರ್ಬಿಯಾ ಮೊಂಟೆನಿಗ್ರೊದಲ್ಲಿ ಎಲ್ಲಾ ಭಾಗಗಳ ನಾಗರೀಕರ ವಸತಿ ಮೇಲೆ ತೀವ್ರ ದಾಳಿ ಮುಂದುವರೆದಿದೆ.

ಯುಗೋಸ್ಲಾವಿಯಾದ ಮತ್ತು ಸರ್ಬಿಯಾದ ಅಧ್ಯಕ್ಷರುಗಳು ಏಕಪಕ್ಷೀಯವಾಗಿ ಈಸ್ಟರ್ ಹಬ್ಬದ ಪ್ರಯುಕ್ತ ಘೋಷಿಸಿದ ಕದನ ವಿರಾಮವನ್ನು ಅಮೇರಿಕ ಮತ್ತು ನಾಟೋ ತಳ್ಳಿ ಹಾಕಿದೆ. ಬಾಂಬ್‌ದಾಳಿ ಇನ್ನಷ್ಟು ತೀವ್ರಗೊಳಿಸಿದೆ.

ಈಸ್ಟರ್ ಕದನವಿರಾಮವನ್ನು ನಾಟೋ ಪಡೆಗಳು ತಿರಸ್ಕರಿಸಿದ್ದು ಯುಗೋಸ್ಲಾವಿಯಾದ ಮೇಲೆ ಜರ್ಮನಿ ಎರಡನೇ ಮಹಾನ್ ಬಾಂಬ್‌ದಾಳಿ ಆರಂಭ ಮಾಡಿದ ದಿನ ಎನ್ನುವುದು ಅರ್ಥಪೂರ್ಣವಾಗಿತ್ತು.

ಕೊಸೊವೊ ನೆರೆಯ ದೇಶಗಳಿಗೆ ಓಡಿ ಹೋಗುತ್ತಿದ್ದು, ಆರುಲಕ್ಷ ಕೊಸೊವೊ ನೆರೆಯ ದೇಶಗಳಲ್ಲಿ ನಿರಾಶ್ರಿತರಾಗಿದ್ದಾರೆ.



ಬಾಂಬ್ ದಾಳಿಯನ್ನು ಬಾರಿ ಮುತುವರ್ಜಿಯಿಂದ ವ್ಯವಸ್ಥೆಗೊಳಿಸಿದ ನಾಟೋ ಅವರ ಬಗ್ಗೆ ಏನೂ ವ್ಯವಸ್ಥೆ ಮಾಡಿಲ್ಲ. ಕೊಸೊವೊರನ್ನು ರಕ್ಷಿಸಲು ಬಾಂಬು ದಾಳಿ ನಡೆಯುತ್ತಿದ್ದರೂ ಅವರಿಗೆ ಪರಿಹಾರ ಕಾರ್ಯದ ಯಾವುದೇ ಪ್ರಯತ್ನ ನಡೆಯುತ್ತಿಲ್ಲ. ನೆರೆಯ ಅಲ್ಬೇನಿಯಾ ಮುಂತಾದ ದೇಶಗಳು ತಮ್ಮ ಗಡಿಯನ್ನು ಮುಚ್ಚುತ್ತಿವೆ. ನಿರಾಶ್ರಿತರ ಪರಿಹಾರಕ್ಕೆ ಯಾವುದೇ ತುರ್ತಿನ ಯೋಜನೆಯೂ ಇದ್ದಂತಿಲ್ಲ. ಈ ನಡುವೆ ನೆಲದ ಮೇಲೆ ಸೈನ್ಯವನ್ನು ಯುಗೋಸ್ಲಾವಿಯಕ್ಕೆ ಕಳಿಸುವ ಬಗ್ಗೆ ನಾಟೋ ತೀವ್ರವಾಗಿ ಚರ್ಚೆ ನಡೆಸುತ್ತಿದೆ.

ಆದರೆ ನಾಟೋ ಬರ್ಬರ ದಾಳಿಗೆ ಪ್ರತಿಭಟನೆ ವಿರೋಧ ಹೆಚ್ಚುತ್ತಿದೆ. ಅಮೆರಿಕ, ಕ್ಯೂಬಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಕೆನಡಾದ ಕಮ್ಯುನಿಸ್ಟ್ ಪಕ್ಷಗಳು ದಾಳಿಯನ್ನು ತೀವ್ರವಾಗಿ ಖಂಡಿಸಿವೆ. ದಾಳಿ ನಡೆಯುತ್ತಿರುವ ಪ್ರದೇಶಕ್ಕೆ ಬಾಲ್ಕನ್ ಪ್ರದೇಶ ಎಂದು ಕರೆಯುತ್ತಾರೆ. ಬಾಲ್ಕನ್ ಪ್ರದೇಶಕ್ಕೆ ಸೇರಿದ ಯುಗೋಸ್ಲಾವಿಯಾ, ಬಲ್ಗೇರಿಯಾ, ಗ್ರೀಸ್ ರುಮೇನಿಯಾದ ಎಂಟು ಕಮ್ಯುನಿಸ್ಟ್ ಮತ್ತು ಎಡ ಪಕ್ಷಗಳು ಒಂದು ಜಂಟಿ ಹೇಳಿಕೆಯಲ್ಲಿ ನಾಟೋ ದಾಳಿಯನ್ನು ಖಂಡಿಸಿವೆ.

ಬಾಲ್ಕನ್ ಪ್ರದೇಶದ ಜನಗಳ ನಡುವೆ ದಾಯಾದಿ ಜಗಳ ತಂದಿಟ್ಟು ಮಧ್ಯಪ್ರವೇಶ ಮಾಡಿರುವ ಸಾಮ್ರಾಜ್ಯಶಾಹಿ ಆಟ ಸಾಗದಂತೆ ಮಾಡಬೇಕು, ದಾಳಿ ವಿರುದ್ಧ ಹೋರಾಡ ಬೇಕು ಎಂದು ಈ ಜಂಟಿ ಹೇಳಿಕೆ ಕರೆ ನೀಡಿದೆ. ಸಾಮ್ರಾಜ್ಯಶಾಹಿ ಮಧ್ಯಪ್ರವೇಶ ಇಲ್ಲದಿದ್ದರೆ, ಬಾಲ್ಕನ್ ಜನಗಳು ತಮ್ಮ ನಡುವಿನ ಸಮಸ್ಯೆ ತಾವೇ ಬಗೆಹರಿಸುತ್ತಾರೆ ಎಂದು ಹೇಳಿಕೆ ತಿಳಿಸಿದೆ.

ಜರ್ಮನಿ, ಫ್ರಾನ್ಸ್, ಐರ್ಲೆಂಡ್, ಬ್ರಿಟನ್ ಬೆಲ್ಜಿಯಂ, ನೆದರ್‌ಲ್ಯಾಂಡ್ಸ್‌ನ ಕಮ್ಯುನಿಸ್ಟ್ ಪಕ್ಷಗಳು ತಮ್ಮ ದೇಶದ ಸರ್ಕಾರಗಳು ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಅಮೆರಿಕದ, ನಾಟೋದ ಮಿಲಿಟರಿ ದಾಳಿಯಲ್ಲಿ ಭಾಗವಹಿಸಿರುವುದನ್ನು ತೀವ್ರವಾಗಿ ಖಂಡಿಸಿದೆ.

'ಈ ಬಾಂಬ್ ದಾಳಿನಿಲ್ಲಿಸಿ!'



"ಇದು... ಅಮೆರಿಕನ್ ಸಾಮ್ರಾಜ್ಯಶಾಹಿಯ ಸುತ್ತುವರಿಯುವ ರಣನೀತಿಯ ಭಾಗ. ಸುತ್ತುವರಿಯುವ ನೀತಿ ಶೀತ ಸಮರದ ಕಾಲದಲ್ಲಿ ಆರಂಭವಾಗಿತ್ತು. ಸಮಾಜವಾದಿ ಬೆಳವಣಿಗೆಯ ಎಲ್ಲಾ ಸಾಧ್ಯತೆಗಳನ್ನು ನಾಶಮಾಡುವುದು ಇದರ ಉದ್ದೇಶ.... ಯುಗೋಸ್ಲಾವಿಯದ ವಿರುದ್ಧ ಅಮೆರಿಕ ಬಳಸುತ್ತಿರುವ ಒಡೆದು ಆಳುವ ನೀತಿ ನಮ್ಮದೆ ದೇಶದಲ್ಲಿ ಗುತ್ತೇದಾರಿ ಕಾರ್ಪೋರೇಶನ್‌ಗಳು ಅಮೆರಿಕನ್ ಜನರ ವಿರುದ್ಧವು ಬಳಸುತ್ತಿರುವ ಅಸ್ತ್ರ.....


ನಿಮ್ಮ ತೆರಿಗೆಯನ್ನು ಅಮೇರಿಕನ್ ಮಕ್ಕಳ ಮೇಲೆ ಖರ್ಚು ಮಾಡಿ, ಸರ್ಬಿಯನ್ ಮಕ್ಕಳನ್ನು ಕೊಲ್ಲಲಿಕ್ಕೆ ಅಲ್ಲ! ಕೊಸೊವೊದಲ್ಲಿ ಆಂತರಿಕ ಯುದ್ಧ ಹೂಡುತ್ತಿರುವ ಕೆ.ಎಲ್.ಎ.ಗೆ ಶಸ್ತ್ರಾಸ್ತ್ರ ಸರಬರಾಜು ನಿಲ್ಲಿಸಿ! ನಾಟೋವನ್ನು ವಿಸರ್ಜಿಸಿ!"

- ಅಮೆರಿಕದ ಕಮ್ಯುನಿಸ್ಟ್ ಪಕ್ಷ

"ದೇಶಗಳ ಸಾರ್ವಭೌಮತ್ವದ ಕಲ್ಪನೆಯನ್ನು ನಾಶಮಾಡ ಹೊರಟಿದ್ದಾರೆ.

ಈ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶಗಳ ಸಾರ್ವಭೌಮತ್ವ ಬಂಡವಾಳ, ಸರಕು ಮತ್ತು ಪ್ರಾದೇಶಿಕ ಸಮಗ್ರತೆ ಕಾರ್ಮಿಕರ ಮುಕ್ತ ಸಂಚಾರಕ್ಕೆ ತೊಡಕಿನಂತೆ ಕಾಣುತ್ತಿದೆ. ಕಚ್ಚಾ ಸರಕುಗಳು ಮತ್ತು ಕಾರ್ಮಿಕರನ್ನು ಶೋಷಣೆ ಮಾಡಿ ಆರ್ಥಿಕ ಲಾಭ ಗಿಟ್ಟಿಸುವುದಕ್ಕಾಗಿ ವಿಶ್ವದ ಎಲ್ಲಾ ದೇಶಗಳ ಮೇಲೆ ಸೀಮಿತ ಸಾರ್ವಭೌಮತ್ವದ ಕಲ್ಪನೆಯನ್ನು ಹೇರಲಾಗಿದೆ: ಆದ್ದರಿಂದ ವಾಶಿಂಗ್ಟನ್ ಮತ್ತಿತರ ಬಂಡವಾಳಶಾಹಿ ಕೇಂದ್ರಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಒಲವಿರುವ ಶಕ್ತಿಗಳು ಅಧಿಕಾರ ವಹಿಸಿಕೊಳ್ಳುವುದನ್ನು ತಡೆಯುವುದು, ಈಗಾಗಲೇ ಅಧಿಕಾರದಲ್ಲಿದ್ದರೆ ಕಿತ್ತು ಹಾಕುವುದು ಈ ಕಾರ್ಯಾಚರಣೆಗೆ ಅತ್ಯಂತ ಮಹತ್ವ ನೀಡಲಾಗಿದೆ. ಇಲ್ಲಿ ಸ್ವಾತಂತ್ರ್ಯ ಎಂದರೆ ಜನರ ಪರಿಸ್ಥಿತಿ ಅವಶ್ಯಕತೆಗಳಿಗನುಗುಣವಾಗಿ ಸ್ಥಳೀಯ ಉತ್ಪಾದನೆಗೆ ಪರ ಇರುವುದು, ಸಾಮಾನ್ಯ ಜನತೆಯ ಜೀವನಮಟ್ಟವನ್ನು ವೇಗವಾಗಿ ಸುಧಾರಿಸುವುದು. ಈ ಅಂಶವನ್ನು ಗಮನಿಸದಿದ್ದವರು ಮಾತ್ರ ಹೇಳಲು ಸಾಧ್ಯ- ಅಮೆರಿಕದ ವಿದೇಶಿ ನೀತಿ ಗಡಿಬಿಡಿಯ ತಪ್ಪುಗಳು, ಪ್ರಮಾದಗಳು, ಅನರ್ಥಗಳು ಅಂತ. ದೊಡ್ಡ ಬಂಡವಾಳಿಗರು ಹೆಚ್ಚಿನ ಲಾಭದ ಆಸೆಯಲ್ಲಿ ಕೊಟ್ಟಿರುವ ಕೆಲಸಗಳನ್ನು ಅಮೆರಿಕದ ನಾಯಕರು ಸಮರ್ಥವಾಗೇ ನಿರ್ವಹಿಸುತ್ತಿದ್ದಾರೆ."

- ಪ್ರಖ್ಯಾತ ಅಮೆರಿಕನ್ ಚಿಂತಕ
ನೋಮ್ ಚೋಮ್‌ಸ್ಕಿ



ಯುಗೋಸ್ಲಾವಿಯವನ್ನು ಮುಟ್ಟಬೇಡಿ! ಬಾಂಬು ಧಾಳಿ ನಿಲ್ಲಿಸಿ!

ವಿಶ್ವಸಂಸ್ಥೆಯ ಆಶ್ರಯದಲ್ಲಿ ಮಾತುಕತೆ ನಡೆಯಲಿ!

ಈ ಘೋಷಣೆಗಳು ಎಲ್ಲಾ ಭಾರತೀಯ ಜನವಿಭಾಗಗಳಿಂದ ಮೊಳಗಲಿ ಎಂದು ಹಲವು ಎಡ ಪಕ್ಷಗಳ ಮುಖಂಡರು, ಪ್ರಗತಿಪರ ಬುದ್ಧಿಜೀವಿ ಗಳು ಹಾಗೂ ಸಾಮೂಹಿಕ ಸಂಘಟನೆಗಳ ಮುಖಂಡರು ಒಂದು ಮನವಿಯಲ್ಲಿ ಹೇಳಿದ್ದಾರೆ. ಯುಗೋಸ್ಲಾವಿಯಾದ ಮೇಲೆ ನಾಟೋ ಧಾಳಿಯ ವಿರುದ್ಧ ಪ್ರತಿಭಟನಾ ಆಂದೋಲನವನ್ನು ಸೇರಿ ಕೊಳ್ಳಬೇಕು ಎಂದು ಅವರು ಜಂಟಿಯಾಗಿ ಮನವಿ ಮಾಡಿಕೊಂಡಿದ್ದಾರೆ. ಈ ಮನವಿಯ ಪೂರ್ಣಪಾಠವನ್ನು ಇಲ್ಲಿ ಕೊಡಲಾಗಿದೆ.



ನಾಟೋ ಪಡೆಗಳು ಕಳೆದ ಎರಡು ವಾರಗಳಿಂದ ಯುಗೋಸ್ಲಾವಿಯಾದ ಮೇಲೆ ಭೀಕರ ರೀತಿಯಲ್ಲಿ ಧಾಳಿ ನಡೆಸುತ್ತಿವೆ. ಈ ನಗ್ನ ಆಕ್ರಮಣ ಕೊನೆಗೊಳ್ಳುವಂತೆ ಕಾಣುತ್ತಿಲ್ಲ. ಕ್ಷಿಪಣಿಗಳ, ಬಾಂಬುಗಳ ಸುರಿಮಳೆ ಈಗ ಬೆಲ್ ಗ್ರೇಡ್ ನಗರ ಕೇಂದ್ರ ಹಾಗೂ ದೇಶಾದ್ಯಂತ ಮೂಲ ರಚನೆಗಳು ಹಾಗೂ ನಾಗರೀಕ ಸೌಲಭ್ಯಗಳ ಮೇಲೆ ಗುರಿಯಿಟ್ಟಿದೆ. ಸಾಮಾನ್ಯ ಜನ ಜೀವನವನ್ನು ಕುಂಠಿತ ಗೊಳಿಸುವುದು ಇದರ ಉದ್ದೇಶ. ಈಗಾಗಲೇ ಹತ್ತಾರು ಜನ ಹತ್ಯೆಯಾಗಿದ್ದಾರೆ. ನೂರಾರು ಜನ ಗಾಯ ಗೊಂಡಿದ್ದಾರೆ.

ಅಮೆರಿಕಾ ನೇತೃತ್ವದಲ್ಲಿ ನಾಟೋ ಧಾಳಿ ಸಾರ್ವಭೌಮ ದೇಶದ ಮೇಲೆ ಒಂದು ನೇರ ಆಕ್ರಮಣವಲ್ಲದೆ ಬೇರೇನೂ ಅಲ್ಲ. ಅದು ಅಂತರ್ರಾಷ್ಟ್ರೀಯ ವಿಧಿ-ವಿಧಾನಗಳನ್ನು ಉಲ್ಲಂಘಿಸಿದೆ; ಭದ್ರತಾ ಸಮಿತಿಯ ಮಂಜೂರಾತಿ ಪಡೆಯದಿರುವುದರಿಂದ ವಿಶ್ವಸಂಸ್ಥೆಯ ಸನ್ನದನ್ನು ಮೀರಿದೆ, ಅದು ಯುಗೋಸ್ಲಾವಿಯಾದ ಆಂತರಿಕ ವ್ಯವಹಾರಗಳಲ್ಲಿ ಬಹಿರಂಗ ಮಧ್ಯಪ್ರವೇಶ; ಅದು ಅಮೆರಿಕಾ ತನ್ನ ಆದೇಶಗಳನ್ನು ಒಪ್ಪಲು ನಿರಾಕರಿಸುವ ದೇಶಗಳ ಮೇಲೆ ಪ್ರಯೋಗಿಸುವ ಕಾನೂನು ಬಾಹಿರ ಅಧಿಕಾರದ ಒಂದು ನಗ್ನ ಅಭಿವ್ಯಕ್ತಿ.


ಅಮೆರಿಕಾ ನೇತೃತ್ವದಲ್ಲಿ ನಾಟೋ ಶಕ್ತಿಗಳ ಈ ಮಿಲಿಟರಿ ಶಕ್ತಿಯ ಹಾಗೂ ಭಂಡತನದ ಪ್ರದರ್ಶನದಿಂದ ಭಾರತೀಯ ಜನ ಸಿಟ್ಟಿಗೆದ್ದಿದ್ದಾರೆ. ಯುಗೋಸ್ಲಾವಿಯಾ ಜನತೆಯನ್ನು ಶಿಕ್ಷಿಸಿ ಕೊಸೊವೋ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲ. ವಿಶ್ವದ ಜನ ಸಂಖ್ಯೆಯ 40% ರಷ್ಟಾಗುವ ರಶ್ಯಾ, ಚೀಣಾ ಮತ್ತು ಭಾರತ ಬಾಂಬು ಧಾಳಿ ಗಳನ್ನು ನಿಲ್ಲಿಸಲು ನೀಡಿರುವ ಕರೆ ಅಂತರ್ರಾಷ್ಟ್ರೀಯ ಜನಾಭಿಪ್ರಾಯವನ್ನು ಪ್ರತಿನಿಧಿಸಿರುವ ಕರೆ.

ಯುಗೋಸ್ಲಾವಿಯಾದ ಮೇಲೆ ಈ ಧಾಳಿಗೆ ಪ್ರತಿಭಟನೆಗಳು ವಿವಿಧ ಕೇಂದ್ರಗಳಲ್ಲಿ ನಡೆದಿವೆ. ಅಮೆರಿಕಾ ಮತ್ತು ನಾಟೋ ಸರ್ಬಿಯನ್ ಗಣತಂತ್ರವನ್ನು ನಾಶ ಮಾಡಲು ಕಟಿಬದ್ಧವಾಗಿರುವುದರಿಂದ ಅಲಿಪ್ತ ಆಂದೋಲನದಲ್ಲಿ ನಮ್ಮ ಜತೆಗಾರರು ಹಾಗೂ ಪಾರಂಪರಿಕ ಮಿತ್ರರಾಗಿರುವ ಯುಗೋಸ್ಲಾವಿಯಾದ ಜನತೆಯೊಂದಿಗೆ ಸೌಹಾರ್ದ ವ್ಯಕ್ತಪಡಿಸಿ ಒಂದು ಬಲಿಷ್ಟ ಪ್ರತಿಭಟನಾ ಆಂದೋಲನ ಕಟ್ಟಿ ಬೆಳೆಸುವುದು ಅತ್ಯಗತ್ಯವಾಗಿದೆ. ಭಾರತೀಯ ಜನತೆಯ ಎಲ್ಲಾ ವಿಭಾಗಗಳ ದನಿ ಮೊಳಗಲಿ: **ಯುಗೋಸ್ಲಾವಿಯಾವನ್ನು ಮುಟ್ಟಬೇಡಿ! ಬಾಂಬು ಧಾಳಿ ನಿಲ್ಲಿಸಿ! ವಿಶ್ವಸಂಸ್ಥೆಯ ಆಶ್ರಯದಲ್ಲಿ ಮಾತುಕತೆ ನಡೆಸಿ!**

ಈಗ ನಡೆಯುತ್ತಿರುವ ಪ್ರತಿಭಟನಾ ಆಂದೋಲನದಲ್ಲಿ ಸೇರಿಕೊಳ್ಳಬೇಕು ಎಂದು ಭಾರತೀಯ ಜನತೆಯ ಎಲ್ಲಾ ವಿಭಾಗಗಳಲ್ಲಿ ನಾವು ಮನವಿ ಮಾಡಿಕೊಳ್ಳುತ್ತೇವೆ.

ಈ ಮನವಿಗೆ ಸಹಿ ಹಾಕಿದವರು

ಹರ್ಕಿಶನ್ ಸಿಂಗ್ ಸುರ್ಜಿತ್, ಪ್ರಕಾಶ್ ಕಾರಟ್ {ಸಿಪಿಐ(ಎಂ)} ಕೆ.ಪಂಕಜಾಕ್ಷನ್ (ಆರ್.ಎಸ್.ಪಿ), ದೇಬಬ್ರತ ಬಿಸ್ವಾಸ್(ಫಾರ್ವರ್ಡ್ ಬ್ಲಾಕ್), ಸುಮಿತ್ ಸರ್ಕಾರ್, ಎಸ್.ಪಿ.ಶುಕ್ಲಾ, ಉತ್ಸಾ ಪಟ್ನಾಯಕ್, ಡಾ. ನಿರ್ಮಲ್ ಚಂದ್ರ, ಪ್ರಭಾತ್ ಪಟ್ನಾಯಕ್, ಎನ್.ರಾಂ, ಡಾ. ಅರುಣ್ ಘೋಷ್, ಅಂಬ್ರೋಸ್ ಪಿಂಟೋ, ಅಚಿನ್ ವಣಕ್, ತನಿಖಾ ಸರ್ಕಾರ್, ಎಂ.ಕೆ.ಪಂಧೆ(ಸಿಐಟಿಯು), ಕೆ.ಎಲ್.ಮಹೇಂದ್ರ(ಎಐಟಿಯುಸಿ), ಎಸ್.ರಾಮಚಂದ್ರನ್ ಪಿಳ್ಳೆ (ಎಐಕೆ ಎಸ್), ಆತುಲ್‌ಕುಮಾರ್ ಅಂಜನ್ (ಎಐಕೆಎಸ್), ಎ.ವಿಜಯ ರಾಘವನ್ (ಎಐಎಡಬ್ಲ್ಯುಯು), ಪಿ.ಕೆ. ಕೋರಿಯನ್ (ಬಿ.ಕೆ.ಎಂ.ಯು), ಬೃಂದಾ ಕಾರಟ್ (ಎಐಡಿಡಬ್ಲ್ಯುಎ), ಅಮರ್‌ಜಿತ್ ಕೌರ್ (ಎನ್.ಎಫ್.ಐ.ಡಬ್ಲ್ಯು), ಟಿ. ಶ್ರೀನಿವಾಸ್(ಎಐಎಸ್‌ಎಫ್), ಸೋನಿ ತೆಂಗಮರಿ(ಎಐವೈಎಫ್), ಮಹ್ಮದ್ ಸಲೀಂ (ಡಿವೈಎಫ್‌ಐ), ಕೆ. ಎನ್.ಬಾಲಗೋಪಾಲ್ (ಎಸ್.ಎಫ್.ಐ)



ಸೈಕಲ್ ಮೇಲೆ ಇ.ಎಂ.ಎಸ್. ಹಳ್ಳಿಗಳತ್ತ ಇ.ಕೆ. ನಯನಾರ್

ಇಂದಿನ ರಾಜಕಾರಣಿಗಳು ಮೋಜು ಮೇಜವಾನಿಯ ರಾಜಕಾರಣವನ್ನು ನಡೆಸುತ್ತಿದ್ದಾರೆ ಎಂದು ಆತಂಕ ಪಡುತ್ತಿರುವ ಹೊತ್ತಿನಲ್ಲಿ ಸಿಪಿಎಂ ನ ರಾಜಕಾರಣಿಗಳು ಹೇಗೆ ಕಾಳಜಿಯ ರಾಜಕಾರಣ ನಡೆಸಿದ್ದಾರೆ, ನಡೆಸುತ್ತಿದ್ದಾರೆ ಎಂದು ಸಾಹಿತಿಗಳು ಪತ್ರಕರ್ತರು ಮುಕ್ತ ಕಂಠದಿಂದ ಜನರ ಮುಂದೆ ಬಿಡಿಸಿ ಹೇಳುತ್ತಿದ್ದಾರೆ.

ಇಂದಿನ ರಾಜಕಾರಣಿಗಳು ಬಾದಷಹರನ್ನು ಮೀರಿಸುತ್ತಿದ್ದಾರೆ ಎಂದು ರಾಜಕಾರಣಿಗಳ ಆಸ್ತಿಪಾಸ್ತಿಯ ಬಗ್ಗೆ ಲೆಕ್ಕ ಹಾಕಿ ಬರೆದಿರುವ ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಅವರು. ಅದೇ ಸಮಯದಲ್ಲಿ ಕಾಂ|| ಇ.ಎಂ.ಎಸ್. ನಡೆಸಿದ ಸರಳ ರಾಜಕಾರಣವನ್ನು ಪ್ರಶಂಸಿಸಿದ್ದಾರೆ

ಸರಳ ಜೀವನವನ್ನು ನಡೆಸಿದವರಲ್ಲಿ ಇ.ಎಂ.ಎಸ್. ನಂಬೂದರಿಪಾಡ್ ಅಪ್ರತಿಮರು. 1952 ರಲ್ಲಿ ಕೇರಳದ ಮುಖ್ಯಮಂತ್ರಿ ಆಗಿದ್ದಾಗ ತಿಂಗಳಿಗೆ 500 ರೂ ಸಂಬಳ ಪಡೆಯುತ್ತಿದ್ದರು.

ಆ ದಿನಗಳಲ್ಲಿ ನಂಬೂದರಿ ಪಾಡ್ ಅವರು ಸೈಕಲ್ ತುಳಿಯುತ್ತಾ ತಿರುವನಂತಪುರಂ ಬೀದಿಯಲ್ಲಿ ಕೇರಳದ ಸಚಿವಾಲಯಕ್ಕೆ ಹೋಗುತ್ತಿದ್ದ ದೃಶ್ಯ ಚಿರಪರಿಚಿತ.

ಸೈಕಲ್ ಮೇಲೆ ಸವಾರಿ ಮಾಡುವ ಸಾದಾ ಜೀವನ ತಮಗೆ ಸಲ್ಲದೆಂದು, ನಮ್ಮ ಮಂತ್ರಿಗಳು ಈಗ ದುಂದುಗಾರಿಕೆಯ ಜೀವನ ಆರಿಸಿಕೊಂಡಿದ್ದಾರೆ ಎನ್ನುತ್ತಾರೆ ಪಾಟೀಲ ಪುಟ್ಟಪ್ಪ ಅವರು 'ಪ್ರಜಾವಾಣಿ' ಲೇಖನದಲ್ಲಿ.

ಇ.ಕೆ.ನಯನಾರ್ ಅವರ ಜೀವನದ ಬಗ್ಗೆ ಗಮನ ಸೆಳೆದವರು ಖ್ಯಾತ ಕಥೆಗಾರ ಕುಂ. ವೀರಭದ್ರಪ್ಪ

ಬಂಗಾರಪ್ಪನವರಿಗೆ ಬೆರಳಿರುವುದೇ ಚಿನ್ನದ ಉಂಗುರಕ್ಕಾಗಿ. ಆದರೆ ಇ.ಕೆ. ನಾಯನಾರ್ ಅವರಿಗೆ ಕಾಲುಗಳಿರುವುದೇ ಹಳ್ಳಿಗಳತ್ತ ಸಾಗುವುದಕ್ಕಾಗಿ - ಈ ರೀತಿ ಬಣ್ಣಿಸಿದವರು ಕನ್ನಡದ ಖ್ಯಾತ ಕಥೆಗಾರ ಕುಂ. ವೀರಭದ್ರಪ್ಪ ಅವರು. ಕಲ್ಬುರ್ಗಿಯಲ್ಲಿ ಇತ್ತೀಚೆಗೆ ಲೋಹಿಯಾ ಪ್ರಕಾಶನ ಹಮ್ಮಿಕೊಂಡಿದ್ದ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತಾ ಈ ವಿಷಯ ಹೊರಗಿಟ್ಟರು.


ನಮ್ಮ ದೇಶದ ಎಷ್ಟೋ ಮುಖ್ಯಮಂತ್ರಿಗಳು ಇರುವುದು ಅಧಿಕಾರ ಚಲಾಯಿಸಲು, ವಿಲಾಸಕ್ಕಾಗಿ, ಹಣ ಮಾಡಲು ಎಂದು ಹೇಳಿದ ಅವರು ಆದರೆ ಈ ಎಲ್ಲಕ್ಕಿಂತ ಕೇರಳದ ಮುಖ್ಯಮಂತ್ರಿ ಇ.ಕೆ. ನಯನಾರ್ ಭಿನ್ನರಾಗಿದ್ದಾರೆ, ಮುಖ್ಯಮಂತ್ರಿಗಳು ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿದ್ದಾರೆ.

ಇ.ಕೆ. ನಯನಾರರ ಪತ್ನಿ ಶಾಲಾ ಟೀಚರ್. ಅವರನ್ನು ಕೇರಳದ ರಾಜಧಾನಿಗೆ ವರ್ಗ ಮಾಡಿಸಿಕೊಳ್ಳುವಂತೆ ಹಲವರು ಒತ್ತಾಯಿಸಿದರೂ ನಯನಾರ್ ಒಪ್ಪಿಲ್ಲ. ಮುಖ್ಯಮಂತ್ರಿ ಪತ್ನಿ ಟೀಚರು ಕೆಲಸದಲ್ಲಿ ಏಕಿರಬೇಕು ಅಗತ್ಯವೇನಿದೆ ಎಂದು ಪ್ರಶ್ನಿಸಿದವರು ಇದ್ದಾರೆ. ಆದರೆ ಇದಕ್ಕೆ ಇ.ಕೆ. ನಯನಾರ್ ಅವರ ಉತ್ತರ ಒಂದೇ - ಎಲ್ಲರಿಗೂ ಅನ್ವಯವಾಗುವ ಕಾನೂನು ನನ್ನ ಪತ್ನಿಗೂ ಅನ್ವಯವಾಗುತ್ತದೆ.

ನನ್ನ ಪತ್ನಿಯೇ ಮನೆಯ ಆದಾಯದ ಮುಖ್ಯಸ್ಥಂಭ. ಈಕೆ ಈಗ ನಾನು ಮುಖ್ಯಮಂತ್ರಿಯಾಗಿದ್ದೇನೆ ಎಂದು ರಾಜಿನಾಮೆ ನೀಡಿದರೆ ಮುಂದೆ ನಮ್ಮ ಕುಟುಂಬ ಸಾಕುವವರು ಯಾರು? ಎಂದು ಇಕೆಎನ್ ಪ್ರಶ್ನಿಸುತ್ತಾರೆ ಎಂದು ಕುಂ. ವೀರಭದ್ರಪ್ಪ ಅವರು ತಿಳಿಸಿದರು.

ಇ.ಕೆ. ನಯನಾರ್ ಇಂದಿಗೂ ಸಹಾ ಹಳ್ಳಿ ಹಳ್ಳಿಗೆ ಭೇಟಿ ನೀಡುತ್ತಾರೆ. ಹಳ್ಳಿಯ ಆರೋಗ್ಯ, ಶಿಕ್ಷಣದ ಪರಿಸ್ಥಿತಿಯನ್ನು ತಾವೇ ಕಣ್ಣಾರೆ ಕಾಣುತ್ತಾರೆ. ಇದರಿಂದಾಗಿ ಉತ್ತಮ ಪ್ರಜಾಪ್ರಭುತ್ವ ಆಡಳಿತ ನೀಡುವುದೂ ಅವರಿಗೆ ಸಾಧ್ಯವಾಗಿದೆ. ಜನರ ಸಂಕಷ್ಟಗಳು ಅವರಿಗೆ ತಿಳಿದಿವೆ ಎಂದು ಶ್ಲಾಘಿಸಿದರು.

ಜನರ ನೋವು ಬಿಂಬಿಸಿದ ತಕಳಿ ಶಿವಶಂಕರ ಪಿಳ್ಳೆ ನಿಧನ



ಮಲಯಾಳ ಸಾಹಿತ್ಯಕ್ಕೆ ಜನರ ನಿಟ್ಟುಸಿರನ್ನು ಬೆಸೆದ ಖ್ಯಾತ ಸಾಹಿತಿ ತಕಳಿ ಶಿವಶಂಕರ ಪಿಳ್ಳೆ ಅವರು ನಿಧನ ಹೊಂದಿದ್ದಾರೆ.

ಮಲಯಾಳ ಸಾಹಿತ್ಯ ಜನರ ದುಗುಡ ದುಮ್ಮಾನಗಳಿಂದ ದೂರ ನಿಂತಿದ್ದಾಗ ಜನರ ಬದುಕನ್ನು ಸಾಹಿತ್ಯದೊಳಕ್ಕೆ ತಂದ ತಕಳಿ ಶಿವಶಂಕರ ಪಿಳ್ಳೆ ಅವರು ಈ ಕಾರಣಕ್ಕಾಗಿಯೇ ರಾಷ್ಟ್ರ, ಅಂತರ್ರಾಷ್ಟ್ರೀಯ ಖ್ಯಾತಿ ಪಡೆದರು. ತಕಳಿ ಅವರ ಬರಹಗಳಿಂದಾಗಿ ಮಲಯಾಳ ಸಾಹಿತ್ಯ ಹೊಸ ದಿಕ್ಕು ಪಡೆಯಿತು. ಮಾತ್ರವಲ್ಲದೆ ಅದುವರೆಗೂ ಇದ್ದ ಜಡತ್ವವನ್ನು ಕೊಡವಿ ಎದ್ದು ನಿಂತಿತು.

ಕೇರಳದ ಕುಗ್ರಾಮ ಕುಟ್ಟನಾಡಲ್ಲಿ ತಾವು ಕಂಡಂತ ಅನುಭವವೇ ಇವರ ಸಾಹಿತ್ಯದ ಮೂಲ ವಸ್ತುವಾಗಿತ್ತು. ಮೀನುಗಾರ ಜನಾಂಗದ ಮಧ್ಯೆ ಅರಳುವ ಪ್ರೇಮದ ಕಥಾನಕ ಉಳ್ಳ 'ಚೆಮ್ಮೀನ್' (ಕೆಂಪು ಮೀನು) ಬಹುತೇಕ ಎಲ್ಲಾ ಭಾಷೆಗೆ ಅನುವಾದಗೊಂಡಿದೆ. ಇವರ ಸಾಹಿತ್ಯ ಹೇಗೆ ಜನರ ಬದುಕಿನೊಂದಿಗೆ ನೇರ ಸಂಪರ್ಕ ಪಡೆದಿತ್ತು ಎಂಬುದಕ್ಕೆ ಇವರ ಕೃತಿಗಳ ಹೆಸರೂ ಸಾಕ್ಷಿ. 'ತೊಟ್ಟಿಯುಡೆ ಮಕನ್' (ಚಿಂದಿ ಆಯುವವನ ಮಗ), ರಂಡಿ ಡಂಗಾಜಿ (ಎರಡು ಸೇರು ಅಕ್ಕಿ) ತಲೆ ಯೊಡು (ತಲೆಬುರುಡೆ) ತೆಂಡಿವರ್ಗಮ್ (ಭಿಕ್ಷೆ ಬೇಡುವ ವರ್ಗ)

ತನ್ನ ಬದುಕು ಮಾರ್ಕ್ಸ್‌ವಾದದಿಂದ ನಿರ್ದೇಶಿಸಲ್ಪಟ್ಟಿದೆ ಎಂದು ಹಲವಾರು ಸಂದರ್ಭದಲ್ಲಿ ಅವರು ಸಾರಿದ್ದರು. ಆದರೆ ಭಾರತದ ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಅವರು ಸಂಬಂಧ ಹೊಂದಿರಲಿಲ್ಲ.

ಚೆಮ್ಮೀನ್ ಹಾಗೂ ಕಯರ್ ಇವರ ಅತ್ಯಂತ ಜನಪ್ರಿಯ ಕಾದಂಬರಿಗಳು ಚೆಮ್ಮೀನ್ ಕನ್ನಡಕ್ಕೆ 'ಕೆಂಪು ಮೀನು' ಆಗಿ ಅನುವಾದಗೊಂಡಿದೆ. ಕನ್ನಡದ ಖ್ಯಾತ ನಿರ್ದೇಶಕ ಎಂ.ಎಸ್. ಸತ್ಯು ಅವರು ದೂರದರ್ಶನಕ್ಕಾಗಿ ಕಯರ್ ನಿರ್ದೇಶಿಸಿದರು.

'ಜನರು ಬೀದಿಯಲ್ಲಿದಾಗ ರಂಗ ಮಹಲುಗಳನ್ನೊದ್ದು ಕನಸುಗಳ ಕೋಟೆಯನ್ನೊಡೆದು ಭ್ರಮೆಯ ಲೋಕವ ದಾಟಿ ಕಾವ್ಯ ಬಂತು ಬೀದಿಗೆ' ಎಂಬಂತೆ ಸಾಹಿತ್ಯವನ್ನು ಜನರ ಬಳಿಗೆ ತಂದ ತಕಳಿ ಶಿವಶಂಕರ ಪಿಳ್ಳೆ ಅವರಿಗೆ ಜ್ಞಾನಪೀಠ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿತ್ತು. 40 ಕಾದಂಬರಿಗಳು, 600 ಸಣ್ಣಕಥೆಗಳು 2 ಆತ್ಮಕತೆ ಹಾಗೂ ಪ್ರವಾಸ ಕಥನವನ್ನು ತಕಳಿ ಕೊಡುಗೆಯಾಗಿ ನೀಡಿದ್ದಾರೆ.

ತಕಳಿ ಶಿವಶಂಕರ ಪಿಳ್ಳೆ ಅವರ ನಿಧನಕ್ಕೆ 'ಐಕ್ಯರಂಗ' ಸಂತಾಪ ವ್ಯಕ್ತಪಡಿಸುತ್ತದೆ.

ಪತನ ಸನ್ನಿಹಿತವಾದಾಗ 'ಅಗ್ನಿ' ಪರೀಕ್ಷೆ

ಏಪ್ರಿಲ್ 11 ರಂದು ಅಗ್ನಿ-II ರ ಯಶಸ್ವೀ ಪ್ರಯೋಗ ನಡೆಯಿತು. ಇದು ಮಧ್ಯಂತರ ವ್ಯಾಪ್ತಿಯ ಕ್ಷಿಪಣಿಗಳ ಬೆಳವಣಿಗೆಯಲ್ಲಿ ಒಂದು ಮಹತ್ವದ ಹಂತ. ಅಮೆರಿಕಾದ ಒತ್ತಡಗಳಿಗೆ ತಲೆ ಬಾಗದೆ ಭಾರತದ ಸ್ವತಂತ್ರ ಕ್ಷಿಪಣಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಬೇಕು ಎಂದು ಸಿಪಿಐ(ಎಂ) ಸದಾ ಪ್ರತಿಪಾದಿಸುತ್ತಲೇ ಬಂದಿದೆ ಎಂದಿರುವ ಸಿಪಿಐ(ಂ) ಪೊಲಿಟ್‌ಬ್ಯೂರೋ 'ಆದರೆ ವಾಜಪೇಯಿ ಸರಕಾರ ಅಗ್ನಿ ಕ್ಷಿಪಣಿಯ ಅಭಿವೃದ್ಧಿಯನ್ನು ಪರಮಾಣು ಶಸ್ತ್ರೀಕರಣದೊಂದಿಗೆ ಜೋಡಿಸಿದೆ' ಎಂದು ಟೀಕಿಸಿದೆ. ಈ ರೀತಿ ತಳಕು ಹಾಕುವುದರಿಂದ ಪಾಕಿಸ್ತಾನದೊಂದಿಗೆ ಪರಮಾಣು ಶಸ್ತ್ರಾಸ್ತ್ರ ಪೈಪೋಟಿ ಇನ್ನಷ್ಟು ಹೆಚ್ಚುತ್ತದೆ ಎಂದು ಏಪ್ರಿಲ್ 12 ರಂದು ನೀಡಿದ ಹೇಳಿಕೆಯಲ್ಲಿ ಎಚ್ಚರಿಸಿತ್ತು. (ಈಗ ಏಪ್ರಿಲ್ 14 ರಂದು ಪಾಕಿಸ್ತಾನ ತನ್ನ ಮಧ್ಯಂತರ ಕ್ಷಿಪಣಿಯ ಪರೀಕ್ಷಾ ಪ್ರಯೋಗ ನಡೆಸಿದೆಯೆಂಬ ಸುದ್ದಿಯೂ ಬಂದಿದೆ). ಪರಮಾಣು ಶಸ್ತ್ರೀಕರಣದತ್ತ ಹೋಗದೆ ನಮ್ಮ ಸ್ವತಂತ್ರ ಕ್ಷಿಪಣಿ ಮತ್ತು ಪರಮಾಣು ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದು - ಇದು ಬಿಜೆಪಿ ನೇತೃತ್ವದ ಸರಕಾರ ಬರುವವರೆಗೆ ಭಾರತ ಅನುಸರಿಸಿಕೊಂಡು ಬಂದ ಧೋರಣೆ. ವಾಜಪೇಯಿ ಸರಕಾರ ಆ ಧೋರಣೆಯನ್ನು ಕೈಬಿಟ್ಟು ದುಸ್ಸಾಹಸದ ಧೋರಣೆ ಅನುಸರಿಸಿದೆ. ಇದನ್ನು ನಿಲ್ಲಿಸಿ ಮತ್ತೆ ಹಿಂದಿನ ಧೋರಣೆಯನ್ನೇ ಅನುಸರಿಸುವುದು ಅಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ತನ್ನ ಪತನ ಸನ್ನಿಹಿತವಾಗಿದೆ ಎಂಬುದನ್ನು ಕಾಣುತ್ತಿರುವ ವಾಜಪೇಯಿ ಸರಕಾರ ಇದು ತನ್ನ ಇನ್ನೊಂದು ಸಾಧನೆ ಎಂದು ತೋರಿಸುವ ಪ್ರಯತ್ನ ನಡೆಸಿದೆ. ಈ ಮೂಲಕ ಈ ಸಾಧನೆಗೆ ಈ ಹಿಂದೆಯೇ ದೀರ್ಘಕಾಲದಿಂದ ಸತತವಾಗಿ ಗಮನಾರ್ಹ ಕೆಲಸ ನಡೆಯುಕೊಂಡು ಬಂದಿದೆಯೆಂಬುದನ್ನು ಮರೆಮಾಚಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಪೋಖ್ರಾನ್ ಪರೀಕ್ಷಣೆ ನಂತರ ಇದು ಇನ್ನೊಂದು ಆಕ್ರಾಮಕ ಹೆಜ್ಜೆ ಎಂದು ಬಿಂಬಿಸುವ ಅದರ ಪ್ರಯತ್ನ ಮಂದದೃಷ್ಟಿಯದ್ದು, ಇದು ತೀರಾ ಅನಗತ್ಯವಾದ ರಾಜಕೀಯ ತಂತ್ರವಲ್ಲದೆ ಬೇರೇನೂ ಅಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ವಾರದ ವ್ಯಂಗ್ಯಚಿತ್ರ



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ